ಸಂಪುಟ: 05 ಸಂಚಿಕೆ: 177 ಪುಟಗಳು: 08 ಬುಧವಾರ 10 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಸಿಟ್ಟು ಅಹಿಂಸೆಯ ವೈರಿ ಮತ್ತು ಹೆಮ್ಮೆ ಅದನ್ನು ನುಂಗಿ ಹಾಕುವ ದೈತ್ಯ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ದಂಡ ಹಾಕಿಲ್ಲಾ ಅಂತಾ ಖುಷಿಪಡಿ: ಮಹೇಶ್ ಜೋಶಿಗೆ ಹೈ ಚಾಟಿ

• ಉದಯವಾಹಿನಿ, ಬೆಂಗಳೂರು

'ಅವ್ಯವಹಾರಗಳ ಆರೋಪಕ್ಕೆ ಸಂಬಂಧಿಸಿ ವಿಚಾರಣಾಧಿಕಾರಿನೇಮಕ ಮಾಡಿರುವುದನ್ನು ಪ್ರಶ್ನಿಸಲಾದ ರಿಟ್ ಅರ್ಜಿಯನ್ನು ಇತ್ಯರ್ಥಪಡಿಸುವಂತೆ ಏಕಸದಸ್ಯ ನ್ಯಾಯಪೀಠಕ್ಕೆ ನಿರ್ದೇಶಿಸಬೇಕು' ಎಂಬ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಅಧ್ಯಕ್ಷರ ಮನವಿಗೆ ಗರಂ ಆದ ಹೈಕೋರ್ಟ್, ಮೇಲ್ಮನವಿಗೆ ದಂಡ ಹಾಕಿಲ್ಲವಲ್ಲಾ ಅಂತಾ ಖುಷಿಪಡಿ' ಎಂದು ನೀರಿಳಿಸಿತು. 'ಕನ್ನಡ ಸಾಹಿತ್ಯ ಪರಿಷತ್ತಿನ ಅನುದಾನ ಮತ್ತು ಖರ್ಚು–ವೆಚ್ಚಗಳಲ್ಲಿ ಅವ್ಯವಹಾರ ನಡೆದಿದೆ ಎಂಬ ದೂರುಗಳನ್ನು ಆಧರಿಸಿ ಈ ಕುರಿತು ವಿಚಾರಣೆ ನಡೆಸಲು ಬೆಂಗಳೂರು ನಗರ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಆದೇಶ ಹೊರಡಿಸಿದ್ದರು. ಇದನ್ನು ರದ್ದುಪಡಿಸಬೇಕು' ಎಂದು ಕೋರಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿ ವಿಚಾರಣಾ ಅಧಿಕಾರಿಯನ್ನು ನೇಮಕ ಮಾಡಲಾಗಿರುವ ಸ್ವಪ್ರೇರಣಾ ಕ್ರಮ ಸರಿಯಾಗಿದೆ' ಎಂಬ ಅಭಿಪ್ರಾಯದೊಂದಿಗೆ ವಿಚಾರಣಾ ಅಧಿಕಾರಿ ನೇಮಕ ಮಾಡಿದ್ದ ಆದೇಶ ರದ್ದುಪಡಿಸಲು ನಿರಾಕರಿಸಿದ್ದರು.

ಏಕಸದಸ್ಯ ನ್ಯಾಯಪೀಠದ ಈ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಮಹೇಶ್‌ಜೋಶಿ ರಿಟ್ ಮೇಲ್ಮನವಿ ಸಲ್ಲಿಸಿದ್ದರು.

## ಮದ್ದೂರು ಗಲಭೆ – ಕೇಂದ್ರ ಸರ್ಕಾರ ಉರುಳಿಸುವ ಷಡ್ಯಂತ್ರ


• ಉದಯವಾಹಿನಿ, ಬೆಂಗಳೂರು

ಕಳೆದ ವರ್ಷ ನಾಗಮಂಗಲದಲ್ಲಿ ದಾಳಿಯನ್ನು ಮಾಡಿದರು, ಈ ಬಾರಿ ಮದ್ದೂರಿನ ಗಣೇಶನ ಮೆರವಣಿಗೆಯ ಮೇಲೆ ದಾಳಿಯನ್ನು ಮಾಡಿದ್ದಾರೆ. ಈ ರೀತಿಯ ದಾಳಿಯ ಹಿಂದೆ ವ್ಯವಸ್ಥಿತವಾದ ಷಡ್ಯಂತ್ರವಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಅಭಿಪ್ರಾಯ ಪಟ್ಟಿದ್ದಾರೆ. ಹಿಂದೂ ಧಾರ್ಮಿಕ ನಂಬಿಕೆಯ ಮೇಲೆ ದಾಳಿ ಮಾಡಿದಾಗ, ಅದಕ್ಕೆ ಕರ್ನಾಟಕ ಯಾವ ರೀತಿ ಪ್ರತಿಕ್ರಿಯಿಸುತ್ತದೆ, ಹಿಂದೂ ಸಮಾಜ ಯಾವ ರೀತಿ ಪ್ರತಿಕ್ರಿಯಿಸುತ್ತದೆ. ಇದನ್ನೆಲ್ಲಾ ಕೆಲವೊಂದು ಗುಂಪುಗಳು ಸೂಕ್ಷ್ಮವಾಗಿ ಗಮನಿಸುತ್ತಿದೆ. ಅರಾಜಕತೆಯನ್ನು ಸೃಷ್ಟಿಸಲು ಗುಂಪೊಂದು ಕೆಲಸ ಮಾಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಶಂಕಿಸಿದ್ದಾರೆ. ಈ ಷಡ್ಯಂತ್ರದಲ್ಲಿ ಕೇಂದ್ರ ಸರ್ಕಾರವನ್ನು ಉರುಳಿಸುವ ಹುನ್ನಾರವೂ ಇದೆ, ಆಂತರಿಕ ಗಲಭೆಯನ್ನು ಹುಟ್ಟುಹಾಕಿ ಭಾರತದ ಬೆಳವಣಿಗೆಗೆ ಕಲ್ಲು ಹಾಕುವುದು ಇವರ ಉದ್ದೇಶ. ವಿಶ್ವದ ನಾಲ್ಕನೇ ಪ್ರಬಲ ಆರ್ಥಿಕ ಶಕ್ತಿಯಾಗಿ ನಾವು ಪ್ರಗತಿಯಲ್ಲಿದ್ದೇವೆ. ಇದನ್ನು ಸಹಿಸಲು ಸಾಧ್ಯವಾಗದೇ ಇಂತಹ ಕೆಲಸವನ್ನು ಮಾಡಿಸುತ್ತಿದ್ದಾರೆ ಎಂದು ಸಿಟಿ ರವಿ ಆರೋಪಿಸಿದ್ದಾರೆ.

## ಮುಖ್ಯಮಂತ್ರಿ ಮುಂದೆ 'ಕೈ' ಪರಿಷತ್ ಸದಸ್ಯರ ಅಹವಾಲು

• ಉದಯವಾಹಿನಿ, ಬೆಂಗಳೂರು

'ಕನಿಷ್ಠ ಮೂರು ಸಚಿವ ಸ್ಥಾನ, ವಿಶೇಷ ಅನುದಾನ ನೀಡಬೇಕು ಹಾಗೂ ನಮ್ಮ ಅಹವಾಲುಗಳಿಗೆ ಸಚಿವರು ಸ್ಪಂದಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಸ್ವಪಕ್ಷೀಯ ವಿಧಾನ ಪರಿಷತ್ ಸದಸ್ಯರು ಅಲವತ್ತುಕೊಂಡಿದ್ದಾರೆ. ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರ ಜೊತೆ ಮುಖ್ಯಮಂತ್ರಿ ಬುಧವಾರ ಸಭೆ ನಡೆಸಿದರು. ಈ ವೇಳೆ, ಸದಸ್ಯರು ತಮ್ಮ ಬೇಡಿಕೆಗಳನ್ನು ಅವರ ಮುಂದಿಟ್ಟಿದ್ದಾರೆ. ಶಾಸಕರಿಗೆ 50 ಕೋಟಿ ವಿಶೇಷ ಅನುದಾನ ನೀಡಿದಂತೆ ತಮಗೂ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಬೇಕು ಎಂದು ಸದಸ್ಯರು ಮನವಿ ಮಾಡಿದ್ದಾರೆ. ಸಚಿವರ ನಡೆ ವಿರುದ್ಧ ತೀವ್ರ ಅಸಮಾಧಾನ ಹೊರ ಹಾಕಿರುವ ಕೆಲವು ಸದಸ್ಯರು, 'ಸಚಿವರು ನಮ್ಮ ಪತ್ರಗಳಿಗೆ ಮಾನ್ಯತೆ ನೀಡುವುದಿಲ್ಲ. ಭೇಟಿಗೆ ಅವಕಾಶ ನೀಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ದೂರವಾಣಿ ಕರೆಯನ್ನೂ ಸ್ವೀಕರಿಸುವುದಿಲ್ಲ' ಎಂದು ಬೇಸರ ತೋಡಿಕೊಂಡಿದ್ದಾರೆ. ತಮ್ಮ ಅಹವಾಲುಗಳಿಗೆ ಸ್ಪಂದಿಸುವಂತೆ ಸಚಿವರಿಗೆ ಸೂಚನೆ ನೀಡುವುದಾಗಿ ಪರಿಷತ್ ಸದಸ್ಯರಿಗೆ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಗೊತ್ತಾಗಿದೆ. ಪರಿಷತ್‌ನಿಂದ ಸದ್ಯ ಒಬ್ಬರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದೆ.



**ಉಪರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಸಿ.ಪಿ ರಾಧಾಕೃಷ್ಣನ್ ಅವರಿಗೆ ಗೆಲುವು ದೊರೆತ್ತಿದ್ದು 17ನೇ ಉಪರಾಷ್ಟ್ರಪತಿಯಾಗಿ ಆಯ್ಕೆ ಆಗಿದ್ದಾರೆ. 452 ಮಗಳನ್ನು ಪಡೆಯುವ ಮೂಲಕ ಜಯಭೇರಿ ಬಾರಿಸಿದ್ದಾರೆ. ಸದ್ಯ ಉಪರಾಷ್ಟ್ರಪತಿ ಎಲೆಕ್ಷನ್‌ನಲ್ಲಿ ಎನ್‌ಡಿಎ ಅಭ್ಯರ್ಥಿ ಸಿ.ಪಿ ರಾಧಾಕೃಷ್ಣನ್ ಅವರು ಗೆಲುವು ಪಡೆದ ಹಿನ್ನೆಲೆಯಲ್ಲಿ ಎಲ್ಲರೂ ಶುಭಾಶಯಗಳನ್ನು ತಿಳಿಸುತ್ತಿದ್ದಾರೆ.**

# ಉಪರಾಷ್ಟ್ರಪತಿ ರಾಧಾಕೃಷ್ಣನ್



## ರಾಧಾಕೃಷ್ಣನ್‌ಗೆ ದೇಶದ ಎರಡನೇ ಅತ್ಯುನ್ನತ ಹುದ್ದೆ!

1. ದೇಶದ 17ನೇ ಉಪರಾಷ್ಟ್ರಪತಿ ಆಯ್ಕೆ
2. ಎನ್‌ಡಿಎ ಅಭ್ಯರ್ಥಿಯಾಗಿ ಸಿ.ಪಿ.ರಾಧಾಕೃಷ್ಣನ್ ಐಎನ್‌ಡಿಐಎ ಅಭ್ಯರ್ಥಿಯಾಗಿ ನಿವೃತ್ತ ನ್ಯಾ. ಬಿ.ಸುದರ್ಶನ ರೆಡ್ಡಿ ಕಣದಲ್ಲಿ
3. ಅಭ್ಯರ್ಥಿಯೊಬ್ಬರ ಗೆಲುವಿಗೆ 391 ಮತಗಳ ಅಗತ್ಯವಿದೆ.

• ಉದಯವಾಹಿನಿ, ನವದೆಹಲಿ

ಪ್ರಧಾನಿ ಮೋದಿ, ಅಮಿತ್ ಶಾ, ಜೆ.ಪಿ ನಡ್ಡಾ ಸೇರಿದಂತೆ ಬಿಜೆಪಿ, ಎನ್‌ಡಿಯ ಇತರೆ ಪಕ್ಷಗಳ ಸದಸ್ಯರು ನೂತನ ಉಪರಾಷ್ಟ್ರಪತಿಗಳಿಗೆ ಶುಭಾಶಯಗಳನ್ನು ಕೋರುತ್ತಿದ್ದಾರೆ. ಇತ್ತ ವಿರೋಧ ಪಕ್ಷಗಳ ಸದಸ್ಯರು ಕೂಡ ಕಂಗ್ರಾಟ್ಸ್ ಹೇಳುತ್ತಿದ್ದಾರೆ. ಇಂಡಿಯಾ ಅಭ್ಯರ್ಥಿಯಾಗಿದ್ದ ಸುದರ್ಶನ್ ರೆಡ್ಡಿ ಅವರು ಸೋಲು ಅನುಭವಿಸಿದ್ದಾರೆ. ಇವರಿಗೆ ಕೇವಲ 300 ಮತಗಳು ಮಾತ್ರ ಬಿದ್ದಿದ್ದವು. ಹೀಗಾಗಿ ಎನ್‌ಡಿಎ ಅಭ್ಯರ್ಥಿ ಸಿ.ಪಿ ರಾಧಕೃಷ್ಣನ್ ಅವರ ವಿರುದ್ಧ ಸುದರ್ಶನ್ ರೆಡ್ಡಿ ಅವರು ಸೋಲನುಭವಿಸಿದ್ದಾರೆ. ಜಗದೀಪ್ ಧನಕರ್ ಅವರು ಉಪರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇವತ್ತು ಚುನಾವಣೆ ನಡೆಸಲಾಗಿತ್ತು. ಇಂಡಿಯಾ ಒಕ್ಕೂಟದಿಂದ ಸುದರ್ಶನ್ ರೆಡ್ಡಿ ಸ್ಪರ್ಧಿಸಿದ್ದರೇ, ಎನ್‌ಡಿಎ ಅಭ್ಯರ್ಥಿಯಾಗಿ ರಾಧಾಕೃಷ್ಣನ್ ಅವರು ಸ್ಪರ್ಧೆ ಮಾಡಿದ್ದರು.

ಭಾರತದ ಉಪರಾಷ್ಟ್ರಪತಿಗಳಾಗಿ ಸಿ.ಪಿ ರಾಧಾಕೃಷ್ಣನ್ ಅವರು ಆಯ್ಕೆಯಾಗಿದ್ದಾರೆ. ಎನ್‌ಡಿಎ ಅಭ್ಯರ್ಥಿಯಾಗಿ ರಾಧಾಕೃಷ್ಣನ್ ಅವರು ಕಣಕ್ಕೆ ಇಳಿದಿದ್ದರು. ಮೊದಲಿನಿಂದಲೂ ಗೆಲ್ಲುವ ನಿರೀಕ್ಷೆಯಲ್ಲಿದ್ದರು. ಅದರಂತೆ ಮಂಗಳವಾರ ಚುನಾವಣೆಯಲ್ಲಿ ಜಯಗಳಿಸಿದ್ದಾರೆ. ಇನ್ನು ಇಂಡಿಯಾ ಮೈತ್ರಿ ಕೂಟದ ಅಭ್ಯರ್ಥಿ ಆಗಿದ್ದ ಸುದರ್ಶನ್‌ರೆಡ್ಡಿ 300 ಮತಗಳು ಪಡೆದಿದ್ದರು. ಹೀಗಾಗಿ 152 ಮತಗಳ ಅಂತರದಿಂದ ಸೋಲನುಭಸಬೇಕಾಯಿತು.

16ನೇ ಉಪರಾಷ್ಟ್ರಪತಿಗಳಾಗಿದ್ದ ಜಗದೀಪ್ ಧನ್ಕರ್ ಅವರು ಅನಾರೋಗ್ಯದ ಕಾರಣ ನೀಡಿ ಇತ್ತೀಚೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಕೆ ಮಾಡಿದ್ದರು. ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ಉಪರಾಷ್ಟ್ರಪತಿ ಚುನಾವಣೆ ನಡೆಸಲಾಗಿತ್ತು. ಒಟ್ಟು 767 ಮತಗಳ ಪೈಕಿ ವಿಪಕ್ಷಗಳ 14 ಮತಗಳಿಂದ ಅಡ್ಡ ಮತದಾನ ಮಾಡಲಾಗಿದೆ. ಉಳಿದ 752 ಮತಗಳಲ್ಲಿ ಎನ್‌ಡಿಎಗೆ 452 ಮತಗಳು ಹಾಗೂ ಇಂಡಿಯಾ ಒಕ್ಕೂಟಕ್ಕೆ 300 ಮತಗಳು ಬಂದಿವೆ.

1957ರಲ್ಲಿ ತಮಿಳುನಾಡಿನ ತಿರುಪ್ಪರ್‌ನಲ್ಲಿ ಜನಿಸಿದ ರಾಧಾಕೃಷ್ಣನ್ ಅವರು 2024ರ ಜುಲೈನಿಂದ ಮಹಾರಾಷ್ಟ್ರದ ರಾಜ್ಯಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಈ ಹಿಂದೆ 2023ರ ಫೆಬ್ರುವರಿಯಿಂದ 2024ರ ಜುಲೈವರೆಗೆ ಜಾರ್ಖಂಡ್ ರಾಜ್ಯಪಾಲರಾಗಿ ಕೆಲಸ ಮಾಡಿದ್ದರು. ಜಾರ್ಖಂಡ್‌ನ ರಾಜ್ಯಪಾಲರಾಗಿದ್ದ ಅವಧಿಯಲ್ಲಿ ತೆಲಂಗಾಣದ ರಾಜ್ಯಪಾಲ ಮತ್ತು ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಹೆಚ್ಚುವರಿ ಹೊಣೆ ವಹಿಸಿಕೊಂಡಿದ್ದರು. 1998ರಲ್ಲಿ ಕೊಯಮತ್ತೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಅವರು 1999ರಲ್ಲಿ ಅದೇ ಕ್ಷೇತ್ರದಿಂದ ಪುನರಾಯ್ಕೆಯಾಗಿದ್ದರು. 2004ರಿಂದ 2007ರ ವರೆಗೆ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

**ಬಿಜೆಪಿ ಸಂಭ್ರಮಾಚರಣೆ:** ಮೂಲಗಳ ಪ್ರಕಾರ, ಪ್ರಧಾನಿ ಮೋದಿ ಅವರು ಸ್ವಲ್ಪ ಹೊತ್ತಿನಲ್ಲಿ ಪ್ರಹ್ಲಾದ್ ಜೋಶಿ ಅವರ ನಿವಾಸಕ್ಕೆ ತಲುಪಲಿದ್ದಾರೆ. ಭವಿಷ್ಯದ ಉಪಾಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ಅವರನ್ನು ಅಭಿನಂದಿಸಲು ಎಲ್ಲಾ ಸಂಸದರು ಪ್ರಹ್ಲಾದ್ ಜೋಶಿ ಅವರ ಮನೆಗೆ ತಲುಪಲಿದ್ದಾರೆ.


### ರೆಡ್ಡಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ಉಪರಾಷ್ಟ್ರಪತಿ ಚುನಾವಣೆಯ ಮತದಾನಕ್ಕೂ ಮುನ್ನ, ವೈಎಸ್ ಆರ್‌ಪಿ ಅಧ್ಯಕ್ಷ ಜಗನ್‌ಮೋಹನ್ ರೆಡ್ಡಿಯವರು ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಬೆಂಬಲಿಸಿದ್ದಕ್ಕಾಗಿ ಕಾಂಗ್ರೆಸ್ ವಾಗ್ದಾಳಿ ನಡೆಸಿದ್ದು, ಪ್ರಜಾಸತ್ತಾತಕ ಶಕ್ತಿಗಳೊಂದಿಗೆ ನಿಲ್ಲದೆ ದ್ರೋಹ ಬಗೆದಿದೆ ಎಂದು ಆರೋಪಿಸಿದೆ. ಆಂಧ್ರಪ್ರದೇಶದ ಹಿತಾಸಕ್ತಿಗಳ ಮೇಲೆ ಸಿಬಿಐ ಪ್ರಕರಣಗಳ ಭಯದಿಂದ ಆರ್‌ಎಸ್‌ಎಸ್ ಅಭ್ಯರ್ಥಿಯನ್ನು ಬೆಂಬಲಿಸಲು ಆಯ್ಕೆ ಮಾಡಲಾಗಿದೆ. ಆಂಧ್ರಪ್ರದೇಶದ ಜನರು ಈ ದ್ರೋಹವನ್ನು ಮರೆಯುವುದಿಲ್ಲ ಎಂದು ಕಾಂಗ್ರೆಸ್ ನಾಯಕ ಮಾಣಿಕಂ ಟ್ಯಾಗೋರ್ ಎಕ್ಸನಲ್ಲಿ ಪೋಸ್ಟ್‌ನಲ್ಲಿ ಕಿಡಿಕಾರಿದ್ದಾರೆ.




### ಮತ ಚಲಾಯಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ

ಗೌರವಾನ್ವಿತ ಪ್ರಧಾನಮಂತ್ರಿ ಮೋದಿಯವರ ನೇತೃತ್ವದಲ್ಲಿ ನಮ್ಮ ಶ್ರೇಷ್ಠ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಲು ಹಾಗೂ ನಮ್ಮ ರಾಷ್ಟ್ರದ ಪ್ರಗತಿಗೆ ಮಾರ್ಗದರ್ಶನ ನೀಡುವ ಸಂಸ್ಥೆಗಳನ್ನು ಬಲಪಡಿಸಲು ಉಪರಾಷ್ಟ್ರಪತಿ ಚುನಾವಣೆಗೆ ಮತ ಚಲಾಯಿಸಿದ್ದು ಹೆಮ್ಮೆಯ ಕ್ಷಣ ಎಂದು ಎಕ್ಸ್‌ನಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಟ್ವೀಟ್ ಮಾಡಿದ್ದಾರೆ.



## ಸುದರ್ಶನ್ ರೆಡ್ಡಿ ವಿರುದ್ಧ 152 ಮತಗಳ ಗೆಲುವು

### ಸುದರ್ಶನ್ ರೆಡ್ಡಿಗೆ ಆಪ್ ಬೆಂಬಲ



ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಮತ್ತು ಪಕ್ಷವು ಬಿ. ಸುದರ್ಶನ್ ರೆಡ್ಡಿ ಅವರನ್ನು ಬೆಂಬಲಿಸಲು ನಿರ್ಧರಿಸಿದೆ ಎಂದು ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ಹೇಳಿದ್ದಾರೆ, ಅಲ್ಲದೆ ನಮ್ಮ ಸಂಸದರು ಅವರಿಗೇ ಮತ ಹಾಕುತ್ತಾರೆ, ಬಿಜೆಪಿಯಲ್ಲಿ ಕ್ರಾಸ್ ಓಟಿಂಗ್ ಆಗುವ ಸಾಧ್ಯತೆ ಇದ್ದು, ರೆಡ್ಡಿಯವರೇ ಗೆಲ್ಲುವ ಸಾಧ್ಯತೆ ಇದೆ ಎಂದೂ ಅವರು ಹೇಳಿದ್ದಾರೆ. ನಮ್ಮ ಪಕ್ಷದಲ್ಲಿ ಬೇರೆ ಯಾರಿಗೂ ಮತ ಹಾಕುವ ಸಾಧ್ಯತೆ ಇಲ್ಲ. ನಮ್ಮೆಲ್ಲಾ ಮತಗಳು ವಿರೋಧ ಪಕ್ಷದ ಅಭ್ಯರ್ಥಿ ಬಿ. ಸುದರ್ಶನ್ ರೆಡ್ಡಿ ಅವರಿಗೆ ಹೋಗುತ್ತವೆ ಎಂದು ಸಂಜಯ್ ಸಿಂಗ್ ಸ್ಪಷ್ಟಪಡಿಸಿದ್ದಾರೆ. ಸಂವಿಧಾನ ಕ್ಲಬ್ ಚುನಾವಣೆಯಲ್ಲಿ, ಬಿಜೆಪಿ ಸದಸ್ಯರೇ ಕ್ರಾಸ್-ವೋಟಿಂಗ್ ಮಾಡಿದರು. ಮೋದಿ-ಅಮಿತ್ ಶಾ ಅವರ ಅಭ್ಯರ್ಥಿಯ ವಿರುದ್ಧ ಮತ ಹಾಕಿದರು ಎಂದು ಅವರು ಉದಾಹರಣೆ ನೀಡಿದರು.



### ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ

## ರಾಯಚೂರಿನಲ್ಲಿ ನಡೆದ ರಾಜ್ಯ ಪಡಿತರ ವಿತರಕರ ಸಭೆ

• ಉದಯವಾಹಿನಿ, ಬೆಂಗಳೂರು



### ಸಮಸ್ಯೆ ಬಗೆಹರಿಸಲು ಮನವಿ

ಮಂಗಳವಾರ ನಡೆದ ರಾಯಚೂರು ಜಿಲ್ಲಾ ಪಡಿತರ ವಿತರಕರ ಸಭೆಯನ್ನು ಜಿಲ್ಲಾಧ್ಯಕ್ಷರಾದ ಚಂದ್ರಶೇಖರ್ ಕುರುಡಿ ಆಯೋಜನೆ ಮಾಡಲಾಗಿತ್ತು. ಈ ಸಭೆಗೆ ಜಿಲ್ಲೆಯ ಎಲ್ಲಾ ಮಾಲೀಕರು ರಾಜ್ಯ ಸಮಿತಿ ಸದಸ್ಯರಾದ ಓಮಣ್ಣ ದೇವರಾಜು ನಾಗರಾಜು ಎಲ್ಲಾ ತಾಲೂಕು ಅಧ್ಯಕ್ಷರು ಭಾಗವಹಿಸಿದ್ದರು.

ಪ್ರಮುಖವಾದ ಬೇಡಿಕೆ ಇಂದಿರಾ ಕಿಟ್ಟು ಚರ್ಚೆ ಮಾಡಿ ಅಕ್ಕಿಯನ್ನು ಕಡಿತಗೊಳಿಸದೆ ಇಂದಿರಾ ಕಿಟ್ ಕೊಟ್ಟರೆ ನಮಗೆ ಏನು ತೊಂದರೆ ಆಗುವುದಿಲ್ಲ

ಆದ್ದರಿಂದ ಸರ್ಕಾರವು ನಮ್ಮ ಮನವಿಯನ್ನು ಸ್ವೀಕರಿಸಿ 10 ಕೆಜಿ ಅಕ್ಕಿಯನ್ನು ಮುಂದುವರಿಸಬೇಕು ಹಾಗೂ ಕೇಂದ್ರದ ಆಹಾರ ಸಚಿವರಾದ ಪ್ರಲಾಜ್ಯೋತಿ ಸಾಹೇಬರು ಸಭೆಗೆ ಬಂದಾಗ ನಮ್ಮ ಎಲ್ಲಾ ಬೇಡಿಕೆಗಳನ್ನು ಅವರ ಮುಂದೆ ಇಟ್ಟು ಕೇಂದ್ರದಿಂದ ಬರುವ ಎಲ್ಲಾ ಸವಲತ್ತುಗಳನ್ನು ಪಡೆಯಬೇಕೆಂದು ಬಹುಮತದಿಂದ ತೀರ್ಮಾನ ಮಾಡಲಾಗಿದೆ ಇನ್ನು ಸಣ್ಣ ಪುಟ್ಟ ಸಮಸ್ಯೆಗಳು ಇವೆ ಅವನು ಸಹ ಬಗೆಹರಿಸಿ ಕೊಡಬೇಕೆಂದು ಮನವಿ ಮಾಡಿದ್ದಾರೆ.

ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಸಿಕೊಟ್ಟ ಜಿಲ್ಲಾ ಸಮಿತಿಯವರು ಎಲ್ಲಾ ತಾಲೂಕು ಅಧ್ಯಕ್ಷರು ಪದಾಧಿಕಾರಿಗಳು ಮಾಲೀಕರು ಹಾಗೂ ಪತ್ರಿಕಾ ಮಾಧ್ಯಮ ಟಿವಿ ಮಾಧ್ಯಮ ಅವರಿಗೆ ವಂದನೆಗಳನ್ನು ತಿಳಿಸುತ್ತೇವೆ ಮತ್ತು ಇದೇ ದಿನ 3 ಗಂಟೆಗೆ ಯಾದಗಿರಿ ಜಿಲ್ಲೆ ಕಾರ್ಯಕ್ರಮವಿದ್ದು ಹಾಗೂ ನಾಳೆ 10.09.25 ಬುಧವಾರ ಕಲಬುರ್ಗಿ ಜಿಲ್ಲೆಯಲ್ಲಿ ಕಾರ್ಯಕ್ರಮವು ಇರುವುದರಿಂದ ಎಲ್ಲಾ ರಾಜ್ಯ ಕಮಿಟಿ ಸದಸ್ಯರು ಆ ಕಾರ್ಯಕ್ರಮಕ್ಕೆ ಭಾಗವಹಿಸಲು ತೀರ್ಮಾನಿಸಿದ್ದಾರೆ ಎಂದು ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಾಧ್ಯಕ್ಷ ಕೃಷ್ಣಪ್ಪ ತಿಳಿಸಿದರು

## ಪ್ರತಾಪ ಸಿಂಹಗೆ ಮಹಾದೇವಪ್ಪ ಟಾಂಗ್

• ಉದಯವಾಹಿನಿ, ಬೆಂಗಳೂರು



### ಮೈಸೂರು ಸೌಹಾರ್ದತೆಯ ನಾಡು

ಮೈಸೂರು ಸೌಹಾರ್ದತೆಯ ನಾಡು, ಯಾರಿಂದಲೂ ಅಲುಗಾಡಿಸಲು ಸಾಧ್ಯವಿಲ್ಲ! ಎಂದು ಮಾಜಿ ಸಂಸದ ಪ್ರತಾಪ ಸಿಂಹ ಅವರುಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ ಎಚ್.ಸಿ ಮಹಾದೇವಪ್ಪ ಟಾಂಗ್ ನೀಡಿದ್ದಾರೆ. ಬಾನು ಮುಸ್ತಾಕ್ ವಿರುದ್ಧ ಪ್ರತಾಪ್‌ಸಿಂಹ ಕೋರ್ಟ್ ಮೊರೆ ವಿಚಾರವಾಗಿ ಮಾತನಾಡಿ, ಮಾಡುವ ಹಬ್ಬವಾಗಿದೆ.

ಸಾಂಸ್ಕೃತಿಕ ಶೈಕ್ಷಣಿಕ ಪಾರಂಪರಿಕ ವಿಷಯಗಳ ಅಭಿವ್ಯಕ್ತ ಮಾಡೋದು ದಸರಾ. ಧಾರ್ಮಿಕ ವಿಚಾರ ಯಾಕೆ ಬೇಕು ಅಲ್ಲಿ ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಮಾಡ್ರನ್ ಮೈಸೂರು ಕಟ್ಟಿದ್ದು ಯಾಕೆ ಎಂದು ಪ್ರಶ್ನಿಸಿದರು. ದಿವಾನ್ ಪೂರ್ಣಯ್ಯ ಟಿಪ್ಪುಗೆ ದಿವಾನರಾಗಿರಲಿಲ್ವಾ ಬಾನು ಮುಸ್ತಾಕ್ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಯಾವ ವಿಚಾರದಲ್ಲಿ ಗೌರವ ತಂದುಕೊಟ್ಟರು ಯಾವ ವಿಷಯದಲ್ಲಿ ಅವರಿಗೆ ಪ್ರಶಸ್ತಿ ಬಂತು ಎಂಬುವುದು ಪ್ರತಾಪ ಸಿಂಹ ಅವರಿಗೆ ತಿಳಿದಿಲ್ಲವೇ ಜನರು ಎಲ್ಲವನ್ನು ಗಮನಿಸುತ್ತಿದ್ದಾರೆ ಎಂದರು. ಮೈಸೂರು ಸೌಹಾರ್ಧತೆಯ ಹಾಗೂ ಸಾಂಸ್ಕೃತಿಕ ನಾಡಾಗಿದೆ.

ಯಾರು ಬಂದರೂ ಮೈಸೂರನ್ನು ಅಲುಗಾಡಿಸಲು ಸಾಧ್ಯವಿಲ್ಲ ಎಂದು ಮಾಜಿ ಸಂಸದ ಪ್ರತಾಪ್ ಸಿಂಹಗೆ ಡಾ.ಎಚ್.ಸಿ.ಮಹಾದೇವಪ್ಪ ಟಾಂಗ್ ನೀಡಿದರು. ಮದ್ದೂರಿನಲ್ಲಿ ಕೋಮುಗಲಭೆ ಪ್ರಕರಣವಾಗಿ ಮಾತನಾಡಿ, ಕಿಡಿಗೇಡಿಗಳು, ಜವಾಬ್ದಾರಿ ಇಲ್ಲದವರು ಮಾಡಿರುವ ಕೃತ್ಯ. ಇದಕ್ಕಾಗಿಯೇ ನಾವು ಸಂವಿಧಾನದ ಪೀಠಿಕೆ ಓದಿಸೋದಕ್ಕೆ ಮುಂದಾಗಿದ್ದು. ಇವರಿಗೆಲ್ಲಾ ಸಾಮಾಜಿಕ ಪರಿಜ್ಞಾನ ಇಲ್ಲ. ಧರ್ಮದೊಳಗೆ ರಾಜಕೀಯ ಬೆರೆಸಿ ಜನರ ಜೀವನದ ಜೊತೆ ಚೆಲ್ಲಾಟ ಸರಿಯಲ್ಲ. ಸಾರ್ವಜನಿಕ ವ್ಯಕ್ತಿಗಳು, ಸಂಘಟನೆಗಳು ಸಾಮಾಜಿಕ ಜವಾಬ್ದಾರಿಯಿಂದ ಮಾತನಾಡಬೇಕು ಎಂದರು.

ಕೋಮು ಭಾವನೆ ಕೆರಳಿಸುವ ಉದ್ರೇಕಕಾರಿ ಭಾಷಣ ಕೋಮು ಪ್ರಚೋಧನೆ ಪ್ರವೃತ್ತಿ ಯಾವ ಧರ್ಮದವರು ಮಾಡಲಿ ಖಂಡನೀಯ. ಕಲ್ಲು ಯಾರೇ ಎಸೆದಿದ್ದರೂ ಖಂಡನೀಯ, ಶಿಕ್ಷೆಗೆ ಅರ್ಹರು. ಆದರೆ ಬೆಂಕಿ ಸುರಿಯುವ ಕೆಲಸ ಮಾಡಬಾರದು. ಇದು ಅದಕ್ಕಿಂತ ಹೆಚ್ಚು ಅಪಾಯಕಾರಿ ಎಂದು ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದರು.

# ಪಾಕಿಸ್ತಾನ್ ಜಿಂದಾಬಾದ್ ಕೂಗಿಸುವುದು ಕಾಂಗ್ರೆಸ್ ಸರ್ಕಾರದ ಅಜೆಂಡಾ!

### ಈದ್ ಮಿಲಾದ್ ಮೆರವಣಿಗೆಯಲ್ಲೂ 'ಪಾಕಿಸ್ತಾನ್ ಜಿಂದಾಬಾದ್' ಕೂಗಿರುವ ಘಟನೆ ಕಡು ದೇಶದ್ರೋಹ ಕೃತ್ಯ

• ಉದಯವಾಹಿನಿ, ಬೆಂಗಳೂರು

ಪಾಕಿಸ್ತಾನ್ ಜಿಂದಾಬಾದ್ ಕೂಗಿಸುವುದು ಕಾಂಗ್ರೆಸ್ ಸರ್ಕಾರದ ಅಜೆಂಡಾ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.

ಭದ್ರಾವತಿಯಲ್ಲಿ ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ವಿಧಾನಸೌಧದಲ್ಲಿಯೇ 'ಪಾಕಿಸ್ತಾನ್ ಜಿಂದಾಬಾದ್' ಕೂಗಿದ ಕಾಂಗ್ರೆಸ್ ನಿಂದ ಉತ್ತೇಜನ ಪಡೆದ ರಾಷ್ಟ್ರದ್ರೋಹಿ ದುಷ್ಕರ್ಮಿಗಳು ಈಗ ರಸ್ತೆ–ರಸ್ತೆಗಳಲ್ಲಿ ದೇಶದ್ರೋಹಿ ಘೋಷಣೆಗಳನ್ನು ಕೂಗಲು ಆರಂಭಿಸಿದ್ದಾರೆ. ಇದೆ ನಿಟ್ಟಿನಲ್ಲಿ ನೆನ್ನೆ ಭದ್ರಾವತಿಯಲ್ಲಿ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲೂ 'ಪಾಕಿಸ್ತಾನ್ ಜಿಂದಾಬಾದ್' ಕೂಗಿರುವ ಘಟನೆ ಕಡು ದೇಶದ್ರೋಹ ಕೃತ್ಯವಾಗಿದೆ.




ಧರ್ಮಸ್ಥಳವಾಯಿತು, ಸಾಂಪ್ರದಾಯಿಕ ತಾಯಿ ಚಾಮುಂಡಿ ದಸರಾ ಉತ್ಸವಕ್ಕೆ ಕಳಂಕ ಹಚ್ಚಲು ನಿರ್ಧರಿಸಲಾಯಿತು, ಮದ್ದೂರು ಹಾಗೂ ರಾಜ್ಯದ ಇತರೆಡೆಗಳಲ್ಲಿ ಗಣೇಶೋತ್ಸವದ ಮೇಲೆ ಕಲ್ಲು ತೂರಿಸಿ ಕರ್ನಾಟಕದ ಶಾಂತಿ ಹದಗೆಡಿಸಲು ಹೊರಟಿದ್ದಾರೆ ಎಂದು ಕಿಡಿಕಾರಿದ್ದಾರೆ.

ಕರ್ನಾಟಕವನ್ನು ಕಾಂಗ್ರೆಸ್ ಸರ್ಕಾರ ಏನು ಮಾಡಲು ಹೊರಟಿದೆ ಈ ರೀತಿಯ ದೇಶದ್ರೋಹಿ ಘೋಷಣೆ ಕೂಗಿದವರನ್ನು ಕೂಡಲೇ ಬಂಧನ ಮಾಡಿ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಪಡಿಸುತ್ತೇನೆ ಎಂದು ಟ್ವಿಟ್ಟರ್ ನಲ್ಲಿ ಹೇಳಿಕೊಂಡಿದ್ದಾರೆ.

**ಬಿಜೆಪಿ ವಿರುದ್ಧ ಎಚ್‌ಕೆ ಪಾಟೀಲ್ ಕಿಡಿ**

ಇನ್ನು ಇದೇ ವಿಚಾರವಾಗಿ ಸಚಿವ ಎಚ್‌ಕೆ ಪಾಟೀಲ್, ಮುಸ್ಲಿಂ ಓಲೈಕೆಯಿಂದಾಗಿ ಮದ್ದೂರು ಕಲ್ಲು ತೂರಾಟ ಎಂಬ ಬಿಜೆಪಿ ಆರೋಪ ವಿಚಾರವಾಗಿ ಮಾತನಾಡಿ, ಬಿಜೆಪಿಯವರು ಧರ್ಮ ಸಂಘರ್ಷ ಆಗಲಿ ಅಂತ ಸಮಾಜದಲ್ಲಿ ಒಡಕು ಮೂಡಿಸ್ತಿದ್ದಾರೆ. ಸಮಾಜದಲ್ಲಿ ಒಡಕು ತಂದು ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡ್ತಿದ್ದಾರೆ ಎಂದು ಆರೋಪಿಸಿದರು. ಅವರು ಏನೇನೋ ಮಾಡೋದಿಕ್ಕೆ ಪ್ರಯತ್ನ ಮಾಡ್ತಿದ್ದಾರೆ, ಅದು ಸಾಧ್ಯವಾಗ್ತಿಲ್ಲ. ಧರ್ಮಸ್ಥಳ ವಿಚಾರದಲ್ಲೂ ಏನೇನೋ ಮಾಡ್ತಿದ್ದಾರೆ. ಧರ್ಮದ ಹೆಸರಲ್ಲಿ ಹೋರಾಟ ಮಾಡಲು ಪ್ರಯತ್ನ ಪಡ್ತಿದ್ದಾರೆ

ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ ಯಾರು ಎಂಬುವುದನ್ನು ಬಿಜೆಪಿ ಹೇಳಲಿ ಎಂದು ಸವಾಲು ಹಾಕಿದರು.



### ಬಿಜೆಪಿ ವಿರುದ್ಧ ಎಚ್‌ಕೆ ಪಾಟೀಲ್ ವಾಗ್ದಾಳಿ

ಮದ್ದೂರು ಗಲಾಟೆ ವಿಚಾರ ಗೃಹ ಸಚಿವರು ನೋಡ್ತಿದ್ದಾರೆ, ಆ ಸಮಸ್ಯೆ ಬೇಗ ಬಗೆಹರಿಯುತ್ತೆ. ಕಾಂಗ್ರೆಸ್ ಯಾರ ತುಷ್ಟೀಕರಣ ಮಾಡ್ತಿದೆ ರಾಜ್ಯದ ಲೇಖಕಿ ಬಾನು ಮುಷ್ತಾಕ್‌ರಿಗೆ ದಸರಾ ಅತಿಥಿ ಮಾಡಿದರೆ ಅದು ಓಲೈಕೆನಾ ಈ ರೀತಿಯ ಭಾವನೆ ಸರಿಯಲ್ಲ, ನಿಮ್ಮ ರಾಷ್ಟ್ರೀಯ ಮನೋಭಾವ ಸರಿಯಲ್ಲ. ಸಮಾಜ ಒಡೆಯುವ ಬಿಜೆಪಿ ಪ್ರಯತ್ನ ಬಿಜೆಪಿಗೇ ದುಬಾರಿ ಆಗಲಿದೆ, ಇದನ್ನು ಅವರು ಗಮನದಲ್ಲಿರಿಸಿಕೊಳ್ಳಬೇಕು ಎಂದು ಬಿಜೆಪಿ ವಿರುದ್ಧ ಎಚ್‌ಕೆ ಪಾಟೀಲ್ ವಾಗ್ದಾಳಿ ನಡೆಸಿದರು.

ಎನ್‌ಐಎ ತನಿಖೆ ಆಗಲಿ ಅಂತಿದ್ದಾರೆ, ಅವರ ಉದ್ದೇಶ ಏನು, ಆ ಉದ್ದೇಶ ಸಫಲ ಆಗೋದಿಲ್ಲ. ಜನ ಎಲ್ಲಾ ಗಮನಿಸ್ತಿದ್ದಾರೆ. ನಿಮ್ಮವರೇ ಪ್ರಾರಂಭ ಮಾಡಿ ಅದನ್ನು ಕಾಂಗ್ರೆಸ್ ಮೇಲೆ ಹಾಕ್ತೀರಿ. ಒಂದುಕಡೆ ಧರ್ಮಸ್ಥಳ ಹೋಗಿ ಬೆಂಬಲ ಕೊಡ್ತೀರಿ, ಇನ್ನೊಂದು ಕಡೆ ಧರ್ಮಸ್ಥಳ ವಿರುದ್ಧ ಹೋರಾಟ ಮಾಡ್ತಿದ್ದವರ ಬಳಿ ಹೋಗಿ ಆರ್ಥಿಕ ಬೆಂಬಲ ಘೋಷಣೆ ಮಾಡ್ತೀರಿ. ಇದೇನು ದ್ವಂದ್ವ ಬಿಜೆಪಿಯದ್ದು, ರಾಜಕೀಯ ದೊಂಬಬರಾಟ ಇದು ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹11,029/Gram24ct ₹10,110/Gram22ct ಬೆಳ್ಳಿ: ₹130.00/Gram

### ನಾನು ಮದ್ದೂರಿಗೆ ಬರೋ ಮುನ್ನ, ಮುಸಲ್ಮಾನ ಗೂಂಡಾಗಳನ್ನು ಬಂಧಿಸಿ ..: ಸರ್ಕಾರಕ್ಕೆ ಯತ್ನಾಳ್ ವಾರ್ನ್!

# ಯತ್ನಾಳ್ ಮದ್ದೂರು ಭೇಟಿಗೆ ಬೆಂಬಲಿಗರ ಕರೆ

• ಉದಯವಾಹಿನಿ, ಮದ್ದೂರು

ಗಣೇಶ ವಿಸರ್ಜನೆ ವೇಳೆ ಉಂಟಾದ ಗಲಭೆಯಿಂದಾಗಿ, ಪಟ್ಟಣದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ಮಾಜಿ ಸಂಸದ ಪ್ರತಾಪ್ ಸಿಂಹ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಿಂದೂ ಕಾರ್ಯಕರ್ತರು ಯತ್ನಾಳ್ ಪರ ಬೆಂಬಲ ವ್ಯಕ್ತ ಪಡಿಸಿ ಅವರಿಗೆ ಮದ್ದೂರಿಗೆ ಬರುವಂತೆ ಆಗ್ರಹಿಸಿದ್ದರು. ಈ ಬಗ್ಗೆ ಯತ್ನಾಳ್ ಎಕ್ಸ್‌ನಲ್ಲಿ ಟ್ವೀಟ್ ಮಾಡಿ ಮಾಹಿತಿ ಹಂಚಿಕೊಂಡಿದ್ದಾರೆ. ಹಿಂದೂ ಸಮಾಜ ಕರೆದರೆ ಬರದೇ ಇರಲು ಸಾಧ್ಯವೇ ಶಾಸಕ ಬಸವನಗೌಡ ಆರ್ ಪಾಟೀಲ್ ಯತ್ನಾಳ್ ತಮ್ಮ ಎಕ್ಸ್ ಖಾತೆಯಲ್ಲಿ ಮದ್ದೂರಿಗೆ ತಾವು ಹೋಗುವ ಬಗ್ಗೆ ಪರೋಕ್ಷವಾಗಿ ಮಾಹಿತಿಯನ್ನು ನೀಡಿದ್ದಾರೆ.

ಮದ್ದೂರಿನಲ್ಲಿ ಪ್ರತಾಪ್ ಸಿಂಹ ಮಾತನಾಡುತ್ತಿರುವ ವೇಳೆ ಹಿಂದೂ ಸಂಘಟನೆಯ ಕಾರ್ಯಕರ್ತರೆಲ್ಲರೂ, ಕೈ ಮೇಲೆತ್ತಿ ಜೋರಾಗಿ ಯತ್ನಾಳ್, ಯತ್ನಾಳ್ ಎಂದು ಕೂಗುತ್ತಿದ್ದರು. ಆಗ ಮಾತನಾಡಿದ ಪ್ರತಾಪ್ ಸಿಂಹ, ಸದ್ಯದಲ್ಲೇ ಹಿಂದೂ ಹುಲಿ ಯತ್ನಾಳ್ ಅವರು ಬರ್ತಾರೆ. ಹಿಂದೂ ಯುವಕರನ್ನು ಬಂಧಿಸಿದ್ದರೆ ಅವರ ಬಿಡುಗಡೆ ಮಾಡಬೇಕು ಎಂದು ಮಾತನಾಡಿರುವ ವಿಡಿಯೋ ಹಂಚಿಕೊಂಡು ಯತ್ನಾಳ್ ಟ್ವೀಟ್‌ಮಾಡಿದ್ದಾರೆ.

**ಯತ್ನಾಳ್ ಟ್ವೀಟ್:** ಯತ್ನಾಳ್ ಮಾಡಿರುವ ಟ್ವೀಟ್‌ನಲ್ಲಿ ಹೀಗಿದೆ, ಮಂಡ್ಯದ ಮದ್ದೂರಿಗೆ ಸದ್ಯದಲ್ಲೇ ಭೇಟಿ ನೀಡುತ್ತೇನೆ, ಮದ್ದೂರು ಹಿಂದೂಗಳು ಯಾವುದಕ್ಕೂ ಹೆದರಬೇಡಿ, ಎದೆಗುಂದಬೇಡಿ, ನಿಮ್ಮೊಂದಿಗೆ ಸಂಪೂರ್ಣ ಹಿಂದೂ ಸಮಾಜ ನಿಂತಿದೆ. ನಾನು ಮದ್ದೂರಿಗೆ ಬರುವ ಮುನ್ನವೇ ಕಲ್ಲು ಹೊಡೆದ ಮುಸಲ್ಮಾನ ಗೂಂಡಾಗಳ ಹೆಡೆಮುರಿ ಕಟ್ಟಿ, ಜೈಲಿಗೆ ತಳ್ಳಬೇಕು. ಇಲ್ಲದಿದ್ದರೇ ಪ್ರತಿಭಟನೆ ಇನ್ನು ತೀವ್ರ ಸ್ವರೂಪ ಪಡೆಯುತ್ತದೆ ಎಂದು ಸರ್ಕಾರಕ್ಕೆ ಶಾಸಕ ಯತ್ನಾಳ್ ಸವಾಲ್ ಹಾಕಿದ್ದಾರೆ.


ಉದಯವಾಹಿನಿ ಚಿತ್ರ



**ಗಲಾಟೆ ನಡೆದ ಸ್ಥಳಕ್ಕೆ ಶೀಘ್ರದಲ್ಲಿ ಭೇಟಿ**

**ಮದ್ದೂರಿಗೆ ಸದ್ಯದಲ್ಲೇ ಯತ್ನಾಳ್ ಅವರು ಬರುತ್ತಾರೆ ಎಂದು ಸೋಮವಾರ ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದ್ದರು. ಆ ಬೆನ್ನಲ್ಲೇ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಶಾಸಕ ಯತ್ನಾಳ್ ತಾವು ಮದ್ದೂರಿನಲ್ಲಿ ಗಲಾಟೆ ನಡೆದ ಸ್ಥಳಕ್ಕೆ ಶೀಘ್ರದಲ್ಲಿ ಭೇಟಿ ಕೊಡುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಜೊತೆಗೆ ತಪ್ಪಿತಸ್ಥರನ್ನು ಬೇಗ ಬಂಧಿಸದಿದ್ದರೆ ಉಗ್ರ ಪ್ರತಿಭಟನೆ ಮಾಡುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ.**

**ಬಿಜೆಪಿ ಕಾರ್ಯಕರ್ತರಿಂದ ಪ್ರತಿಭಟನೆ:** ಮದ್ದೂರು ಪಟ್ಟಣದಲ್ಲಿಉದ್ವಿಗ್ನ ಪರಿಸ್ಥಿತಿಗೆ ಕಾರಣರಾದ ಗಲಭೆಕೋರರನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ನಗರದಲ್ಲಿ ಮಂಗಳವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾವಣೆಗೊಂಡ ಪ್ರತಿಭಟನಾಕಾರರು ಕೆಲವೊತ್ತು ಧರಣಿ ಕುಳಿತು ಪ್ರತಿಭಟಿಸಿ ಘೋಷಣೆ ಮೊಳಗಿಸಿದರು. ಬಳಿಕ ಡಿಸಿ ಕಚೇರಿ ಸಿಬ್ಬಂದಿ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಗಣೇಶ ಮೂರ್ತಿ ಮೆರವಣಿಗೆ ವೇಳೆ ಮಸೀದಿಯ ಒಳಗಿನಿಂದಲೇ ಕಲ್ಲುತೂರಾಟ ನಡೆಸಿದ್ದಾರೆ. ಗಲಭೆ ನಡೆಸಲೆಂದೇ ಪೂರ್ವ ನಿಯೋಜಿತವಾಗಿ ಸ್ಥಳೀಯ ಹಾಗೂ ಹೊರ ಜಿಲ್ಲೆಯ ಮುಸ್ಲಿಂ ಗುಂಡಾಗಳು ಕಲ್ಲುತೂರಾಟದ ಕುಕೃತ್ಯವೆಸಗಿದ್ದಾರೆ, ಎಂದು ಆರೋಪಿಸಿದರು.

ಕಲ್ಲುತೂರಾಟದ ಹಿಂದೆ ಕೆಲ ಮೂಲಭೂತ ಸಂಘಟನೆಗಳು ಭಾಗಿಯಾಗಿರುವ ಅನುಮಾನ ಮೂಡಿದೆ. ಆದರೆ, ಕಲ್ಲುತೂರಾಟ ಖಂಡಿಸಿ ಪ್ರತಿಭಟನೆ ನಡೆಸಿದವರ ಮೇಲೆ ಪೊಲೀಸರು ಏಕಾಏಕಿ ಲಾಠಿ ಚಾರ್ಜ್ ಮಾಡಿದ್ದಾರೆ. ಇದು ಖಂಡನೀಯ. ರಸ್ತೆಯಲ್ಲಿಮಹಿಳೆಯರ ಮೇಲೆ ಹಲ್ಲೆಮಾಡಿದ ಪೊಲೀಸರ ಅಮಾನತು ಮಾಡಬೇಕು. ಘಟನೆ ಸಂಬಂಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು, ಎಂದು ಆಗ್ರಹಿಸಿದರು.ಗಲಭೆಯಿಂದಾಗಿ ಸಾರ್ವಜನಿಕರು, ಗಣಪತಿ ಭಕ್ತರಿಗೆ ಗಾಯಗಳಾಗಿವೆ. ಆಸ್ತಿಪಾಸ್ತಿಗೆ ಹಾನಿಯಾಗಿದೆ.

ಹೀಗಾಗಿಗಾಯಾಳುಗಳ ಚಿಕಿತ್ಸೆಗೆ ಗಲಭೆಕೋರರಿಂದಲೇ ಹಣ ವಸೂಲಿ ಮಾಡಿ ವೆಚ್ಚ ಭರಿಸಬೇಕು ಮತ್ತು ಆಸ್ತಿಹಾನಿಗೆ ಪರಿಹಾರ ಕೊಡಿಸಬೇಕು. ಇದನ್ನು ಬಿಟ್ಟು ಆರೋಪಿಗಳ ಬಗ್ಗೆಯೇ ಮೃಧು ಧೋರಣೆ ಅನುಸರಿಸಿದರೆ ಜಿಲ್ಲಾದ್ಯಂತ ಪ್ರತಿಭಟನೆ ನಡೆಸಲಾಗುವುದು, ಎಂದು ಎಚ್ಚರಿಸಿದರು.

---

## ಮುರಗಮಲೆ ಗಂಧೋತ್ಸವದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಮುರುಗಮಲೆಯಲ್ಲಿ ನಡೆದ ಅಮ್ಮಾಜಾನ್ ಬಾವಾಜಾನ್ ದರ್ಗಾದ ಉರುಸ್‌ನಲ್ಲಿ ವಿವಿಧ ರಾಜ್ಯಗಳಿಂದ ಬಂದಿದ್ದ ಲಿಂಗತ್ವ ಅಲ್ಪಸಂಖ್ಯಾತರು ದರ್ಗಾಕ್ಕೆ ವಿಶೇಷ ಚಾದರ್ ಹೊದಿಸಿ, ಗಂಧದ ಅರ್ಪಣೆ ಮಾಡಿದರು. ಲಿಂಗತ್ವ ಅಲ್ಪಸಂಖ್ಯಾತರ ಮುಖ್ಯಸ್ಥೆ ಮುಂಬೈ ಗುಲಾಂ ಮೊಯಿನುದ್ದೀನ್ ಅಮ್ಮಾಜಿ ಗಂಧದ ಉತ್ಸವದ ನೇತೃತ್ವ ವಹಿಸಿದ್ದರು. ಗಂಧೋತ್ಸವದ 2ನೇ ದಿನವಾದ ಶನಿವಾರವೂ ದರ್ಗಾದಲ್ಲಿ ವಿಶೇಷ ಪೂಜೆ, ಅನ್ನದಾನ, ವಸ್ತ್ರದಾನ ಕಾರ್ಯಕ್ರಮಗಳು ನಡೆದವು. ಡೋಲು ಬಾರಿಸುವುದು, ಹಾಡುವುದು, ನೃತ್ಯದ ಕಾರ್ಯಕ್ರಮಗಳು ಜನರಿಗೆ ಮನೋರಂಜನೆ ಒದಗಿಸಿದವು. ಲಿಂಗತ್ವ ಅಲ್ಪಸಂಖ್ಯಾತರ ತಂಡದ ಗುಲಾಂ ಮೊಯಿನುದ್ದೀನ್ ಮಾತನಾಡಿ, ಸುಮಾರು ವರ್ಷಗಳಿಂದ ಲಿಂಗತ್ವ ಅಲ್ಪಸಂಖ್ಯಾತರೆಲ್ಲರೂ ಒಟ್ಟುಗೂಡಿ ಅಮ್ಮಾಜಾನ್ ಬಾಬಾಜಾನ್ ಅವರ ದರ್ಗಾಗೆ ಚಾದರ್ ಅರ್ಪಿಸಿ ಗಂಧ ಅರ್ಪಣೆ ಮಾಡುತ್ತಿದ್ದೇವೆ. ಅವರ ಆಶೀರ್ವಾದ ನಮ್ಮ ಮೇಲಿದೆ ಎಂದು ಹೇಳಿದರು. ಪ್ರತಿವರ್ಷ ನಾವು ಹೆಚ್ಚಿನ ಸೇವೆ ಸಲ್ಲಿಸಲು ಆಗಮಿಸುತ್ತೇವೆ. ಒಳ್ಳೆಯ ಮಳೆ-ಬೆಳೆಯಾಗಿ ಜನರು ಸುಖ-ಸಂತೋಷದಿಂದ ಜೀವನ ನಡೆಸಲಿ ಎಂದು ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸುತ್ತೇವೆ ಎಂದರು.

## ಪ್ಯಾಲೆಸ್ಟೀನ್ ಬಾವುಟ ಹಾರಿಸಿ ಅಶಾಂತಿಯುಂಟು ಮಾಡಿದವರ ಗಡಿಪಾರಿಗೆ ಒತ್ತಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆಜಿಎಫ್

ಬಂಗಾರಪೇಟೆಯಲ್ಲಿ ಪ್ಯಾಲೆಸ್ಟೀನ್ ಬಾವುಟ ಹಾರಿಸಿ ಅಶಾಂತಿ ಉಂಟು ಮಾಡಿರುವವರನ್ನು ಕೂಡಲೇ ಗಡಿಪಾರು ಮಾಡಬೇಕೆಂದು ಒತ್ತಾಯಿಸಿ ಕೋಲಾರ ಜಿಲ್ಲೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಅವರಿಗೆ ಮನವಿ ಸಲ್ಲಿಸಿದರು. ಈದ್ ಮಿಲಾದ್ ಹಬ್ಬದ ಮೆರವಣಿಗೆಯಲ್ಲಿ ಪ್ಯಾಲೆಸ್ಟೀನ್ ಬಾವುಟ ಹಾರಿಸಿ, ದೇಶ ವಿರೋಧಿ ಘೋಷಣೆ ಕೂಗಿ ಸಮಾಜದಲ್ಲಿ ಭಯದ ವಾತಾವರಣ ನಿರ್ಮಿಸಲಾಗಿದೆ. ಇದಕ್ಕೆ ಕಾರಣರಾದ ಕಿಡಿಗೇಡಿಗಳನ್ನು ಕೂಡಲೇ ಗಡಿಪಾರು ಮಾಡಬೇಕೆಂದು ಜಿಲ್ಲಾ ಸಂಯೋಜಕ ಕೆ.ಎಸ್.ಚಂದ್ರಕುಮಾರ್ ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಎಸ್ಪಿ ಶಿವಾಂಶು ರಜಪೂತ್, ಘಟನೆ ಬಗ್ಗೆ ಈಗಾಗಲೇ ಪೊಲೀಸರು ಅಗತ್ಯ ಕ್ರಮ ಕೈಗೊಂಡಿದ್ದಾರೆ. ಇನ್ನು ಮುಂದೆ ಇಂತಹ ಘಟನೆಗಳು ನಡೆಯದಂತೆ ಕ್ರಮ ವಹಿಸಲಾಗುತ್ತದೆ ಎಂದು ಭರವಸೆ ನೀಡಿದರು.

---

# ಮತಾಂಧರ ಅಟ್ಟಹಾಸ ಖಂಡಿಸಿ ಮದ್ದೂರು ಬಂದ್

### ಸಾರ್ವಜನಿಕರಿಂದ ಸ್ವಯಂಪ್ರೇರಿತರಾಗಿ ಬೆಂಬಲ, ವ್ಯಾಪಾರ ವಹಿವಾಟು ಸ್ತಬ್ಧ

• ಉದಯವಾಹಿನಿ, ಮದ್ದೂರು



ಉದಯವಾಹಿನಿ ಚಿತ್ರ

**ಬೂದಿ ಮುಚ್ಚಿದ ಕೆಂಡ**

ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಮೇಲೆ ಅನ್ಯ ಕೋಮಿನವರಿಂದ ಕಲ್ಲು ತೂರಾಟ ನಡೆದಿರುವುದನ್ನು ಖಂಡಿಸಿ ಹಿಂದೂ ಪರ ಸಂಘಟನೆಗಳು ಕರೆ ನೀಡಿದ್ದ ಮದ್ದೂರು ಬಂದ್ ಬಹುತೇಕ ಯಶಸ್ವಿಯಾಗಿದ್ದರೂ ಪರಿಸ್ಥಿತಿ ಇನ್ನೂ ಬೂದಿ ಮುಚ್ಚಿದ ಕೆಂಡದಂತಿದೆ. ಬೆಳಗ್ಗಿನಿಂದಲೇ ಪಟ್ಟಣದಲ್ಲಿ ವ್ಯಾಪಾರ ವಹಿವಾಟು ಸಂಪೂರ್ಣವಾಗಿ ಸ್ತಬ್ದಗೊಂಡಿದ್ದವು. ಪ್ರತಿದಿನ ಬಸ್, ಆಟೋ, ಜನಜಂಗುಳಿಯಿಂದ ಗಿಜಿಗುಡುತ್ತಿದ್ದ ಪಟ್ಟಣದಲ್ಲಿ ಒಂದು ರೀತಿ ನೀರವ ಮೌನ ಆವರಿಸಿತ್ತು. ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಬಂದ್‌ಗೆ ಬೆಂಬಲ ಕೊಟ್ಟಿದ್ದರು. ಮೇಲ್ನೋಟಕ್ಕೆ ಪರಿಸ್ಥಿತಿ ಶಾಂತವಾಗಿದ್ದರೂ ಸಹ ಮದ್ದೂರು ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮುಂದುವರಿದಿದೆ. ಹಿಂದೂಪರ ಸಂಘಟನೆಗಳ ಪ್ರತಿಭಟನೆಗೆ ಬಿಜೆಪಿ ಬೆಂಬಲ ಕೊಟ್ಟಿತ್ತು. ಮದ್ದೂರಿನ ಕೆಎಂ ದೊಡ್ಡಿ, ಬೆಸಗರಹಳ್ಳಿ, ಕೆಸ್ತೂರು ಸೇರಿದಂತೆ ಹೋಬಳಿ ಕೇಂದ್ರಗಳು ಸಹ ಬಂದ್ ಆಗಿದ್ದವು. ಸಾವಿರಾರು ಜನ ಹಿಂದೂ ಕಾರ್ಯಕರ್ತರು ರ್‍ಯಾಲಿಯಲ್ಲಿ ಭಾಗಿಯಾಗಿ ಪಟ್ಟಣದ ಪೇಟೆ ಬೀದಿ ಮೂಲಕ ಐಬಿ ವೃತ್ತದವರೆಗೂ ರ್‍ಯಾಲಿ ನಡೆಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ನಾಲ್ವರು ಎಸ್ಪಿಗಳು, ಹೆಚ್ಚುವರಿ ಎಸ್ಪಿಗಳು ಮತ್ತು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಗಳು ಸೇರಿದಂತೆ ಸುಮಾರು 800 ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ ಎಂದು ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

**ಪರಿಸ್ಥಿತಿ ನಿಯಂತ್ರಣದಲ್ಲಿ:** ಪಟ್ಟಣದಲ್ಲಿ ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ನಿಷೇಧಾಜ್ಞೆ ಜಾರಿಯಲ್ಲಿದೆ. ಸಾಕಷ್ಟು ಪಡೆಗಳನ್ನು ನಿಯೋಜಿಸಲಾಗಿದೆ, ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ ಎಂದರು.

**ಎರಡು ಎಫ್‌ಐಆರ್:** ಮದ್ದೂರಿನ ರಾಮ್‌ರಹೀಮ್ ನಗರದಲ್ಲಿ ಗಣೇಶ ಮೂರ್ತಿ ಮೆರವಣಿಗೆ ಸಂದರ್ಭದಲ್ಲಿ ಕಲ್ಲು ತೂರಾಟ ನಡೆದಾಗ ಉಂಟಾದ ಘರ್ಷಣೆಗೆ ಸಂಬಂಧಿಸಿದಂತೆ ಎರಡು ಎಫ್‌ಐಆರ್ ದಾಖಲಿಸಲಾಗಿದೆ. ಸ್ವಯಂಪ್ರೇರಿತವಾಗಿ ಒಂದು ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ಗಾಯಾಳು ನೀಡಿದ ದೂರಿನ ಆಧಾರದ ಮೇಲೆ ಮತ್ತೊಂದು ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ಮೊನ್ನೆ ನಡೆದ ಘಟನೆಗೆ ಸಂಬಂಧಿಸಿದಂತೆ ಇದುವರೆಗೆ 22 ಜನರನ್ನು ಬಂಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಮಸೀದಿಯಿಂದ ಸುಮಾರು 500 ಮೀಟರ್ ದೂರದಲ್ಲಿ ಆರಂಭವಾದ ಕಲ್ಲು ತೂರಾಟವು ಮೆರವಣಿಗೆಯಲ್ಲಿದ್ದ ಸದಸ್ಯರಿಂದ ಪ್ರತೀಕಾರಕ್ಕೆ ಕಾರಣವಾಯಿತು. ಎರಡು ಗುಂಪುಗಳನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ನಂತರ ಹಿಂದೂ ಕಾರ್ಯಕರ್ತರು ಜೈ ಶ್ರೀರಾಮ್ ಘೋಷಣೆಗಳನ್ನು ಕೂಗಿ, ಟೈರ್ ಸುಟ್ಟು, ಕೇಸರಿ ಧ್ವಜಗಳನ್ನು ಬೀಸುತ್ತಾ ಪ್ರತಿಭಟನೆ ನಡೆಸಿ ತಮ ಆಕ್ರೋಶ ವ್ಯಕ್ತಪಡಿಸಿದ್ದರು.

**ಶಾಂತಿ ಕಾಪಾಡಲು ಶಾಸಕರ ಮನವಿ:** ಗಣಪತಿ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಘಟನೆ ವಿಷಾದನೀಯ, ಸ್ಥಳೀಯರು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಬೇಕೆಂದು ಶಾಸಕರಾದ ಕೆ.ಎಂ.ಉದಯ್ ಅವರು ಮನವಿ ಮಾಡಿದ್ದಾರೆ. ಮೆರವಣಿಗೆಯ ಸಂದರ್ಭದಲ್ಲಿ ಮಸೀದಿ ಕಡೆಗಳಿಂದ ಕಲ್ಲು ಎಸೆದ ಘಟನೆ ವಿಷಾದಕರ. ತಕ್ಷಣವೇ ಪೊಲೀಸರು ವಿಚಾರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು 21 ಮಂದಿಯನ್ನು ಈಗಾಗಲೇ ಬಂಧಿಸಿದ್ದಾರೆ. ಯಾವುದೇ ಹಿಂದೂ ಸಹೋದರರ ವಿರುದ್ಧ ಪ್ರಕರಣ ದಾಖಲಾಗಿಲ್ಲ. ಘಟನೆಯ ಕೆಲವೇ ಗಂಟೆಗಳಲ್ಲಿ ಶೀಘ್ರ ಕ್ರಮ ಕೈಗೊಂಡಿದ್ದಾರೆ ಎಂದರು. ಆದರೆ, ಕೆಲ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಈ ಘಟನೆಗೆ ರಾಜಕೀಯ ಬಣ್ಣ ಹಚ್ಚಿ ಜನರಲ್ಲಿ ಪ್ರಚೋದನೆ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅವರು ಶಾಂತಿಯ ಸಂದೇಶ ನೀಡಬೇಕಾದ ಜಾಗದಲ್ಲಿ ಕೋಮು ಗಲಭೆ ಪ್ರಚೋದನೆ ಮಾಡುವುದನ್ನು ನಾವು ಖಂಡಿಸುತ್ತೇವೆ ಎಂದು ಹೇಳಿದ್ದಾರೆ. ಮದ್ದೂರಿನಲ್ಲಿ ಇದುವರೆಗೆ ಈ ರೀತಿಯ ಘಟನೆ ನಡೆದಿರಲಿಲ್ಲ. ಹೊರಗಿನಿಂದ ಬಂದ ಕೆಲ ಕಾಣದ ಕೈಗಳಿಂದ ಈ ಗಲಭೆ ಉಂಟಾಗಿರಬಹುದು ಎಂಬ ಸಾಧ್ಯತೆಗಳ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

**ಆರ್‌ಎಎಫ್ ನಿಯೋಜನೆ:** ಮದ್ದೂರು ಪಟ್ಟಣದಲ್ಲಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ನಡೆದ ಘಟನೆಗೆ ಸಂಬಂಧಿಸಿದಂತೆ ಪಟ್ಟಣದಲ್ಲಿ ಬಂದೋಬಸ್ತ್‌ಗಾಗಿ ಸ್ಥಳೀಯ ಪೊಲೀಸರ ಜೊತೆ ಎರಡು ಕಂಪನಿ ಆರ್‌ಎಎಫ್ ನಿಯೋಜನೆ ಮಾಡಲಾಗಿದೆ ಎಂದು ಮಂಡ್ಯ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿಯವರು ತಿಳಿಸಿದ್ದಾರೆ. ಈ ಸಂಜೆಯೊಂದಿಗೆ ಮಾತನಾಡಿದ ಅವರು, ನಿನ್ನೆ ಈ ಕಂಪನಿಗಳು ಮದ್ದೂರಿಗೆ ಆಗಮಿಸಿದ್ದು, ಪಥಸಂಚಲನ ನಡೆಸಲಾಗಿತ್ತು. ಮತ್ತೆ ಪಥಸಂಚಲನ ಮಾಡಲಾಗುವುದು ಎಂದರು.

**ಎಚ್ಚೆತ್ತ ಸರ್ಕಾರ: ಶಾಂತಿ ಸಭೆ**

**ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಖಂಡಿಸಿ ಬೃಹತ್ ಪ್ರತಿಭಟನೆ ಬಳಿಕ ಎಚ್ಚೆತ್ತುಕೊಂಡಿರುವ ಸರ್ಕಾರ ಶಾಂತಿ ಸಭೆ ಕರೆದಿದೆ. ಸಚಿವರಾದ ಚಲುವರಾಯ ಸ್ವಾಮಿ ಅವರ ನೇತೃತ್ವದಲ್ಲಿ ಎರಡು ಕೋಮಿನ ಮುಖಂಡರೊಂದಿಗೆ ಶಾಂತಿ ಸಭೆ ನಡೆಯಲಿದೆ. ಶಿವಪುರ ಸತ್ಯಾಗ್ರಹ ಸೌಧ ಸಮೀಪದ ಖಾಸಗಿ ಕಲ್ಯಾಣ ಮಂಟಪದಲ್ಲಿ ಸಭೆ ಆಯೋಜಿಸಲಾಗಿದ್ದು ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಹಲವರು ಭಾಗಿಯಾಗಲಿದ್ದಾರೆ.**

---

## ಯೂರಿಯಾ ಖರೀದಿಸಲು ಟೋಕನ್‌ಗೆ ನೂಕುನುಗ್ಗಲು

• ಉದಯವಾಹಿನಿ, ಬಾಗೇಪಲ್ಲಿ


ಉದಯವಾಹಿನಿ ಚಿತ್ರ

ಇಲ್ಲಿನ ಟಿಎಪಿಸಿಎಂಎಸ್ ಮಳಿಗೆಗೆ ಯೂರಿಯಾ ಖರೀದಿಗಾಗಿ ನೂರಾರು ರೈತರು ದಾಂಗುಡಿ ಇಟ್ಟ ಕಾರಣ ಮಳಿಗೆ ಮುಂದೆ ನೂಕು ನುಗ್ಗಲು ಉಂಟಾಯಿತು. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು, ರೈತರು ಮತ್ತು ಮಹಿಳಾ ರೈತರನ್ನು ಪ್ರತ್ಯೇಕ ಸಾಲಿನಲ್ಲಿ ನಿಲ್ಲಿಸಿ. ಯೂರಿಯಾ ವಿತರಣೆಗಾಗಿ ಟೋಕನ್ ನೀಡಲಾಯಿತು.

ಕಳೆದ ಹಲವು ದಿನಗಳಿಂದ ಉತ್ತಮ ಮಳೆ ಆಗಿರುವ ಕಾರಣ ಯೂರಿಯಾಗೆ ಬೇಡಿಕೆ ಹೆಚ್ಚಾಗಿದೆ. ಆದರೆ, ರೈತರಿಗೆ ಅಗತ್ಯ ಇರುವಷ್ಟು ಯೂರಿಯಾ ವಿತರಣೆ ಮಾಡಲು ಕೇಂದ್ರ, ರಾಜ್ಯ ಸರ್ಕಾರ ಕ್ರಮ ಕೈಗೊಂಡಿಲ್ಲ. ಒಬ್ಬ ರೈತನಿಗೆ ಒಂದು ಚೀಲ ಯೂರಿಯಾ ಕೊಟ್ಟರೆ, ಬೆಳೆಗಳಿಗೆ ಸಿಂಪಡಿಸಲು ಸಾಧ್ಯವಿದೆಯೇ ಎಂದು ಟಿಎಪಿಸಿಎಂಎಸ್ ಮಳಿಗೆ ಮುಂದೆ ಜಮಾಯಿಸಿದ್ದ ರೈತರು ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಯೂರಿಯಾ ಪಡೆಯಲು ಟಿಎಪಿಸಿಎಂಎಸ್ ಮಳಿಗೆ ಮುಂದೆ ಬೆಳಗಿನ ಜಾವ ನಾಲ್ಕು ಗಂಟೆಯಿಂದಲೇ ನೂರಾರು ಮಂದಿ ರೈತರು ಜಮಾಯಿಸಿದ್ದರು.

ಹೊತ್ತು ಏರಿದಂತೆ ಟಿಎಪಿಸಿಎಂಎಸ್ ಮಳಿಗೆಯತ್ತ ರೈತರ ಆಗಮನದ ಸಂಖ್ಯೆಯೂ ಹೆಚ್ಚಾಯಿತು. ಆದರೆ, ಕಚೇರಿಯಲ್ಲಿ ಕಡಿಮೆ ಪ್ರಮಾಣದ ರಸಗೊಬ್ಬರವಿದ್ದ ಕಾರಣ ರೈತರಿಗೆ ಟೋಕನ್ ನೀಡಲು ನಿರ್ಧರಿಸಲಾಯಿತು. ಈ ವೇಳೆ ಟೋಕನ್ ಪಡೆಯಲು ರೈತರ ಮಧ್ಯೆ ನೂಕು ನುಗ್ಗಲು ಉಂಟಾಯಿತು.


ಅಲ್ಲದೆ, ಮಹಿಳಾ ರೈತರು ಏಕಾಏಕಿ ನುಗ್ಗಿ, ಟಿಎಪಿಸಿಎಂಎಸ್ ಅಧ್ಯಕ್ಷ ಚಂದ್ರಶೇಖರರೆಡ್ಡಿ ಅವರ ಬಳಿ ಇದ್ದ ಟೋಕನ್‌ಗಳನ್ನು ಕಿತ್ತುಕೊಂಡರು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ಉಂಟಾಯಿತು.

ಸ್ಥಳಕ್ಕಾಗಮಿಸಿದ ಪೊಲೀಸರು, ಗೊಂದಲದ ವಾತಾವರಣವನ್ನು ನಿವಾರಿಸಿ. ಮಹಿಳೆಯರು, ಪುರುಷರಿಗೆ ಪ್ರತ್ಯೇಕ ಸಾಲುಗಳ ವ್ಯವಸ್ಥೆ ಮಾಡಿದರು. 300 ಮಂದಿಗೆ ಟೋಕನ್ ನೀಡಲಾಯಿತು. ಉಳಿದ 700ಕ್ಕೂ ಹೆಚ್ಚು ರೈತರು ನಿರಾಶೆಯಿಂದ ಮನೆಗೆ ವಾಪಸ್ ಆದರು. ಪ್ರತಿಯೊಬ್ಬ ರೈತರಿಗೆ ಅಗತ್ಯವಿರುವಷ್ಟು ರಸಗೊಬ್ಬರ ವಿತರಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದರು.

ರೈತರ ಘಟನಾ ಸ್ಥಳಕ್ಕೆ ಬಂದ ಕರ್ನಾಟಕ ಪ್ರಾಂತ ರೈತ ಸಂಘದ ಚನ್ನರಾಯಪ್ಪ, ಡಿ.ಟಿ. ಮುನಿಸ್ವಾಮಿ, ಅಶ್ವಥಪ್ಪ ರೈತರಿಗೆ ಬೇಕಿರುವಷ್ಟು ರಸಗೊಬ್ಬರ ನೀಡದ ತಾಲ್ಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

## ಜಾತಿ ಕಲಂನಲ್ಲಿ ಒಕ್ಕಲಿಗ ಎಂದೇ ನಮೂದಿಸಿ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಒಕ್ಕಲಿಗ ಸಮುದಾಯದವರು ಜವಾಬ್ದಾರಿ, ವಿವೇಚನೆಯಿಂದ ವಾಸ್ತಾಂಶದ ಮಾಹಿತಿ ನೀಡಬೇಕು. ತಪ್ಪು ಮಾಹಿತಿ ದಾಖಲಾಗದಂತೆ ಎಚ್ಚರ ವಹಿಸಿ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು. ಮುಂಬರುವ ಸಾಮಾಜಿಕ, ಆರ್ಥಿಕ ಸಮೀಕ್ಷೆ ಕುರಿತು ನಗರ ಹೊರವಲಯದ ರತ್ನ ಕನ್ವೆನ್ಷನ್ ಸಭಾಂಗಣದಲ್ಲಿ ಒಕ್ಕಲಿಗ ಸಮುದಾಯಕ್ಕೆ ಅರಿವು ಮೂಡಿಸಲು ಆದಿಚುಂಚನಗಿರಿ ಮಠ ಮತ್ತು ಜಿಲ್ಲಾ ಒಕ್ಕಲಿಗರ ಸಂಘ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಸಮುದಾಯದ ಯಾವುದೇ ಉಪಪಂಗಡಕ್ಕೆ ಸೇರಿದ್ದರೂ ಜಾತಿ ಕಲಂನಲ್ಲಿ ಒಕ್ಕಲಿಗ ಎಂದೇ ನಮೂದಿಸಿ.

ಉಪಪಂಗಡಗಳನ್ನು ಉಪಜಾತಿ ಕಾಲಂನಲ್ಲಿ ದಾಖಲಿಸಬೇಕು. ಜಾತಿ ಕಾಲಂನಲ್ಲಿ ಉಪಜಾತಿ ನಮೂದಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ಕಿವಿಮಾತು ಹೇಳಿದರು. ರಾಜ್ಯ ಸರ್ಕಾರವು ಹೊಸದಾಗಿ ಸಮೀಕ್ಷೆಯನ್ನು ಸೆ.22ರಿಂದ ಅ.7ರವರೆಗೆ ಅಂದರೆ 15 ದಿನ ನಡೆಸಲಿದೆ.

**ಇದು ಬರೀ ಜಾತಿ ಜನಗಣತಿ ಅಲ್ಲ:** ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ. 1931ರಲ್ಲಿ ನಡೆದಿದ್ದ ಸಾಮಾಜಿಕ, ಶೈಕ್ಷಣಿಕ ಜಾತಿ ಜನಗಣತಿಯ ನಂತರ ಈಗ ನಡೆಯುತ್ತಿದೆ ಎಂದರು. ಹಿಂದೆ ಒಮ್ಮೆ ಸಮೀಕ್ಷೆ ನಡೆಸಲಾಗಿತ್ತು. ಆದರೆ, ಶೇ 25ರಿಂದ 40ರಷ್ಟು ಮನೆಗಳಿಗೆ ಭೇಟಿ ನೀಡದೆ ವರದಿ ತಯಾರಿಸಲಾಗಿದೆ ಎಂಬ ಆಕ್ಷೇಪ ವ್ಯಕ್ತವಾದ ಕಾರಣ ಅದನ್ನು ಕೈಬಿಟ್ಟು ಈಗ ಹೊಸದಾಗಿ ನಡೆಸಲಾಗುತ್ತಿದೆ. ಹಿಂದೆ ಸಮುದಾಯದಿಂದ ಯಾವುದೇ ಕಾರ್ಯಾಗಾರ ನಡೆದಿರಲಿಲ್ಲ. ಈಗ ನಡೆಸಿ ಅರಿವು ಮೂಡಿಸಲಾಗುತ್ತಿದೆ. ಸಮುದಾಯದವರು ಗ್ರಾಮಾಂತರ ಪ್ರದೇಶಕ್ಕೂ ತೆರಳಿಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಪರೀಕ್ಷೆಗೆ ವರ್ಷವಿಡೀ ಓದಿ ಪರೀಕ್ಷೆಯಲ್ಲಿ ಸರಿಯಾಗಿ ಬರೆಯದೆ ಇದ್ದರೆ ಅನುತ್ತೀರ್ಣರಾಗುತ್ತೀರಿ. ಹೀಗಾಗಿ, ಮುಂದಿನ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಸಮೀಕ್ಷೆ ವೇಳೆ ಸರಿಯಾದ ಮಾಹಿತಿ ಕೊಡಿ ಎಂದು ಮನವಿ ಮಾಡಿದರು.

ಒಕ್ಕಲಿಗರು ಹಿಂದೆ ಆಶ್ರಯದಾತರು, ಅನ್ನದಾತರಾಗಿದ್ದರು. ಆಗ ಎಲ್ಲರೂ ಒಗ್ಗಟ್ಟಾಗಿದ್ದು, ಸಮಾಜದ ಏಳಿಗೆಗೆ ದುಡಿಯುತ್ತಿದ್ದರು. ಈಗ ಒಕ್ಕಲಿಗರಲ್ಲಿ ಒಗ್ಗಟ್ಟು ಇಲ್ಲವಾಗಿದೆ. ಸಮಾಜ ಉಳಿಯಬೇಕೆಂದರೆ ಸಮುದಾಯದವರು ಒಗ್ಗಟಾಗಿರಬೇಕು. ಸಮುದಾಯಕ್ಕೆ ದಕ್ಕಬೇಕಾದ ಮೀಸಲಾತಿ ಸಿಗಬೇಕು. ಆಗ ಮಾತ್ರ ಸಮುದಾಯದ ಅಭಿವೃದ್ಧಿ ಸಾಧ್ಯ. ಈಗ ಆ ಕಾಲ ಕೂಡಿ ಬಂದಿದೆ ಎಂದರು.

---

# ನಿಸಾರ್ ಅಹಮದ್‌ರಷ್ಟು ಸಾಹಿತ್ಯ ಜ್ಞಾನ ಸಿಎಂ ಸಿದ್ದರಾಮಯ್ಯಗಿಲ್ಲ

### ಬಿಜೆಪಿ ನಾಯಕರಿಂದ ಚಾಮುಂಡಿ ಬೆಟ್ಟ ಚಲೋ, ಪೊಲೀಸರ ವಶಕ್ಕೆ, ಸಿದ್ದರಾಮಯ್ಯ ವಿರುದ್ಧ ಪ್ರತಾಪ್ ಸಿಂಹ ಮೈಸೂರಿನಲ್ಲಿ ವಾಗ್ದಾಳಿ

• ಉದಯವಾಹಿನಿ, ಮೈಸೂರು

**ಸೆಕ್ಯೂಲರ್ ಪ್ರೋಗ್ರಾಂ ಅಲ್ಲ**


ಉದಯವಾಹಿನಿ ಚಿತ್ರ



ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ವಿರೋಧಿಸಿ, ಬಿಜೆಪಿ ನಾಯಕರು ಚಾಮುಂಡಿ ಬೆಟ್ಟ ಚಲೋ ವೇಳೆ ಮಾತನಾಡಿದ ಮಾಜಿ ಸಂಸದ, ಕಾಂಗ್ರೆಸ್ ಸರ್ಕಾರದ ಆಯ್ಕೆಗೆ ನಾವು ಮೊದಲದಿನದಿಂದಲೂ ಆಕ್ರೋಶ ವ್ಯಕ್ತಪಡಿಸುತ್ತಲೇ ಬಂದಿದ್ದೇವೆ. ಆದರೆ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಹೇಳಿದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ವಿರೋಧಿಸಿ, ಬಿಜೆಪಿ ನಾಯಕರು ಚಾಮುಂಡಿ ಬೆಟ್ಟ ಚಲೋ ಕೈಗೊಂಡರು, ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಲ್ ನಾಗೇಂದ್ರ, ಸೇರಿದಂತೆ ಬಿಜೆಪಿ ಕಾರ್ಯಕರ್ತರು ಪೊಲೀಸರ ವಶಕ್ಕೆ ಪಡೆದುಕೊಳ್ಳಲಾಯಿತು.

**ಚಾಮುಂಡಿ ಚಲೋ ವೇಳೆ ಪ್ರತಿಭಟನಾಕಾರರು ವಶಕ್ಕೆ:** ಮೈಸೂರಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಚಾಮುಂಡಿ ಬೆಟ್ಟ ಚಲೋಗೆ ಮುಂದಾಗಿದ್ದವರನ್ನು ವಶಕ್ಕೆ ಪಡೆದ ಪೊಲೀಸರು. ಕನ್ನಡ ವಿರೋಧಿ ಬಾನು ಮುಷ್ತಾಕ್, ಹೀಗಾಗಿ ದಸರಾ ಉದ್ಘಾಟನೆಗೆ ಬಿಡೋದಿಲ್ಲ ಎಂದ ಕಾರ್ಯಕರ್ತರು. ಪೊಲೀಸರು, ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ. ಬಲವಂತವಾಗಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಜಾತಾಂತ್ರಿಕವಾಗಿ ಪಾದಯಾತ್ರೆಗೆ ಅವಕಾಶ ನೀಡದೇ ನಡೆದುಕೊಂಡು ಹೋಗುವವರನ್ನೂ ಅಟ್ಟಿಸಿಕೊಂಡು ಹೋಗಿ ಅರೆಸ್ಟ್ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಅವರೇ ಇದು ನಿಮ್ಮ ಸೆಕ್ಯೂಲರ್ ಪ್ರೋಗ್ರಾಂ ಅಲ್ಲ, ಇದು ರಿಲೀಜಿಯನ್ ಪ್ರೋಗ್ರಾಂ. ಸಿದ್ದರಾಮಯ್ಯ ಅವ್ರೇ ನೀವು ವಿರೋಧ ಪಕ್ಷದ ನಾಯಕರಾಗಿ ಬಳ್ಳಾರಿಗೆ ಪಾದಯಾತ್ರೆ ಮಾಡಿದ್ರಲ್ಲ. ಹೋದ ಕಡೆಯೆಲ್ಲ ಸಮ್ಮೇಳನ ಮಾಡ್ತಾ ಇದ್ರಲ್ಲ. ಅವಾಗ ಬಿಜೆಪಿ ಸರ್ಕಾರ ಇತ್ತಲ್ಲ, ನಾವು ತಡೆ ಕೊಟ್ಟಿದ್ದೀವಾ.

ಸಿದ್ದರಾಮಯ್ಯ ಅವ್ರೇ ತಾಲಿಬಾನ್ ಸರ್ಕಾರ ನಡೆಸುತ್ತಿರೋ ಬಗ್ಗೆ ಜನರಿಗೆ ಅರಿವಾಗಿದೆ ಎಂದು ಗುಡುಗಿದರು. ನೀವು ಕಾನೂನು ಪದವಿಧರರಾಗಿ, ಕನ್ನಡಿಗರ ಬಗ್ಗೆ, ಭುವನೇಶ್ವರಿ ಬಗ್ಗೆ ಅರಿಶಿನ ಕುಂಕುಮದ ಬಗ್ಗೆ ಕರೆದು ಬುದ್ಧಿ ಹೇಳಿ ಕ್ಷಮೆ ಕೇಳಿಸಿದ್ರೆ, ನಾವು ಹೋರಾಟ ಮಾಡ್ತಾ ಇದ್ವಾ. ಇಷ್ಟಾದರೂ ಬಾಗಿನ ತಗೋಳೋದು, ಹಣೆಗೆ ಕುಂಕುಮ ಇಡೋ ಕೆಲ್ಸ ಮಾಡೋದು ಕನ್ನಡಿಗರಿಗೆ ಅವಮಾನ ಆಗಿದ್ರೂ, ಕನಿಷ್ಠ ಕ್ಷಮೆಯನ್ನು ಕೇಳಿಲ್ಲ ಅವಮ್ಮ. ನಿಮಗೆ ಇಷ್ಟ ಆದ್ರೆ, ನಿಮ್ಮ ಮಗನ ಮದುವೆಗೆ ತಾಂಬೂಲ ಕೊಡಿಸಿ. ಅದನ್ನು ಬಿಟ್ಟು ತಾಯಿ ಭುವನೇಶ್ವರಿ ಬಗ್ಗೆ ಅಪದ್ದ ಭಾವನೆ ಇಟ್ಟುಕೊಂಡಿರೋ ಅವರನ್ನು ಯಾಕೆ ದಸರಾ ಉದ್ಘಾಟನೆಗೆ ಕರೀತೀರ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಮೈಸೂರಿನಲ್ಲಿ ಪ್ರತಾಪ್ ಸಿಂಹ ಹೇಳಿದರು.

**ಮುಷ್ತಾಕ್ ಕ್ಷಮೇ ಕೇಳಲಿ**

**ನೀವು ಮರುಚಿಂತನೆಯನ್ನು ಮಾಡಿ ಎಂದೆ. ಸಿದ್ದರಾಮಯ್ಯ ಒಂದು ದಿನವೂ ಸಮರ್ಥನೆಯ ರೀತಿ ಸರಿಯಾದ ಉತ್ತರ ಕೊಟ್ಟಿಲ್ಲ. ನಿಸಾರ್ ಅಹಮದ್ ಅವರಷ್ಟು ಸಾಹಿತ್ಯದ ಕನಿಷ್ಠ ಜ್ಞಾನ ಸಿದ್ದರಾಮಯ್ಯ ಅವರಿಗೆ ಇದ್ದಿದ್ದರೆ ಸಿಎಂ ಸಿದ್ದರಾಮಯ್ಯ ಮಾತನಾಡುತ್ತಿರಲಿಲ್ಲ. ನಿಸಾರ್ ಅಹಮದ್ ಅವರಿಗೂ, ಮಸೀದಿ ಮುಲ್ಲಾ ರೀತಿ ಮಾತನಾಡಿರೋ ಇವ್ರಿಗೂ ವ್ಯತ್ಯಾಸ ಇಲ್ವಾ. ಅವ್ರು ಮಾಡಿರೋ ಭಾಷಣ ಹೊರಹಾಕಿದ್ರೂ, ಕನ್ನಡಿಗರಲ್ಲಿ ಕ್ಷಮೆ ಕೇಳಲಿಲ್ಲ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.**

**ದಸರಾ ಸಮಾರಂಭ ಉದ್ಘಾಟನೆಗೆ ಇನ್ನು ಕೆಲವೇ ದಿನಗಳು ಬಾಕಿ ಇದೆ. ಈಗಗಾಲೇ ಗಜಪಡೆಗಳ ತಾಲೀಮು, ಇತರ ಕಾರ್ಯಕ್ರಮಗಳು ಚಾಲ್ತಿಯಲ್ಲಿದೆ. ಈ ಎಲ್ಲಾ ಸಮರೋಪದ ಮಧ್ಯೆ ದಸರಾ ಉದ್ಘಾಟನೆಗೆ ಬಾನು ಮುಷ್ತಾಕರ್ ಆಯ್ಕೆಯಾಗಿರುವ ಬಗ್ಗೆ ಬಿಜೆಪಿ ನಾಯಕ ಪ್ರತಾಪ್ ಸಿಂಹ ವಿರೋಧ ವ್ಯಕ್ತಪಡಿಸುತ್ತಲೇ ಇದ್ದಾರೆ. ಇನ್ನು ಮಂಗಳವಾರ ಚಾಮುಂಡಿ ಬೆಟ್ಟ ಚಲೋ ನಡೆಸಿದ್ದು, ಈ ವೇಳೆ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.**

---

## ಮಿನಿ ನ್ಯೂಸ್

### ಫೋನ್ ನಂಬರ್ ಬ್ಲಾಕ್ ಮಾಡಿದ ಪ್ರೇಯಸಿ, ಆತ್ಮಹತ್ಯೆಗೆ ಶರಣಾದ ಪ್ರಿಯತಮ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಪ್ರೇಯಸಿ ಮೊಬೈಲ್ ನಂಬರ್‌ನ್ನು ಬ್ಲಾಕ್ ಮಾಡಿದ್ದಕ್ಕೆ ಮನನೊಂದು ವಿದ್ಯಾರ್ಥಿಯೊಬ್ಬ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಪೆರೆಸಂದ್ರ ಕ್ರಾಸ್‌ನ ಶಾಂತ ಗ್ರೂ ಆಫ್ ಇನ್ಸಿಟ್ಯೂಷನ್ ನ ಹಾಸ್ಟೆಲ್‌ನಲ್ಲಿ ನಡೆದಿದೆ. ಮೃತ ವಿದ್ಯಾರ್ಥಿಯನ್ನು ಕೇರಳದ ವಯನಾಡು ಮೂಲದ ಮೊಹಮದ್ ಶಬ್ಬೀರ್ (26) ಎಂದು ಗುರುತಿಸಲಾಗಿದೆ.

ಅಲೈಡ್ ಸ್ವ್ ಕೋರ್ಸ್‌ನ ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿದ್ದ ಮೊಹಮದ್ ಶಬ್ಬೀರ್ ತನ್ನ ಹಾಸ್ಟೆಲ್ ರೂಮ್‌ನಲ್ಲಿ ಶವವಾಗಿ ಪತ್ತೆಯಾಗಿದ್ದಾನೆ. ರೂಮಿನ ಕಿಟಕಿಗೆ ಪಂಚೆಯನ್ನು ಕಟ್ಟಿ, ಅದರಿಂದ ಕತ್ತು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡಿದ್ದಾನೆ. ಸುದ್ದಿ ತಿಳಿದ ಕೂಡಲೆ ಸ್ಥಳಕ್ಕೆ ಧಾವಿಸಿದ ಪೇರೇಸಂದ್ರ ಠಾಣಾ ಪೊಲೀಸರು ಪರಿಶೀಲನೆ ನಡೆಸಿದಾಗ, ಶಬ್ಬೀರ್‌ನ ಕೋಣೆಯಲ್ಲಿ ಒಂದು ಡೆತ್‌ನೋಟ್ ಲಭ್ಯವಾಗಿದೆ. ಪೊಲೀಸರು ಈ ಡೆತ್ ನೋಟ್ ವಶಪಡಿಸಿಕೊಂಡಿದ್ದಾರೆ.

ಮೃತ ಶಬ್ಬೀರ್ ತನ್ನ ಸಹಪಾಠಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಆದರೆ ಆ ಹುಡುಗಿ ಕಳೆದ ಕೆಲವು ದಿನಗಳಿಂದ ಶಬ್ಬೀರ್‌ನ ದೂರವಾಣಿ ಸಂಖ್ಯೆಯನ್ನು ಬ್ಲಾಕ್ ಮಾಡಿ ಸರಿಯಾಗಿ ಪ್ರತಿಕ್ರಿಯೆ ನೀಡಿರಲಿಲ್ಲ. ಇದರಿಂದ ಮನನೊಂದ ಶಬ್ಬೀರ್ ಆತಹತ್ಯೆಗೆ ಶರಣಾಗಿದ್ದಾನೆ ಎಂದು ತಿಳಿದುಬಂದಿದೆ. ಈ ಪ್ರಕರಣ ಸಂಬಂಧ ಪೇರೇಸಂದ್ರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

### ಸ್ಕೂಟರ್ ಕಳ್ಳತನ: ಇಬ್ಬರ ಬಂಧನ

• ಉದಯವಾಹಿನಿ, ಬಿಡದಿ

ಹೋಬಳಿಯ ಕಂಚುಗಾರನಹಳ್ಳಿ ಗ್ರಾಮದ ಲೋಕೇಶ್ ಎಂಬುವರ ಮನೆಯ ಮುಂದೆ ನಿಲ್ಲಿಸಿದ್ದ ಸ್ಕೂಟರ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಡದಿ ಠಾಣೆ ಪೊಲೀಸರು, ಇಬ್ಬರನ್ನು ಬಂಧಿಸಿದ್ದಾರೆ. ಪೃಥ್ವಿನ್ ಕುಲಕರ್ಣಿ ಮತ್ತು ಮನೋಜ್ ಕುಮಾರ್ ಬಂಧಿತರು. ಆರೋಪಿಗಳಿಂದ ?3 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಬ್ಬರ ಬಂಧನದಿಂದ ವಿವಿಧೆಡೆ ದಾಖಲಾಗಿದ್ದ 6 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ಆರೋಪಿಗಳ ಪತ್ತೆಗೆ ಇನ್‌ಸ್ಪೆಕ್ಟರ್ ಜಿ.ಕೆ. ಶಂಕರ್ ನಾಯಕ್ ಮಾರ್ಗದರ್ಶನದಲ್ಲಿ ಪಿಎಸ್ಐಗಳಾದ ನರಸಿಂಹಮೂರ್ತಿ, ಕೇಶವಮೂರ್ತಿ ಹಾಗೂ ಸಿಬ್ಬಂದಿ ಬಂಧನ ಕಾರ್ಯಾಚರಣೆಯ ತಂಡದಲ್ಲಿದ್ದರು.

### ಶಾಸಕ ಸಿಪಿವೈ ನಗರ ಸಂಚಾರ ಸಾರ್ವಜನಿಕರಿಂದ ಅಹವಾಲು ಆಲಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚನ್ನಪಟ್ಟಣ

ಇಲ್ಲಿಯ ನಗರಸಭೆ ವ್ಯಾಪ್ತಿಯ ಚಿಕ್ಕಮಳೂರು, ಮಂಗಳವಾರಪೇಟೆ, ಮರಳುಹೊಲ ವಾರ್ಡ್‌ಗಳಲ್ಲಿ ಶಾಸಕ ಸಿ.ಪಿ.ಯೋಗೇಶ್ವರ್ ನಗರ ಸಂಚಾರ ನಡೆಸಿದರು. ಸಾರ್ವಜನಿಕರ ಅಹವಾಲು ಆಲಿಸಿದ ಅವರು, ಗರಸಭೆಯ ಎಲ್ಲಾ 31 ವಾರ್ಡುಗಳ ಅಭಿವೃದ್ಧಿಗೆ ತಲಾ 1 ಕೋಟಿ ಅನುದಾನ ಬಿಡುಗಡೆಯಾಗಿದೆ. ಅಭಿವೃದ್ಧಿಗೆ ಕಾಮಗಾರಿ ಅಂತಿಮ ರೂಪುರೇಷೆ, ಯೋಜನೆ ರೂಪಿಸಲು ಸಿದ್ಧತೆ ನಡೆದಿರುವುದಾಗಿ ಹೇಳಿದರು. ಸಾತನೂರು ಸರ್ಕಲ್‌ನಿಂದ ಹೊಂಗನೂರುವರೆಗೆ ರಸ್ತೆ ವಿಸ್ತರಣೆಗೆ ಟೆಂಡರ್ ಕರೆಯಲಾಗಿದೆ. ಅಲ್ಲಿ ಒಳಚರಂಡಿ ಕಾಮಗಾರಿ ಕೈಗೊಳ್ಳಬೇಕಿರುವ ಕಾರಣ ಸದ್ಯಕ್ಕೆ ರಸ್ತೆಯನ್ನು ಮರು ಡಾಂಬರೀಕರಣ ಮಾಡುತ್ತೇವೆ. ಶೀಘ್ರ ರಸ್ತೆ ವಿಸ್ತರಣೆ ಬಗ್ಗೆ ನಿರ್ಧರಿಸಲಾಗುವುದು ಎಂದರು. ಒಳಚರಂಡಿ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಶೀಘ್ರ ಯುಜಿಡಿ ಕಾಮಗಾರಿ ಆರಂಭವಾಗುತ್ತದೆ.

ಖಾಸಗಿ ಬಡಾವಣೆಗಳಿಂದಾಗಿ ಪಟ್ಟಣದ ಕೊಳಚೆ ನೀರು ಸಾರಾಗಿ ಹರಿದು ಹೋಗಲು ಸೂಕ್ತ ವ್ಯವಸ್ಥೆ ಇಲ್ಲ. ಕೊಳಚೆ ನೀರು ಹರಿದು ಹೋಗಲು ಅಗತ್ಯ ವ್ಯವಸ್ಥೆಗೆ ಅಧಿಕಾರಿಗಳ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ಅಮೃತ ಯೋಜನೆ ಅಡಿ ನಗರದ 1 ರಿಂದ 8 ನೇ ವಾರ್ಡುಗಳಲ್ಲಿ ಆರಂಭಿಸಲಾಗಿದ್ದ ಹೊಸ ಪೈಪ್‌ಲೈನ್ ಕಾಮಗಾರಿ ಸ್ಥಗಿತಗೊಂಡಿತ್ತು. ಎಲ್ಲಾ ಅಡೆತಡೆ ನಿವಾರಿಸಿ ಮತ್ತೆ ಪೈಪ್‌ಲೈನ್ ಕಾಮಗಾರಿ ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಯೋಗೇಶ್ವರ್ ತಿಳಿಸಿದರು.

### ಮಳೆ ಕೊರತೆ: ಬಾಡಿದ ರಾಗಿ ಬೆಳೆ

• ಉದಯವಾಹಿನಿ, ಹುಳಿಯಾರು

ಹೋಬಳಿ ವ್ಯಾಪ್ತಿಯಲ್ಲಿ ತಡವಾಗಿ ಬಿತ್ತನೆಯಾದ ರಾಗಿ ಬೆಳೆ ಮಳೆ ಕೊರತೆಯಿಂದ ಬಾಡುತ್ತಿದೆ. ಕಳೆದ ಒಂದು ತಿಂಗಳಿನಿಂದ ಹೋಬಳಿ ವ್ಯಾಪ್ತಿಯ ಕೆಲ ಭಾಗಗಳಲ್ಲಿ ಸೋನೆ ಮಳೆ ಆಗಿತ್ತು. ರೈತರು ಸೋನೆ ಮಳೆಗೆ ತಮ್ಮ ಜಮೀನು ಸ್ವಚ್ಛಗೊಳಿಸಿ ರಾಗಿ, ನವಣೆ, ಸಾಮೆ ಬಿತ್ತನೆ ಮಾಡಿದ್ದರು. ಮೋಡ ಮುಸುಕಿದ ವಾತಾವರಣ ಹಾಗೂ ಆಗಾಗ ಸೋನೆ ಮಳೆ ಸುರಿದ ಕಾರಣ ಬಿತ್ತನೆ ಮಾಡಿದ ಬೀಜ ಮೊಳಕೆಯೊಡೆದು ಬೆಳೆದಿದೆ. ಈಗ ಮಳೆ ಹಿಂದೆ ಸರಿದಿದ್ದು ರಾಗಿ ಪೈರು ಸೊರಗುತ್ತಿದೆ. ಹೋಬಳಿ ವ್ಯಾಪ್ತಿಯ ಕೆಂಕೆರೆ ಸುತ್ತಮುತ್ತ ಸ್ವಲ್ಪ ಸೋನೆ ಮಳೆ ಬಿಟ್ಟರೆ ಉಳಿದಂತೆ ಮಳೆ ಆಗಿಲ್ಲ ಎನ್ನುತ್ತಾರೆ ರೈತರು.

### ಬೋನಿಗೆ ಬಿದ್ದ ಚಿರತೆ

• ಉದಯವಾಹಿನಿ, ಕೆ.ಆರ್.ಪೇಟೆ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಹರಳಹಳ್ಳಿ ಗ್ರಾಮದಲ್ಲಿ ಕೆಲವು ದಿನಗಳಿಂದ ಗ್ರಾಮಸ್ಥರಲ್ಲಿ ಭಯ ಹುಟ್ಟಿಸಿದ್ದ ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ. ಗ್ರಾಮದಲ್ಲಿ ಕೆಲವು ತಿಂಗಳಿನಿಂದ ಚಿರತೆಗಳು ಜಾನುವಾರುಗಳ ಮೇಲೆ ದಾಳಿ ನಡೆಸಿದ್ದವು. ಇದರಿಂದ ಗ್ರಾಮದಲ್ಲಿ ಆತಂಕ ಮನೆ ಮಾಡಿತ್ತು.

ಬೋನಿಗೆ ನಾಲ್ಕು ವರ್ಷದ ಹೆಣ್ಣು ಚಿರತೆ ಬಿದ್ದಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಗ್ರಾಮದ ಅಂಚಿನಲ್ಲಿ ಇನ್ನೂ ಕೆಲ ಚಿರತೆಗಳು ಓಡಾಡುತ್ತಿದ್ದು, ಅವನ್ನೂ ಸೆರೆಹಿಡಿಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಅಂತರಾಳದಿಂದ... EDITORIAL

# ಅಂಚಿಗೆ ಸರಿಸಲಾದವರ ಪತ್ತೆಗೆ ಸಾಮಾಜಿಕ ನ್ಯಾಯದ ದೃಷ್ಟಿ

ದೇವದಾಸಿಯರು, ಲಿಂಗತ್ವ ಅಲ್ಪಸಂಖ್ಯಾತರ ಸಮಗ್ರ ಸಮೀಕ್ಷೆಯನ್ನು ನಡೆಸುವ ರಾಜ್ಯ ಸರ್ಕಾರದ ತೀರ್ಮಾನವು, ಬಹುಕಾಲದ ಆಗ್ರಹವೊಂದಕ್ಕೆ ಸ್ಪಂದಿಸುವಂತಿದೆ. ಎಲ್ಲರನ್ನೂ ಒಳಗೊಳ್ಳುವ ಆಡಳಿತ ಹಾಗೂ ಸಾಮಾಜಿಕ ನ್ಯಾಯದ ಕಣ್ಣಿನಿಂದ ನೋಡಿದಾಗ ಈ ಸಮೀಕ್ಷೆಯು ಸ್ವಾಗತಾರ್ಹವಾಗಿ ಕಾಣುತ್ತದೆ. ಸೆಪ್ಟೆಂಬರ್ 15ರಿಂದ ಶುರುವಾಗಲಿರುವ ಸಮೀಕ್ಷೆಯು ಈ ವರ್ಗಗಳಿಗೆ ಸೇರಿದವರ ಸಾಮಾಜಿಕ–ಆರ್ಥಿಕ ಸ್ಥಿತಿಯ ಬಗ್ಗೆ ನಿಖರ ಮಾಹಿತಿಯನ್ನು ಕಲೆಹಾಕುವ ಉದ್ದೇಶ ಹೊಂದಿದೆ; ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಿಂದ ಅವರು ಹೊರಗುಳಿಯದಂತೆ ನೋಡಿಕೊಳ್ಳುವ ಗುರಿಯನ್ನು ಹೊಂದಿದೆ. ಈ ಎರಡೂ ಸಮುದಾಯಗಳು ಬಹುಕಾಲದಿಂದ ಸಮಾಜದ ಅಂಚಿನಲ್ಲಿ ಬದುಕುತ್ತಿವೆ. ನೀತಿ ನಿರೂಪಕರು ಈ ಸಮುದಾಯಗಳನ್ನು ನಿರ್ಲಕ್ಷಿಸಿದ್ದಾರೆ, ಸಾಮಾಜಿಕ ಸಂರಚನೆಗಳು ಇವರನ್ನು ಶೋಷಣೆಗೆ ಒಳಪಡಿಸಿವೆ. ಸಮುದಾಯಗಳಿಗೆ ಪುನರ್ವಸತಿ ಕಲ್ಪಿಸುವ ಹಾಗೂ ಅವರಿಗೆ ಬಲ ತುಂಬುವ ಕೆಲಸಕ್ಕೆ ಬಲಿಷ್ಠ ನೆಲೆಗಟ್ಟು ನಿರ್ಮಿಸಿಕೊಡುವ ಕೆಲಸವನ್ನು ವೈಜ್ಞಾನಿಕ ಸಮೀಕ್ಷೆಯೊಂದು ಮಾಡಬಲದು. ಸಮೀಕ್ಷೆಯು ಮಹತ್ವದ್ದಾಗುವುದು ಏಕೆ ಮತ್ತು ಅದನ್ನು ತ್ವರಿತವಾಗಿ ಏಕೆ ನಡೆಸಬೇಕಿದೆ ಎಂಬುದನ್ನು ದೇವದಾಸಿ ಪದ್ಧತಿಯ ಇತಿಹಾಸವೇ ಹೇಳುತ್ತದೆ. ದೇವದಾಸಿಯರನ್ನು ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಸಂರಕ್ಷಕರು ಎಂದು ಹಿಂದೊಂದು ಕಾಲಘಟ್ಟದಲ್ಲಿ ಗೌರವದಿಂದ ಕಾಣಲಾಗುತ್ತಿತ್ತು ಎಂದು ಹೇಳಲಾಗುತ್ತ ದಾದರೂ, ಅವರು ಸಾಮಾಜಿಕ ಗೌರವವನ್ನು



ನಿಧಾನವಾಗಿ ಕಳೆದುಕೊಂಡರು. ದೇವದಾಸಿ ಪದ್ಧತಿಯು ಶೋಷಣೆ, ದೌರ್ಜನ್ಯ, ಮಾನವಹಕ್ಕುಗಳ ಉಲ್ಲಂಘನೆಯ ರೂಪವಾಗಿ ಮಾರ್ಪಾಡಾಯಿತು. ಕರ್ನಾಟಕ ದೇವದಾಸಿಯರ ಕಾಯ್ದೆ–1982ರ ಪ್ರಕಾರ, ಈ ಪದ್ಧತಿಯು ನಿಷೇಧಕ್ಕೆ ಒಳಗಾಗಿದ್ದರೂ ರಾಜ್ಯದ ಉತ್ತರ ಭಾಗ ಹಾಗೂ ಮಧ್ಯ ಭಾಗದ ಕೆಲವೆಡೆ ಇನ್ನೂ ಆಚರಣೆಯಲ್ಲಿದೆ. ಕುಟುಂಬ ಹಾಗೂ ಸಮಾಜದಿಂದ ದೂರವಾದ ಹಲವಾರು ಮಹಿಳೆಯರು ಇಂದಿಗೂ ಬಡತನದಲ್ಲಿ ಕಾಲ ತಳ್ಳುತ್ತಿದ್ದಾರೆ. ಈ ಪದ್ಧತಿಯ ಹಿಡಿತಕ್ಕೆ ಸಿಲುಕಿರುವವರನ್ನು ಗುರುತಿಸಲು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಘನತೆಯ ಬದುಕನ್ನು ನೀಡಲು 15 ಜಿಲ್ಲೆಗಳಲ್ಲಿ ನಡೆಯಲಿರುವ ಸಮೀಕ್ಷೆಯು ನೆರವಾಗಬಹುದು. ಲೈಂಗಿಕ ಅಲ್ಪಸಂಖ್ಯಾತ ಸಮುದಾಯದವರು ಎದುರಿಸುತ್ತಿರುವ ಸಮಸ್ಯೆಗಳು ಕೂಡ ಬಹಳ ತೀವ್ರವಾದುವೇ ಆಗಿವೆ. ಸಾಮಾಜಿಕ ಬಹಿಷ್ಕಾರ, ಆರ್ಥಿಕ ತಾರತಮ್ಯ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ವ್ಯವಸ್ಥೆಯು ಸೃಷ್ಟಿಸಿರುವ ಅಡ್ಡಿ ಆತಂಕಗಳು ಇವರನ್ನು ಕಾಡುತ್ತಿವೆ. ಈ ಸಮುದಾಯವು ನೆಲೆ ಕಳೆದುಕೊಂಡಿದೆ. ನಿರುದ್ಯೋಗಕ್ಕೆ ತುತ್ತಾಗಿದೆ, ಹಿಂಸೆಗೆ ಗುರಿಯಾಗಿದೆ. ಲೈಂಗಿಕ ಅಲ್ಪಸಂಖ್ಯಾತ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019' ಕಡತಗಳಲ್ಲಿ ಇದೆಯಾದರೂ, ಅನುಷ್ಠಾನದಲ್ಲಿನ ಲೋಪಗಳ ಕಾರಣದಿಂದಾಗಿ ಕಾಯ್ದೆಯು ಪರಿಣಾಮಕಾರಿ ಆಗಿ ಉಳಿದಿಲ್ಲ.

ವಿಶ್ವಾಸಾರ್ಹವಾದ ದತ್ತಾಂಶದ ಕೊರತೆಯು ಸಮಸ್ಯೆಯನ್ನು ಉಲ್ಬಣಗೊಳಿಸಿದೆ. ಈ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ರೂಪಿಸುವುದು ಕಷ್ಟಸಾಧ್ಯವಾಗಿದೆ. ಈಗ ನಡೆಯಲಿರುವ ಸಮೀಕ್ಷೆಯು ಲೈಂಗಿಕ ಅಲ್ಪಸಂಖ್ಯಾತರ ಮೊದಲ ಎಣಿಕೆ ಕಾರ್ಯದಂತೆ ಇರಲಿದೆ. ಇದೊಂದು ಮೈಲಿಗಲ್ಲು. ತಂತ್ರಜ್ಞಾನದ ನೆರವು ಪಡೆದು, ಮನೆ ಮನೆಗೆ ಭೇಟಿ ನೀಡಿ ನಡೆಸಲಿರುವ ಸಮೀಕ್ಷೆಯು ಈ ಸಮುದಾಯಗಳ ನಿಖರ ಸಂಖ್ಯೆಯನ್ನು ಗುರುತಿಸಬಹುದು. ಅಲ್ಲದೆ, ಈ ಸಮುದಾಯಗಳನ್ನು ನೆಚ್ಚಿಕೊಂಡಿರುವವರ ಸಮಸ್ಯೆಗಳೂ ನೀತಿ ನಿರೂಪಕರ ಗಮನಕ್ಕೆ ಬರುವಂತೆ ಆಗಬಹುದು. ಇದೆಲ್ಲಕ್ಕೂ ಮಿಗಿಲಾಗಿ, ಅಭಿವೃದ್ಧಿ ಕಾರ್ಯಕ್ರಮಗಳು ಅರ್ಹರನ್ನು ಸರಿಯಾಗಿ ತಲುಪುವಂತೆ ಮಾಡಲು ಸಮೀಕ್ಷೆಯು ಸರ್ಕಾರಕ್ಕೆ ನೆರವಾಗಲಿದೆ. ಸಮೀಕ್ಷೆಯು ಆರಂಭಿಕ ಹೆಜ್ಜೆ ಮಾತ್ರ. ಸಮೀಕ್ಷೆಯ ಮೂಲಕ ಸಂಗ್ರಹ ಆಗುವ ದತ್ತಾಂಶವನ್ನು ಬಳಸಿಕೊಂಡು ಅರ್ಥಪೂರ್ಣವಾದ ಕಾರ್ಯಗಳನ್ನು ಕೈಗೊಳ್ಳಬೇಕು. ಅದು ಅರ್ಹರಿಗೆ ಪಿಂಚಣಿ ನೀಡುವುದಾಗಿರಬಹುದು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೆರವು ನೀಡುವುದಾಗಿರಬಹುದು ಅಥವಾ ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿರಬಹುದು. ಸರ್ಕಾರವು ಈ ಸಮುದಾಯಗಳ ನಾಯಕರ ಜೊತೆ ಸಮಾಲೋಚನೆ ನಡೆಸಿ, ಸಮೀಕ್ಷೆಯಲ್ಲಿ ಎಲ್ಲರೂ ಭಾಗಿಯಾಗುವಂತೆ ಮಾಡಬೇಕು. ಸಮಾಜದ ಅಂಚಿಗೆ ತಳ್ಳಲಾಗಿರುವ ಸಮುದಾಯಗಳ ಸ್ಥಿತಿ–ಗತಿಯ ಮೇಲೆ ಬೆಳಕು ಚೆಲ್ಲಲು ಮುಂದಾಗುವ ಮೂಲಕ ರಾಜ್ಯ ಸರ್ಕಾರವು ಪ್ರಗತಿಪರವಾದ ಹೆಜ್ಜೆಯೊಂದನ್ನು ಇರಿಸಿದೆ.

# ಮಹಾಲಯ ಶ್ರಾದ್ಧ ಮಕ್ಕಳ ಕರ್ತವ್ಯ ..!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಪ್ರಪಂಚದಲ್ಲಿ ಹುಟ್ಟುವ ಪ್ರತಿಯೊಂದು ಜೀವಿಯೂ ಹುಟ್ಟುವಾಗಲೇ ಐದು ಋಣವುಳ್ಳವನಾಗುತ್ತಾನೆ. ದೇವಋಣ, ಋಷಿಋಣ, ಪಿತೃಋಣ, ಮನುಷ್ಯಋಣ ಮತ್ತು ಭೂತಋಣ. ದೇವತೆಗಳು, ಋಷಿಗಳು, ಪಿತೃಗಳು, ಮಾನವರು ಮತ್ತು ಪ್ರಾಣಿಗಳು ಇವರೆಲ್ಲರಿಂದ ನಾವು ನಾನಾವಿಧದ ಉಪಕಾರಗಳನ್ನು ಪಡೆಯುತ್ತೇವೆ. ಅವರ ಹಂಗಿಲ್ಲದೆ ಬದುಕುವ ಸಾಮರ್ಥ್ಯ ನಮಗಾರಿಗೂ ಇಲ್ಲವಾದ್ದರಿಂದ ಇವರೆಲ್ಲರ ಉಪಕಾರ ಸ್ಮರಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಈ ಸ್ಮರಣೆಯು ಕೇವಲ ಯಾಂತ್ರಿಕವಾಗಿರದೆ, ಅವುಗಳ ಮೂಲಕ ಭಗವಂತನ ಆರಾಧನೆಯಾಗಬೇಕು ಎಂದು ತಿಳಿಸುತ್ತವೆ ಶಾಸ್ತ್ರಗಳು. ಸ್ವಾಧ್ಯಾಯ ಮಾಡುವುದು, ಹವನ, ಶ್ರಾದ್ಧ, ಅನ್ನದಾನ ಮುಂತಾದವುಗಳು ಅರ್ಚನೆಗಳಾಗಿವೆ. ಪ್ರತಿಯೊಬ್ಬನೂ ತನ್ನ ತಂದೆತಾಯಿಗಳಿಗೆ ಮಗನೆಂದು ಹೇಗೆ ಅನ್ನಿಸಿಕೊಳ್ಳುತ್ತಾನೆ ಎಂಬ ಪ್ರಶ್ನೆಗೆ ಶಾಸ್ತ್ರೋಕ್ತವಾದ ಉತ್ತರ ಹೀಗಿದೆ:

ತಂದೆತಾಯಿಗಳು ಬದುಕಿರುವಾಗ ಅವರ ಧರ್ಮಸಮ್ಮತವಾದ ಮಾತುಗಳನ್ನು ನಡೆಸಿಕೊಡುತ್ತಾ ಸಂತೋಷಪಡಿಸಬೇಕು. ಮೃತರಾದ ಮೇಲೆ ಪ್ರತಿವರ್ಷ ಅವರ ಶ್ರಾದ್ಧವನ್ನು ಭಕ್ತಿಯಿಂದ ಮಾಡಬೇಕು. ವಿಷ್ಣುಪಾದವಿರುವ ಗಯಾಕ್ಷೇತ್ರದಲ್ಲಿ ಒಮ್ಮೆಯಾದರೂ ಪಿತೃತೃಪ್ತಿಗಾಗಿ ಪಿಂಡದಾನ ಮಾಡಬೇಕು. ಈ ಮೂರು ಕರ್ಮಗಳಿಂದಾಗಿ ಪುತ್ರ ಎನಿಸಬಲ್ಲ.

ಹೀಗಾಗಿ ಪಿತೃದೇವತೆಗಳ ಪ್ರೀತಿಯನ್ನು ಉದ್ದೇಶಿಸಿ, ಮೃತರಾದ ತಂದೆತಾಯಿಗಳ ಶ್ರಾದ್ಧವನ್ನು ಶ್ರದ್ಧೆಯಿಂದ ಆಚರಿಸಬೇಕಾದುದು ಮಗನ ಮುಖ್ಯಕರ್ತವ್ಯ. ಇದು ಪಿತೃಯಜ್ಞ. ಶಾಸ್ತ್ರ ತಿಳಿಸುವಂತೆ ವರ್ಷದಲ್ಲಿ 96 ಶ್ರಾದ್ಧಗಳು ವಿಹಿತವಾಗಿವೆ. ಅಷ್ಟು ಮಾಡಲು ಆಗದಿದ್ದಲ್ಲಿ ಕಾಲಶ್ರಾದ್ಧ ಮಹಾಲಯಶ್ರಾದ್ಧ ಎರಡನ್ನಾದರೂ ತಪ್ಪದೇ ಮಾಡಲೇಬೇಕು.

ತಂದೆತಾಯಿ ಮೃತರಾದ ದಿನದಂದು ತಿಥಿಯನುಸಾರ ಪ್ರತಿವರ್ಷ



ಮಾಡುವ ಶ್ರಾದ್ಧ ಕಾಲಶ್ರಾದ್ಧ. ಇನ್ನೊಂದು ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ, ಮೃತರಾದ ಸಮಸ್ತಬಂಧು, ಬಳಗ, ಮಿತ್ರ, ಗುರು ಮೊದಲಾದ ಎಲ್ಲರನ್ನೂ ಉದ್ದೇಶಿಸಿ ಅವರೆಲ್ಲರಿಗೂ ಪಿಂಡಪ್ರದಾನಗಳನ್ನು ಮಾಡುವುದು ಮಹಾಲಯ ಶ್ರಾದ್ಧ.

ತಾನು ಪ್ರತ್ಯಕ್ಷವಾಗಿ ಕಂಡಿದ್ದ, ಕಂಡಿರದ ಬಂಧುಬಳಗದವರಲ್ಲಿ ಬ್ರಹ್ಮಚಾರಿಯಾಗಿಯೇ ಮೃತರಾದವರಿಗೂ, ಕನ್ಯಾವಸ್ಥೆಯಲ್ಲಿ ಸತ್ತವರಿಗೂ, ಅಪಘಾತದಿಂದ ಮಡಿದವರಿಗೂ, ಕರ್ಮವನ್ನು ಮಾಡಲು ಅಧಿಕಾರಿಗಳೇ ಇಲ್ಲದಂತಹವರಿಗೂ ಪಿಂಡಪ್ರದಾನ ಮಾಡಿ ತೃಪ್ತಿಪಡಿಸುವ ಕ್ರಿಯೆ ಮಹಾಲಯಶ್ರಾದ್ಧ. ಅಲ್ಲದೆ ಜನ್ಮತಃ ದಿವ್ಯಾಂಗರಾಗಿ ಹುಟ್ಟಿ ಮೃತರಾದವರಿಗೂ, ಬೆಂಕಿ, ವಿದ್ಯುತ್, ಆಯುಧಗಳಿಂದ ಅಪಘಾತಗಳಿಂದ ಅಥವಾ ಮತ್ತಾವುದೇ ರೀತಿಯಿಂದ ದುರ್ಮರಣ ಹೊಂದಿದವರಿಗೂ, ಹೀಗೆ ಎಲ್ಲರ ಉದ್ಧಾರ ಮತ್ತು ತೃಪ್ತಿಗಾಗಿ ಅವರೆಲ್ಲರಿಗೂ ಧರ್ಮಪಿಂಡಗಳನ್ನು ಇಟ್ಟು ತೃಪ್ತಿಪಡಿಸುವ ಕ್ರಿಯೆ ಮಹಾಲಯಶ್ರಾದ್ಧ. ಮನುಷ್ಯನ ಮರಣಾನಂತರ ಮಾಡುವ ಈ ವಿಧಾನದಲ್ಲಿ ಕಣ್ಣಿಗೆ ಕಾಣಿಸದಿರುವ ಆತನ ನಾಮ, ಗೋತ್ರವನ್ನು ಹೇಳಿ ಭೂಮಿಯಲ್ಲಿ ಶ್ರಾದ್ಧ ಮಾಡಿದರೆ ಎಲ್ಲೋ ಇರುವ ಆತನಿಗೆ ಹೇಗೆ ಸಲ್ಲುತ್ತದೆ ಎಂಬ ಪ್ರಶ್ನೆಗೆ ಶಾಸ್ತ್ರವು ಸಮಂಜಸವಾದ ಉತ್ತರ ನೀಡಿದೆ:– ಭಗವಂತನು ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ ತನ್ನ ರೂಪಗಳಿಂದ ಪಿತೃದೇವತೆಗಳಲ್ಲಿ ಅಂತರ್ಗತನಾಗಿ ಇದ್ದು, ಈ ಪಿಂಡಪ್ರದಾನವೆಂಬ ಪೂಜೆಯನ್ನು ಸ್ವೀಕರಿಸಿ ತೃಪ್ತನಾಗುತ್ತಾನೆ. ಮೃತರಾದ ನಮ್ಮ ಸಂಬಂಧಿಕರು ಪಶು, ಪಕ್ಷಿ, ಮಾನವ ಹೀಗೆ ಯಾವ ಯೋನಿಯಲ್ಲಿ ಜನಿಸಿದ್ದರೂ ಅವರವರಿಗೆ ಯೋಗ್ಯವಾದ ಆಹಾರ–ನೀರು ಸಿಗುವಂತೆ ಮಾಡಿ ಅನುಗ್ರಹಿಸುತ್ತಾನೆ. ಇದು ಆ ಭಗವಂತನು ಮಾಡಿದ ಅದ್ಭುತ ವ್ಯವಸ್ಥೆ. ಶ್ರಾದ್ಧ ಮಾಡಲು ಅತ್ಯಂತ ಶ್ರೇಷ್ಠವಾದ ಮೂರು ಸಂಗತಿಗಳು – ಹೆಣ್ಣುಮಗಳ ಮಗ, ಮಧ್ಯಾಹ್ನ ಕಾಲ, ಎಳ್ಳು. ಇವೆಲ್ಲಕ್ಕಿಂತ ಮುಖ್ಯವಾಗಿ ಇರಬೇಕಾದುದು ಶ್ರದ್ಧೆ. ಶ್ರದ್ಧೆಯಿಂದ ಮಾಡಲೇಬೇಕಾದ್ದರಿಂದ ಈ ಕಾರ್ಯವನ್ನು 'ಶ್ರಾದ್ಧ' ಎಂದು ಶಾಸ್ತ್ರಗಳು ಕರೆದಿವೆ.

ಈ ಶ್ರಾದ್ಧಕ್ರಿಯೆಯಿಂದ ಸಂತೋಷಗೊಂಡ ಪಿತೃದೇವತೆಗಳು ಶ್ರಾದ್ಧ ಕರ್ತೃಗಳಿಗೆ, ಅವರ ಕುಟುಂಬಕ್ಕೆ ಸಕಲವಿಧವಾದ ಮಂಗಳ ಉಂಟಾಗುವಂತೆ ಆಶೀರ್ವದಿಸುತ್ತಾರೆ. ಇದರಿಂದ ಯಜಮಾನನ ಕುಟುಂಬಕ್ಕೆ ಸಕಲವಿಧ ಕ್ಷೇಮ–ಅಭಿವೃದ್ಧಿ ನಿಶ್ಚಿತ. ಹೀಗಾಗಿ ಜನ್ಮ ಕೊಟ್ಟು ಸಾಕಿ ಸಲಹಿದ ಪಿತೃಗಳಿಗೆ ಉಪಕಾರಸ್ಮರಣೆಯಿಂದ ಮಾಡಬೇಕಾದ ಶ್ರಾದ್ಧಕಾರ್ಯ ಮಕ್ಕಳ ಮುಖ್ಯ ಕರ್ತವ್ಯವಾಗಿದೆ. ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ 15 ದಿನಗಳಲ್ಲಿ ಒಂದು ದಿನವಾದರೂ ಮೃತ ತಂದೆತಾಯಿಗಳ ಶ್ರಾದ್ಧವನ್ನು ಶ್ರದ್ಧೆಯಿಂದ ಮಾಡಿ ಕೃತಜ್ಞತೆ ಸಲ್ಲಿಸೋಣ.

# ಅಭಿವೃದ್ಧಿಯ ನೇತಾರನ 'ಅ' ಪ್ರಮಾಣಿಕತೆಗೆ ವಿಷಾದ



ಹರೀಶ್ ಪುತ್ತೂರು
• ಉದಯವಾಹಿನಿ, ವಿಶೇಷ

ಅಂದಿನ ದುಡಿಮೆಗೆ ವಿಹಾರನ್ನಿಟ್ಟು ಎಲ್ಲೆಲ್ಲೋ ದೂರದಲ್ಲಿದ್ದರೂ ಸಹ ಊರಿಗೆ ಬಂದು ತಮ್ಮ ನೆಚ್ಚಿನ ನೇತಾರನ ಆಯ್ಕೆ ಪ್ರಕ್ರೀಯೆಗಳಿಗಾಗಿ ಹೆಬ್ಬೆರಳಿಂದ ಒತ್ತಿ ನಿಮ್ಮನ್ನು ಆಯ್ಕೆ ಮಾಡಿದ್ದಾರೆಂದರೆ ಅದು ಕೇವಲ ಪ್ರಚಾರಕ್ಕಾಗಿ ಅಲ್ಲ. ಅದೇ ಸ್ಥಾನದಲ್ಲಿ ಬೇರೆಯವರನ್ನು ಕೂರಿಸಬಹುದಿತ್ತು ಆದರೆ ಜನ ಅಗಾಧ ಮನಸು ಮಾಡಿ ನಿಮ್ಮನ್ನು ಆರಿಸಿರುವುದು ಅಭಿವೃದ್ಧಿಯ ದೃಷ್ಟಿಯಿಂದ ವಿನಃ ಬೇರೆ ಯಾವುದೇ ಕಾರಣಕ್ಕೂ ಅಲ್ಲ ಅನ್ನೋದು ಅದೊಂದು ಘಟನೆಯಿಂದ ತಿಳಿಯಿತು. ಹೆದ್ದಾರಿಯಲ್ಲಿನ ಒಂದು ಗುಂಡಿ ಒಬ್ಬ ಮಹಿಳೆಯ ಜೀವ ಬಲಿ ಪಡೆದುಕೊಂಡ ಘಟನೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕೂಳೂರಿನ ಜನರ ಸಂಕಟವನ್ನು ಅರ್ಥ ಮಾಡಿಕೊಳ್ಳುವರೆ ಸ್ಥಳಿಯ ಜನಪ್ರತಿನಿಧಿಗಳು..! ಅಂದು ಅಭಿವೃದ್ಧಿಯೆ ನಮ್ಮ ಮೊದಲ ಗುರಿ ಎಂದವರು ಇಂದು ಹೆದ್ದಾರಿಯಲ್ಲಿನ ಗುಂಡಿ ಮಾಯ ಮಾಡುವುದಕ್ಕೂ ಯೋಗ್ಯತೆ ಇಲ್ಲದರಾಗಿ ಬಿಟ್ಟ ಪರಿಸ್ಥಿತಿ ನೋಡಿ ಹೆಬ್ಬೆರಳೊತ್ತಿ ಆಯ್ಕೆ ಮಾಡಿದ ಜನರೆ ದಂಗಾದರು. ಬೆಳ್ಳಂಬೆಳಗ್ಗೆಯೆ ಹೆದ್ದಾರಿಯ ಗುಂಡಿಯಲ್ಲೆ ಕಾದು ಕುಳಿತ ಯಮರಾಯನ ಕೈಗೆ ಸಿಕ್ಕಿ ಮಹಿಳೆಯೊಬ್ಬರು ಬಲಿಯಾದರು.




ರಸ್ತೆಯಲ್ಲಿರುವ ಅದೊಂದು ಗುಂಡಿಯ ಕಾರಣದಿಂದಾಗಿ ಒಂದು ಪ್ರಾಣ ಪಕ್ಷಿಯೆ ಹಾರಿ ಹೋಯ್ತು, ಈ ರೀತಿಯ ಘಟನೆಗಳು ಒಂದಲ್ಲ ಇನ್ನು ಅನೇಕ. ಯಾವೊಬ್ಬ ನಿರ್ದಿಷ್ಟ ರಾಜಕಾರಣಿ ಎಮ್ಮೆ ಹಾಲು ಕುಡಿದಿರುವುದಾಗಿ ಯಾವುದೇ ವರದಿಗಳು ಇಲ್ಲ, ಆದಾಗ್ಯೂ, ಎಮ್ಮೆ ಹಾಲು ಆರೋಗ್ಯಕ್ಕೆ ಉತ್ತಮ ಅಂತಾರೆ, ಇನ್ನು ಕೆಲವರು ಇದರಿಂದ ದಟ್ಟತನ ಶುರುವಾಗುತ್ತದೆ ಅಂತಾರೆ. ಇಲ್ಲಿ ನಂಬುವುದಕ್ಕೂ ಅಸಾಧ್ಯ, ಹಾಗಾಗಿ ಒಮ್ಮೆ ಉಪಯೋಗಿಸಿ ತಿಳಿದಿಕೊಳ್ಳಬೇಕಷ್ಟೆ. ಈ ಸಾಲು ಯಾಕೆ ಇಲ್ಲಿ ಉಲ್ಲೇಖವಾಗಿದೆ ಅಂದರೆ ನಿಮಗೆ ಅರ್ಥವಾಗುವ ವರೆಗೂ ಓದಿ.

ವೇದಿಕೆಯೊಂದು ಸಿಕ್ಕರೆ ಮೈಕ್ ಸೆಟ್ ತುಂಡು ತುಂಡಾಗಿ ಹಾರುವ ಹಾಗೆ ಭಾಷಣ ಬಿಗಿದ ಅವರ ಮಾತು ಮಾತಿಗೆ ಕೈಚಪ್ಪಾಳೆ ತಟ್ಟಿದಿರಿ.! ಇದು ಭಾಷಣ ಬಿಗಿದವರ ತಪ್ಪಲ್ಲ. ಜನರೆ ನೀವು ಅಂದು ಅರ್ಥ ಮಾಡಿಕೊಳ್ಳಬೇಕಿತ್ತು ಹಿಂದೆ ಮುಂದೆ ಜೊತೆಗಿದ್ದು ಡೋಲು ಡಂಗುರ ಬಾರಿಸಿ ಮೆರವಣಿಗೆ ಮಾಡಿ ನೀವೆ ನಮ್ಮ ನೆಚ್ಚಿನ ನಾಯಕ ಅಂದಿರಲ್ಲವೆ ಇದುವೆ ದೊಡ್ಡ ತಪ್ಪು. ಇದು ಕೇವಲ ನನ್ನಭಿಪ್ರಾಯವಲ್ಲ ದ.ಕ ಜಿಲ್ಲೆಯ ಕೆಲವು ಜನರ ಮನದ ಬೇಗುದಿಯಲ್ಲಿ ಬೇಯುತ್ತಿರುವ ನೋವಿನ ಕಥನ. ನಿಂತಲ್ಲಿ ಕುಂತಲ್ಲಿ ಅಭಿವೃದ್ಧಿಯ ಪರ್ವ ಜಪಿಸುವ ನೀವುಗಳು, ಕೋಟಿ ಕೋಟಿ ರೂಗಳ ಅನುದಾನ ತಂದು ಇಡೀ ಲೋಕವನ್ನೆ ಬದಲಾಯಿಸುವ ನೀಲ ನಕ್ಷೆಯ ಭೂಪಾಟ ಹಾರಿಸಿ ಓಟು ಹಾಕಿಸಿಕೊಂಡಿರುವ ನಿಮ್ಮ ಬೇಜವಾಬ್ದಾರಿತನಕ್ಕೆ ಮತ ನೀಡಿ ಜೈಕಾರ ಹಾಕಿದವರ ಬಾಯಿಂದಲೆ ಉಗಿಸಿಕೊಳ್ಳುವ ಮಟ್ಟಕ್ಕೆ ಕೀಳುತನದ ಅಧಿಕಾರ, ರಾಜಕೀಯ ಮಾಡಿದರೇನು ಫಲ, ಮುಂದಿನ ಬಾರಿ ಪಕ್ಷ ಟಿಕೇಟ್ ನೀಡಿಲ್ಲವೆಂದರೂ ಸ್ವತಂತ್ರ ಅಭ್ಯರ್ಥಿಯಾಗಿ ಜನರ ಒಮ್ಮತದ ಬೆಂಬಲದೊಂದಿಗೆ ಗೆದ್ದು ಬೀಗುವ ಸಾಮರ್ಥ್ಯ ಬೇಕು. ಆ ರೀತಿಯ ನಾಯಕತ್ವ ನಿಮ್ಮಲ್ಲಿರುತ್ತಿದ್ದರೆ ರಸ್ತೆಯಲ್ಲಿ ಆ ರೀತಿಯ ಹೊಂಡಗುಂಡಿಗಳಿರುತ್ತಿರಲಿಲ್ಲ, ಜನ ಆಕ್ರೋಶ ಪಡುತ್ತಿರಲಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿನ ರಸ್ತೆಗಳಲ್ಲೆ ಸಾಲು ಸಾಲು ಹೊಂಡ ಗುಂಡಿಗಳು, ರಾಷ್ಟ್ರಪತಿಗಳು ಬರುತ್ತಾರೆ, ಪ್ರಧಾನಿ, ಮುಖ್ಯಮಂತ್ರಿ ಬರುವ ವಿಷಯ ಗೊತ್ತಾದಾಗ ರಸ್ತೆಯ ಗುಂಡಿಗೆ ಒಂದೇ ದಿನದಲ್ಲಿ ತೇಪೆ ಹಾಕುವರು, ಅದೇ ಬಡ ಜನರು ಮಾತ್ರ ಆ ರಸ್ತೆಯಲ್ಲಿ ಬಿದ್ದು ಸತ್ತರು ಕೂಡ ತೇಪೆ ಹಾಕೋಕೆ ಮಿನಾಮೇಶ ಎಣಿಸುವ ರಾಜಕಾರಣಿಗಳು. ಇನ್ನು ಗ್ರಾಮಾಂತರ ಪ್ರದೇಶಗಳ ಅವ್ಯವಸ್ಥೆ ಹೇಗಿರಬಹುದೆಂದು ಸಮಾಜ ಯೋಚಿಸಿಬೇಕು.

# ಕಣ್ಣಿನ ತೊಂದರೆಗೆ ವೈದ್ಯರ ಸಲಹೆ

ಬೆಳಿಗ್ಗೆ ಎದ್ದ ಕೂಡಲೆ ಮುಖ ತೊಳೆಯುವಾಗ, ಬಾಯಲ್ಲಿ ನೀರನ್ನು ತುಂಬಿಸಿಕೊಂಡು ಕಣ್ಣುಗಳಿಗೆ ನೀರನ್ನು ಸಿಂಪಡಿಸುವುದರಿಂದ ಕಣ್ಣುಗಳು ಶುದ್ಧಹಾಗೂ ಫ್ರೆಶ್ ಆಗುತ್ತದೆ. ಆದರೆ ಅತಿಯಾದ ಶೀತ ಮತ್ತುಬಿಸಿನೀರಿನಿಂದ ಕಣ್ಣನ್ನು ಶುದ್ಧಮಾಡಬಾರದು.

ಸೂರ್ಯೋದಯವಾಗುವ ಸಮಯದಲ್ಲಿ ಸೂರ್ಯನನ್ನು ನೋಡುವುದರಿಂದ ದೃಷ್ಟಿ ಉತ್ತಮವಾಗುತ್ತದೆ. ಅಲ್ಲದೆ ಮೂರನೆ ಕಣ್ಣು ಎಂದು ತಿಳಿಸುವಪೀನಲ್ ಗ್ರಂಥಿಯು ಪ್ರಚುರವಾಗುತ್ತದೆ. ಸೂರ್ಯನ ತೀಕ್ಷ್ಣ ಕಿರಣಗಳನ್ನು ನೋಡಬಾರದು. ಕಣ್ಣಿನ ತೊಂದರೆಗಳನ್ನು ನಿವಾರಿಸಲು ಬಹು ಉಪಕಾರಿ. ಕಣ್ಣುಗಳನ್ನು ಮಿಟುಕಿಸದೆಕತ್ತಲೆ ಕೋಣೆಯಲ್ಲಿ ತುಪ್ಪದ ದೀಪದ ಜ್ಯೋತಿಯನ್ನು 2–3 ನಿಮಿಷ ಸತತವಾಗಿ ನೋಡುವುದರಿಂದ ದೃಷ್ಟಿಯ ಶಕ್ತಿ ಮತ್ತು ಕಣ್ಣಿನ ಕಾಂತಿ ಹೆಚ್ಚುವುದು. ಪಾದಗಳನ್ನುಗಿಡಮೂಲಿಕೆಯುಕ್ತವಾದ ಎಣ್ಣೆಯನ್ನು ಸ್ವಲ್ಪ ಬೆಚ್ಚಗೆ ಮಾಡಿ ಹಚ್ಚಿ, ಮೃದುವಾಗಿ ಅಭ್ಯಂಜನ ಮಾಡುವುದರಿಂದ ರಕ್ತಸಂಚಾರಹೆಚ್ಚಾಗಿ, ದೃಷ್ಟಿಯ, ಮಾನಸಿಕ ಆರೋಗ್ಯ ಮತ್ತು ಮನಸ್ಥಿತಿ ಉತ್ತಮಗೊಳ್ಳುತ್ತದೆ. ಅಭ್ಯಂಜನದಿಂದಪಾದಗಳಲ್ಲಿನ ದೃಷ್ಟಿಗೆ ಸಂಬಂಧಿಸಿದ ಕೆಲವು ನಿರ್ದಿಷ್ಟ ಬಿಂದುಗಳನ್ನು ಪ್ರಚುರವಾಗುತ್ತದೆ. ಆರ್ದ್ರೆ, ಜ್ವರ, ಶೀತ, ನೆಗಡಿ ಇದ್ದಾಗ ಮಾಡಬಾರದು. ಅಕ್ಷಿ ತರ್ಪಣ, ಕ್ರಿಯಾ ಕಲ್ಪ ಚಿಕಿತ್ಸೆಗಳು, ನಶ್ಯ ಕರ್ಮ ಬಹು ಉಪಯೋಗಿ ಆದರೆ ಆಯುರ್ವೇದ ವೈದ್ಯರ ನಿರ್ದೇಶನದ ಮೇಲೆ ಚಿಕಿತ್ಸೆ ಪಡೆಯಬೇಕು.



# ಯೂರಿಕ್ ಆಮ್ಲ ಹೆಚ್ಚಾದಾಗ, ಕಾಣಿಸಿಕೊಳ್ಳುವ ರೋಗಲಕ್ಷಣ

ಇಂದಿನ ಕಾರ್ಯನಿರತ ಜೀವನದಲ್ಲಿ, ನಮ್ಮಲ್ಲಿ ಬಹುತೇಕ ಜನರು ಒಂದಲ್ಲ ಒಂದು ಕಾಯಿಲೆಯಿಂದ ಬಳಲುತ್ತಿದ್ದಾರೆ. ಕೆಟ್ಟ ಆಹಾರ ಪದ್ಧತಿ ಮತ್ತು ಅನಾರೋಗ್ಯಕರ ಜೀವನಶೈಲಿ ಇದಕ್ಕೆ ಕಾರಣ. ಪ್ರಮುಖವಾಗಿ ಇಂದಿನ ದಿನಗಳಲ್ಲಿ ಸಣ್ಣ ವಯಸ್ಸಿಗೆ ಬಿಪಿ–ಶುಗರ್ ಕಾಯಿಲೆಗಳು ಕಾಣಿಸಿಕೊಳ್ಳುವ ವುದರ ಜೊತೆಗೆ ನಮ್ಮಲ್ಲಿ ಹೆಚ್ಚಿನವರು ಯೂರಿಕ್ ಆಮ್ಲದ ಸಮಸ್ಯೆಯಿಂದಲೂ ಕೂಡ ಬಳಲುತ್ತಿದ್ದಾರೆ. ಅದರಲ್ಲೂ ದೇಹದಲ್ಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾದರೆ, ಕೀಲು ನೋವು, ಊತ ಹಾಗೂ ನಡೆಯುವಾಗಲೂ ಕೂಡ ಸಮಸ್ಯೆಯನ್ನು ಎದುರಿಸುತ್ತಾರೆ.

**ರಾತ್ರಿಯಲ್ಲಿ ತೀವ್ರ ಕೀಲು ನೋವು:** ದೇಹದಲ್ಲಿ ಯೂರಿಕ್ ಆಮ್ಲದ ಹೆಚ್ಚಾಗಿರುವ ಸಾಮಾನ್ಯ ಲಕ್ಷಣ ವಾಗಿದೆ, ಇದು ಹೆಚ್ಚಾಗಿ ರಾತ್ರಿಯಲ್ಲಿ ಹದಗೆಡುತ್ತದೆ. ಯೂರಿಕ್ ಆಮ್ಲದ ಮಟ್ಟ ಹೆಚ್ಚಾದಾಗ, ಅದು ದೇಹದ ಕೀಲುಗಳಲ್ಲಿ ಹರಳುಗಳ ರೂಪದಲ್ಲಿ ಸಂಗ್ರಹವಾಗುತ್ತದೆ. ಉದಾಹರಣೆಗೆ ಕಾಲ್ಬೆರಳುಗಳು. ಇದು ಕೀಲುಗಳಲ್ಲಿ ಹಠಾತ್ ತೀಕ್ಷ್ಣವಾದ, ಇರಿತದ ನೋವನ್ನು ಉಂಟುಮಾಡುತ್ತದೆ. ಈ ನೋವು ಎಷ್ಟು ತೀವ್ರ ಆಗಿರುತ್ತದೆಯೆಂದರೆ ಅದು ನಿಮ್ಮ ನಿದ್ರೆಯನ್ನು ಹಾಳು ಮಾಡುತ್ತದೆ ಮತ್ತು ಬೆಡ್‌ಶೀಟ್‌ನ ಸಣ್ಣ ಸ್ಪರ್ಶ ಕೂಡ ಅಸಹನೀ ಯವೆನಿಸಬಹುದು.



**ಪದೇ ಪದೇ ಮೂತ್ರ ವಿಸರ್ಜನೆ:** ಹೆಚ್ಚಿನ ಯೂರಿಕ್ ಆಮ್ಲವು ಮೂತ್ರಪಿಂಡಗಳಿಗೆ ನೇರವಾಗಿ ಸಂಬಂಧಿಸಿದೆ.

ಯೂರಿಕ್ ಆಮ್ಲದ ಮಟ್ಟವು ತುಂಬಾ ಹೆಚ್ಚಾದಾಗ, ಮೂತ್ರಪಿಂಡಗಳ ಮೇಲೆ ಹೆಚ್ಚುವರಿ ಒತ್ತಡ ಉಂಟಾಗುತ್ತದೆ. ಅದು ಅದನ್ನು ಫಿಲ್ಟರ್ ಮಾಡಿ ದೇಹದಿಂದ ತೆಗೆದುಹಾಕಲು ಪ್ರಯತ್ನಿಸು ತ್ತಲೇ ಇರುತ್ತದೆ.

**ರಾತ್ರಿಯಲ್ಲಿ ಬೆವರುವುದು ಮತ್ತು ಚಡಪಡಿಕೆ:** ದೇಹದಲ್ಲಿ ಉರಿಯೂತ ಮತ್ತು ನಿರಂತರ ನೋವು ದೇಹದ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಈ ಕಾರಣದಿಂದಾಗಿ, ಅನೇಕ ಜನರು ರಾತ್ರಿಯಲ್ಲಿ ಅತಿಯಾಗಿ ಬೆವರು ಮಾಡಬಹುದು ಅಥವಾ ಯಾವುದೇ ನಿರ್ದಿಷ್ಟ ಕಾರಣವಿಲ್ಲದೆ ಚಡಪಡಿಕೆ ಮತ್ತು ಅನಾನುಕೂಲತೆಯನ್ನು ಅನುಭವಿಸಬಹುದು.



# ರಾಮಾಯಣ

## ಜಟಾಯುವಿನ ವೃತ್ತಾಂತ

• ಹಿಂದಿನ ಸಂಚಿಕೆಯಿಂದ 119ನೆಯ ಅಧ್ಯಾಯ

ಆ ಮಾತನ್ನು ಕೇಳಿ ಶ್ರೀರಾಮನು ಆ ಪಕ್ಷಿಯು ತಮ್ಮ ತಂದೆಯ ಪ್ರಿಯಸಖನೆಂದೆಣಿಸಿ ವಂದಿಸಿ ಎಲೈ ಪಕ್ಷಿರಾಜನೆ, ನಿನ್ನ ಕುಲವಾವುದು? ನಿನ್ನ ಹೆಸರೇನು? ಎಂದು ಕೇಳಿದನು. ಆ ಪಕ್ಷಿರಾಜನು ತನ್ನ ಸ್ವರೂಪವನ್ನೂ ವಂಶವನ್ನೂ ಉತ್ಪತ್ತಿಯನ್ನೂ ಕ್ರಮವಾಗಿ ಹೇಳುವುದಕ್ಕೆ ತೊಡಗಿದನು. ರಾಜಕುಮಾರ, ಪೂರ್ವಕಾಲದಲ್ಲಿ ಕರ್ದಮ, ವಿಕ್ರೀತ, ಶೇಷ, ಸಂಶ್ರಯ, ಬಹುಪುತ್ರ, ಸ್ಥಾಣು, ಮರೀಚಿ, ಅತ್ರಿ ಕ್ರತು, ಪುಲಸ್ತ್ಯ, ಆಂಗೀರಸ್ಕ ಪ್ರಚೇತ, ವುಲಹ, ದಕ್ಷ, ವಿವಸ್ವಂತ, ಅರಿಷ್ಟನೇಮ್ಮಿ ಕಶ್ಯಪ ಎಂಬ ಪ್ರಜಾಪತಿಗಳು ಜನಿಸಿದರು. ಅವರಲ್ಲಿ ದಕ್ಷಬ್ರಸ್ಮನಿಗೆ ಅರುವತ್ತು ಮಂದಿ ಹೆಣ್ಣುಮಕ್ಕಳು ಜನಿಸಿದರು.


ಅವರಲ್ಲಿ ಕಶ್ಯಪಬ್ರಹ್ಮನು ಅದಿತಿ, ದಿತಿ, ದನು, ಕಾಳಿಕೆ, ತಾಮ್ರೆ, ಕ್ರೋಧವಶೆ, ಮನು, ಅನಲೆ ಎಂಬ ಎಂಟು ಕನ್ಯಕೆಯರನ್ನು ವಿವಾಹವಾದನು , ಅವರನ್ನು ಕುರಿತು ಮಹಾಪರಾಕ್ರಮಿಗಳಾಗಿ ಮೂರು ಲೋಕಗಳನ್ನೂ ಆಳಬಲ ಮಕ್ಕಳನ್ನು ನನ್ನಿಂದ ಪಡೆಯಬಹುದೆಂದು ಹೇಳಿದನು. ಆ ಮಾತನ್ನು ಅದಿತಿ, ದಿತ್ತಿ ಕಾಳಿಕ ಎಂಬುವವರು ಮಹಾಪ್ರಸಾದವೆಂದು ಅಂಗೀಕರಿಸಿದರು. ಮಿಕ್ಕವರು ಸುಮ್ಮನಿದ್ದರು. ಅದಿತಿ ಎಂಬುವವಳಿಗೆ ಕಶ್ಯಪಬ್ರಹ್ಮನಿಂದ ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು, ಅಶ್ವಿನೀದೇವತೆಗಳ್ಳಿಬ್ಬರು.. ಹೀಗೆ ಮೂವತ್ತುಮೂರು ಮಂದಿ ಮಕ್ಕಳು ಜನಿಸಿದರು. ದಿತಿಯಲ್ಲಿ ಮಹಾಪರಾಕ್ರಮಿಗಳಾದ ದೈತ್ಯರು ಜನಿಸಿದರು ದನು ಎಂಬುವವಳು ಅಶ ಗ್ರೀವನೆಂಬ್ಬ ಕುಮಾರನನ್ನು ಪಡೆದಳು ಕಾಳಿಕೆಯು ಕಾಳಕ ನರಕರೆಂಬ ಕುಮಾರರನ್ನು ಪಡೆದಳು. ತಾಮ್ರೆ ಎಂಬ ಸ್ತ್ರೀಯಲ್ಲಿ ಕ್ರೌಂಚ, ಭಾಸಿ, ಶ್ಯೇದಿ, ಧೃತರಾಷ್ಟ್ರಿಕಾ ಶುಕೆ ಎಂಬ ಐದುಮಂದಿ ಕುಮಾರಿಯರು ಜನಿಸಿದರು. ಅವರಲ್ಲಿ ಹಿರಿಯ ಮಗಳಾದ ಕ್ರೌಂಚಿಯಿಂದ ಗೂಜೆಗಳು ಜನಿಸಿದವು. ಭಾಷೆಯಿಂದ ಭಾಸಗಳೆಂಬ ಪಕ್ಷಿವಿಶೇಷಗಳು ಜನಿಸಿದವು. ಶ್ಯೇನಿ ಎಂಬುವವಳು ಹದ್ದಾಗಳನ್ನು ಪಡೆದಳು. ಧೃತರಾಷ್ಟ್ರ ಎಂಬುವವಳಲ್ಲಿ ಹಂಸಗಳೂ ಕಲಹಂಸಗಳೂ ಚಕ್ರವಾಕಪಕ್ಷಿಗಳೂ ಜದಿಸಿದವು. ಶುಕಿ ಎಂಬ ಕಡೆಯ ಮನಸಲ್ಲಿ ನತೆಯೂ ನತೆಗೆ ವಿನತೆಯೂ ಜನಿಸಿದರು. ಕ್ರೋಧವಶೆ ಎಂಬ ಕಶ್ಯಪಪತ್ನಿಯು ಮೃಗಿ, ಪೃಗಮರಣೆ, ಹರಿ, –ಭದ್ರಮದೆ, ಮಾತಂಗಿ, ಶಾರ್ದೂಲ, ಶ್ವೇತೆ, ಸುರಭಿ, ಸಂರಸೆ; ಕದ್ರ ಪಂಬ ಹತ್ತು ಮಂದಿ–ಹೆಣ್ಣುಮಕ್ಕಳನ್ನು ಪಡೆದಳು. ಮೃಗಮಂದೆಯಲ್ಲಿ ಕರಡಿಗಳೂ ಚೌರೀಮೃಗಗಳೂ ಜನಿಸಿದವು. ಭದ್ರಮದೆಯಲ್ಲಿ ಇರಾವತಿ ಎಂಬುವವಳು ಜನಿಸಿದಳು. ಇರಾವತಿಯಲ್ಲಿ ಲೋಕವುಸಿದ್ದವಾದ ಐರಾವತವು ಜನಿಸಿತು. ಹರಿ ಎಂಬುವವಳಲ್ಲಿ ಕಪಿಗಳು ಜನಿಸಿದುವು. ಮಾತಂಗಿಯಲ್ಲಿ ಆನೆಗಳು ಜನಿಸಿದವು. ಶಾರ್ದೂಲಿಯಲಕ್ಕಿ ಮುಸುವುಗಳೂ ಹುಲಿಗಳೂ ಜನಿಸಿದವು. ಶೆ ಕತೆಯಲ್ಲಿ ಅಷ್ಟ ದಿಗ್ಗ ಜಗಳು ಜನಿಸಿದವು. ಸುರಭಿಯಲ್ಲಿ ರೋಹಿಣಿ ಗಂಧರ್ವಿ ಎಂಬ ಇಬ್ಬರು ಕುಮಾರಿಯರು ಜನಿಸಿದರು. ರೋಹಿಣಿಯಲ್ಲಿ ಗೋವುಗಳು ಜನಿಸಿದವು. ಗಂಧರ್ವಿಯಲ್ಲಿ ಕುದುರೆಗಳು ಜನಿಸಿದವು. ಸುರಸೆಯಲ್ಲಿ ಪಾತಾಳಲೋಕದಲ್ಲಿರುವ ನಾಗಗಳು ಜನಿಸಿದವು. ಕದ್ರುವಿನಲ್ಲಿ ಸರ್ಪಗಳು ಜನಿಸಿದವು. ಮನುವಿನಲ್ಲಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ಜಾತಿಗಳ ಮನುಷ್ಯರು ಜನಿಸಿದರು. ಅನಲೆಯಲ್ಲಿ ಫಲಗಳನ್ನು ಕೊಡುವ ಪುಣ್ಯವೃಕ್ಷಗಳು ಜನಿಸಿದವು. ವಿನತೆಯು ಶುಕಿಯ ಮೊಮ್ಮಗಳು. ಕದ್ರು ಸುರಸೆ ಎಂಬುವವರು ವಿನತೆಯ ಒಡಹುಟ್ಟಿದವರು. ಅವರಲ್ಲಿ ಕದ್ರು ಮಹಾಶೇಷನನ್ನು ಪಡೆದಳು. ವಿನತೆಯು ಅರುಣ ಗರುಡರೆಂಬ ಇಬ್ಬರು ಕುಮಾರರನ್ನು ಪಡೆದಳು. ಅರುಣನಿಂದ ಶ್ಯೇನಿ ಎಂಬ ಸ್ತ್ರೀಯಲ್ಲಿ ನನ್ನ ಅಣ್ಣನಾದ ಸಂಪಾತಿಯೂ ನಾನೂ ಜನಿಸಿದೆವು. ನನ್ನ ಹೆಸರು ಜಟಾಯು. ನಾನು ನಿನಗೆ ಸಹಾಯ ವಾಗಿರುತ್ತೇನೆ.

ಮುಂದುವರಿಯುವುದು...

# ವಿಕಲಚೇತನರಿಗೆ ಸಾಮಾಜಿಕ ನ್ಯಾಯ ಮರೀಚಿಕೆ

• ಉದಯವಾಹಿನಿ, ಬೆಂಗಳೂರು

ಆಡಳಿತ ಶಾಹಿಯ ಮೀಸೆ ತಿರುವುವ ಕರಾಳ ಮುಖವನ್ನು ಎತ್ತಿ ಹಿಡಿದಿದೆ ಎಂದು ಸ್ಪಷ್ಟವಾಗಿ ಹೇಳಬಹುದು . ಕಳೆದ 40 ವರ್ಷಗಳಿಂದ ವಿಕಲಚೇತನರ ನ್ಯಾಯಯುತ ಸೌಲಭ್ಯ ಮತ್ತು ಹಕ್ಕುಗಳಿಗಾಗಿ ವಿವಿಧ ವೇದಿಕೆಗಳಲ್ಲಿ ಹೋರಾಡುತ್ತಿರುವ ಅಧ್ಯಕ್ಷನಾದ ನನಗೆ ಎದುರಾಗಿರುವ ಅಡ್ಡಿ ಆತಂಕಗಳು ಒಂದೆರಡಲ್ಲ . ಭಾರತೀಯ ರೈಲ್ವೆಯ ವಿಕಲಚೇತನರ ರಿಯಾಯಿತಿ ಪಾಸಿನಲ್ಲಿರುವ ತಾರತಮ್ಯದ ಬಗ್ಗೆ ಅಂಗವಿಕಲರ ಮುಖ್ಯ ಆಯುಕ್ತರ ನ್ಯಾಯಾಲದಲ್ಲಿ ದಾವೆ ಹೂಡಿ ಕೋರ್ಟ್ ಆದೇಶದ ಮೂಲಕ



ಎಲ್ಲಾ ವಿಕಲಚೇತನರಿಗೆ ರಿಯಾಯಿತಿ ಪ್ರಯಾಣದ ಪಾಸು ವಿತರಿಸಬೇಕೆಂದು ಆದೇಶ ಹೊರಡಿಸಿದ್ದರೂ ಕೂಡಾ ರೈಲ್ವೆ ಇಲಾಖೆ ಇಲ್ಲದ ಸಬೂಬುಗಳನ್ನು ಹೇಳಿ ವಿಕಲಚೇತನರಿಗೆ ಸಹಾನುಭೂತಿ ತೋರಿಸುವುದು ಬಿಟ್ಟು ಕಾನೂನು ಸಂಘರ್ಷಕ್ಕೆ ಹೆದ್ದಾರಿ ರಚಿಸಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೂ ಇದಕ್ಕೆ ಹೊರತಾಗಿಲ್ಲ ಕಾರಣ ಅಂಗವಿಕಲರ ರಾಜ್ಯ ಆಯುಕ್ತರಿಂದ ನೋಟಿಸ್, ಸೂಚನೆಗೂ ರಾಜ್ಯ ಸರಕಾರ ಬಗ್ಗದೆ ಹಣಕಾಸು ಅಡಚಣೆಯ ನೆಪ ಹೇಳಿ ಜಾರಿಕೊಳ್ಳುತ್ತುತ್ತಿದೆಯಲ್ಲದೆ ವಿಕಲಚೇತನರ ನ್ಯಾಯಾಲಗಳು ಸರಕಾರಗಳಿಂದ ನೇಮಕಗೊಂಡಿರುವ ಕಾರಣಗಳಿಂದ ಕಾನೂನು ಕ್ರಮಕ್ಕೆ ಹಿಂಜರಿಯುವ ಸ್ಥಿತಿ ಇದೆ. ಇನ್ನು ರಾಷ್ಟ್ರೀಕೃತ, ಖಾಸಗಿ ಬ್ಯಾಂಕ್ ವಿಷಯ ಕೇಳಲೇ ಬೇಡಿ ವಿಕಲಚೇತನರ ವಿಷಯದಲ್ಲಿ ಕಠಿಣ ರೀತಿಯಿಂದ ನಡೆದುಕೊಂಡು ಬ್ಯಾಂಕ್ ಇಂದು ಅವಿದ್ಯಾವಂತರ ತಾಣವಾಗಿ ಪರಿವರ್ತಿತ ಗೊಂಡಿರುವುದು ಇಂದಿನ ವಾಸ್ತವ ಸತ್ಯ. ಇದಲ್ಲದೆ ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಹಲ್ಲಿಲ್ಲದ ಹಾವಿನ ಸ್ಥಿತಿಯನ್ನು ರಾಜ್ಯ ಸರಕಾರವು ನಿರ್ಮಿಸಿರುವುದು ಕೂಡಾ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆ ಕುಸಿಯಲು ಕಾರಣ ಆಗಿದೆ. ಕೆಲವೊಂದು ಸಂದರ್ಭಗಳಲ್ಲಿ ವಿಕಲಚೇತನರ ನ್ಯಾಯಾಲವೇ ಇಂತಹ ಸಮಸ್ಯೆಗಳ ವಿಚಾರಣೆಗೆ ಸರಕಾರಗಳ ಧೋರಣೆಗಳಿಂದ ಬೇಸತ್ತು ದೂರುಗಳ ವಿಚಾರಣೆ ನಡೆಸಲು ಹಿಂಜರಿಯುತ್ತಿರುವ ಅನುಭವವೂ ಆಗುತ್ತಿವೆ. ಇಂತಹ ಅಧಃ ಪತನಗಳಿಗೆ ಕಾಲವೇ ಉತ್ತರಿಸುತ್ತದೆ ಎಂಬ ಆಶಾಭಾವನೆ ಮಾತ್ರ ವಿಕಲ ಚೇತನರ ಓಯಸಿಸ್ ಆಗಿರಿರುವುದು ಒಂದು ಸಾಮಾಜಿಕ ದುರಂತವಾಗಿದೆ ಎಂದು ಶ್ರೀ ಕೊಡಕ್ಕಲ್ ಶಿವಪ್ರಸಾದ್, ಸಂಸ್ಥಾಪಕ ಅಧ್ಯಕ್ಷರು, ಇಂಡಿಯನ್ ದಿವ್ಯಾಂಗ ಎಂಪವರ್ಮೆಂಟ್ ಅಸೋಸಿಯೇಷನ್, ಶಿವಮೊಗ್ಗ ಇವರು ಪತ್ರಿಕಾ ಪ್ರಕಟಣೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

# ಭಾರತದ ಆಂತರಿಕ ಶತ್ರು ಕುರಿತ ವಿಶೇಷ ಸಂವಾದ ಸಂಪನ್ನ

• ಉದಯವಾಹಿನಿ, ಬೆಂಗಳೂರು

ಪ್ರಪಂಚದ ಎಲ್ಲಾ ಖಂಡಗಳಲ್ಲಿಯೂ ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಉಪಸ್ಥಿತಿಯಿದೆ. ಆದರೆ ಹಿಂದುತ್ವದ ಉಪಸ್ಥಿತಿಯಿರುವ ಒಂದೇ ಒಂದು ದೇಶ ಭಾರತ. ಜಗತ್ತಿಗೆ ನಿಜವಾದ ಜ್ಞಾನ ಮತ್ತು ಪ್ರಕಾಶವನ್ನು ನೀಡಿರುವ ದೇಶವೇ ಭಾರತ. ಎಲ್ಲಾ ಪಂಥಗಳು ಹಾಗೂ ಮತಪಂಥಗಳು ಹಿಂದೂ ಧರ್ಮವೆಂಬ ವಿಶಾಲವಾದ ವೃಕ್ಷದ ಶಾಖೆಗಳಷ್ಟೇ ಎಂದು ದಿ ಧರ್ಮ ಡಿಸ್ಪ್ಯಾಚ್ ಸಂಸ್ಥಾಪಕರಾದ ಶ್ರೀ. ಸಂದೀಪ್ ಬಾಲಕೃಷ್ಣ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ಯುವ ಬ್ರಿಗೇಡ್ ನ ಸಂಸ್ಥಾಪಕರಾದ ಶ್ರೀ ಚಕ್ರವರ್ತಿ ಸೂಲಿಬೆಲೆ ಬರೆದ ಗೌರಿ ಲಂಕೇಶ್ ಹತ್ಯೆ ಮತ್ತು ಹಿಂದೂ ವಿರೋಧಿ ಷಡ್ಯಂತ್ರ ಈ ಗ್ರಂಥವನ್ನು ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಪಿ. ಕೃಷ್ಣ ಭಟ್,, ಸಂವಾದ ಟಿವಿಯ ಸಂಪಾದಕರಾದ ಶ್ರೀ ವೃಷಾಂಕ ಭಟ್, ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರರಾದ ಶ್ರೀ ಮೋಹನ್ ಗೌಡ, ವಿಶ್ವ ಹಿಂದೂ ಪರಿಷತ್ ರಾಜ್ಯಾಧ್ಯಕ್ಷರಾದ ಶ್ರೀ ದೀಪಕ್ ರಾಜಗೋಪಾಲ್ , ಸ್ಟ್ರಿಂಗ್ ರಿವಿಲ್ಸ್ ನ ಶ್ರೀ. ವಿನೋದ್ ಸೇರಿದಂತೆ 500ಕ್ಕೂ ಅಧಿಕ ರಾಷ್ಟ್ರ– ಧರ್ಮ ಪ್ರೇಮಿ ಹಿಂದೂಗಳ ಉಪಸ್ಥಿತಿ.

ಹಿಂದೂ ಜನಜಾಗೃತಿ ಸಮಿತಿಯ ಶ್ರೀ ಮೋಹನ್ ಗೌಡ ಇವರು ಮಾತನಾಡಿ ಸನಾತನ ಧರ್ಮವು ಶತಮಾನಗಳಿಂದ ವಿವಿಧ ರೀತಿಯ ಆಕ್ರಮಣಗಳನ್ನು ಎದುರಿಸುತ್ತಲೇ ಬಂದಿದೆ. ಮುಸ್ಲಿಂ ಆಕ್ರಮಣಕಾರರಿಂದ ಪ್ರತ್ಯಕ್ಷ ದಾಳಿಗಳು ನಡೆದರೆ, ಆಂಗ್ಲರ ಕಾಲದಲ್ಲಿ ವೈಚಾರಿಕ ಆಕ್ರಮಣಗಳು ನಡೆದವು. ಆದರೆ ಸ್ವಾತಂತ್ರ್ಯಾನಂತರ ನಮ್ಮದೇ ದೇಶದಲ್ಲಿ ಕೆಲವು ಅರ್ಬನ್ ನಕ್ಸಲರು ಧರ್ಮ, ಇತಿಹಾಸ ಮತ್ತು ನಮ್ಮ ಶ್ರದ್ಧಾಸ್ಥಾನಗಳ ಮೇಲೆ ನಿರಂತರವಾಗಿ ವೈಚಾರಿಕ ಆಕ್ರಮಣ ನಡೆಸುತ್ತಿದ್ದಾರೆ ಎಂದರುವ್ಯಕ್ತಿಯ ಧರ್ಮ ಶ್ರದ್ಧೆಯ ಮೇಲೆ ಆಕ್ರಮಣ ನಡೆದರೆ, ಅವನು ಧರ್ಮಹೀನನಾ ನಂತರ ಹಿಂದೂ ವಿರೋಧಿಯಾಗುತ್ತಾನೆ. ಆದ್ದರಿಂದ ಇಂತಹ ಆಕ್ರಮಣಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ ಎಂದರು.

ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ. ಪಿ. ಕೃಷ್ಣ ಭಟ್




> ನೆಹರೂ ಅವರ ಕಾಲದಿಂದ ಇಸ್ಲಾಂ ಮತ್ತು ಕ್ರೈಸ್ತ ಮತಗಳನ್ನು ಧರ್ಮ ಎಂದು ಕರೆಯುವ ಪ್ರವೃತ್ತಿ ಬೆಳೆಯಿತು. ವಾಸ್ತವದಲ್ಲಿ ಅವು ಪಂಥಗಳು ಮಾತ್ರ. ನಿಜವಾದ ಧರ್ಮವೆಂದರೆ ಸನಾತನ ಹಿಂದೂ ಧರ್ಮವಷ್ಟೇ. ಭಾರತೀಯತೆ ಎಂದರೆ ಈ ಸನಾತನ ಧರ್ಮದ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕುವುದು.
> – ಸಂದೀಪ್ ಬಾಲಕೃಷ್ಣ

ಇವರು ಮಾತನಾಡುತ್ತ ಹಿಂದೂ ಜೀವನಶೈಲಿ ಎಲ್ಲವನ್ನೂ ರಕ್ಷಿಸುವ ಚಿಂತನೆಯಾಗಿದೆ. ಆದರೆ ಇಂದಿನ ಕಾಲದಲ್ಲಿ ಹಿಂದೂ ಧರ್ಮಕ್ಕೆ ಧಕ್ಕೆ ತರುವ ಚಿಂತನೆಗಳನ್ನು ಪೋಷಿಸಲಾಗುತ್ತಿದೆ. ಇತರ ಪಂಥಗಳಿಗೆ ಧಾರ್ಮಿಕ ಸ್ವಾತಂತ್ರ್ಯ ವಿರುವಂತೆ ತೋರಿಸಲಾಗುತ್ತಿದೆಯಾದರೂ, ಸನಾತನ ಧರ್ಮದ ನಾಶಕ್ಕೆ ಕಾನೂನಿನ ಸಹಕಾರವಿದೆಯೇ ಎಂಬ ಪ್ರಶ್ನೆ ಎದ್ದಿದೆ. ಹಿಂದೂ ಧರ್ಮವು ಮತವಲ್ಲ. ಮತಗಳು ಸಂಕುಚಿತ ಪರಿಕಲ್ಪನೆಯಾಗಿವೆ; ಕೆಲ ಪಂಥಗಳಲ್ಲಿ ಬದಲಾವಣೆಗೇ ಅವಕಾಶವಿಲ್ಲ. ಆದರೆ ಭಾರತದ ಚಿಂತನೆ ಈ ಸಂಕುಚಿತ ಪರಿಕಲ್ಪನೆಗಳಿಗೆ ವಿರುದ್ಧ. ಹಿಂದೂ ಧರ್ಮವು ಎಲ್ಲವನ್ನೂ ಅಳವಡಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಅದಕ್ಕಾಗಿ ಇದನ್ನು ವಿಶಾಲ ಆಲದ ಮರವೆಂದು ಕರೆಯಬಹುದು ಎಂದರು.

● ವೀರಶೈವ–ಲಿಂಗಾಯತ ಒಂದಾಗಿಗಿ ನಿಡುಮಾಮಿಡಿ ಮಠದ ವೀರಭದ್ರ, ಚೆನ್ನಮಲ್ಲಿಕಾರ್ಜುನ ಮಹಾಸ್ವಾಮೀಜಿ ಸಲಹೆ

# ಜಾತಿ ಗಣತಿ ಮುನ್ನವೇ ವೀರಶೈವ -ಲಿಂಗಾಯತ ಗೊಂದಲ ನಿವಾರಿಸಿ

• ಉದಯವಾಹಿನಿ ವಿಜಯಪುರ

ವೀರಶೈವ-ಲಿಂಗಾಯತ ಒಂದಾಗಬೇಕೆಂಬುದು ಬಹುಜನರ ನಿಲುವಾಗಿದ್ದು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತದಾನ ಪ್ರಕ್ರಿಯೆ ನಡೆಸುವ ಮೂಲಕ ಗೊಂದಲಕ್ಕೆ ಪರಿಹಾರ ದೊರಕಿಸಬೇಕು ಎಂದು ನಿಡುಮಾಮಿಡಿ ಮಠದ ವೀರಭದ್ರ, ಚೆನ್ನಮಲ್ಲಿಕಾರ್ಜುನ ಮಹಾಸ್ವಾಮೀಜಿ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ವೀರಶೈವ-ಲಿಂಗಾಯತ ಕೆಲವರು ಅವರದೇ ಕಾರಣಗಳಿಂದ ಪ್ರತ್ಯೇಕವಾಗಿರಬೇಕೆನ್ನುತ್ತಾರೆ. ಆದರೆ, ಒಂದಾಗಬೇಕೆಂದು ಬಹುಜನರ ಬಯಕೆಯಾಗಿದೆ. ಹೀಗಾಗಿ ಕೇಂದ್ರ ಜಾತಿ ಗಣತಿ ವೇಳೆಗಾದರೂ ಸಮಸ್ಯೆ ಬಗೆಹರಿಸಬೇಕು. ಗುರು-ವಿರಕ್ತರು, ಧಾರ್ಮಿಕ ವಿದ್ವಾಂಸರು, ಸಂಘ ಸಂಸ್ಥೆಗಳ ಪ್ರಮುಖರು, ಚಿಂತಕರು, ವಿವಿಧ ಕ್ಷೇತ್ರಗಳ ಗಣ್ಯರ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹಿಸಿ ಗೊಂದಲ ನಿವಾರಿಸುವ ಜವಾಬ್ದಾರಿಯನ್ನು ವೀರಶೈವ-ಲಿಂಗಾಯತ ಮಹಾಸಭೆ ನಿರ್ವಹಿಸಬೇಕು ಎಂದರು.

- ಗೊಂದಲ ನಿವಾರಿಸುವ ಜವಾಬ್ದಾರಿಯನ್ನು ವೀರಶೈವ-ಲಿಂಗಾಯತ ಮಹಾಸಭೆ ನಿರ್ವಹಿಸಬೇಕು
- ಮೂರ್ತಿ ಪೂಜೆ ಬಿಡಿ ಎಂದು ಆಚರಣೆಗಳ ಮೇಲೆ ಸರ್ವಾಧಿಕಾರಿ ಧೋರಣೆಯನ್ನು ಜನರ ಮೇಲೆ ಹೇರುವುದು ಸರಿಯಲ್ಲ,'
- ಕನ್ನಡ ನಾಡು-ನಾಡಿಗೆ ಅಪಾರ ಕೊಡುಗೆ ನೀಡಿದ ಸಾಧಕರು ಯಾರೇ ಇರಲಿ, ಅವರು ಗೌರವದಿಂದ ಒಪ್ಪಿಕೊಂಡು ಉದ್ಘಾಟನೆಗೆ ಬಂದರೆ ನಾವ್ಯಾರು ವಿರೋಧಿಸಬಾರದು

ವೀರಶೈವ-ಲಿಂಗಾಯತ ಒಂದೇ ಇರಬೇಕು ಎಂಬುದು ಬಹುಜನರ ಆಶಯವನ್ನು ನಾನು ಬೆಂಬಲಿಸುತ್ತೇನೆ. ಆದರೆ, ಈ ವಿಷಯಯವಾಗಿ



ಉದಯವಾಹಿನಿ ಚಿತ್ರ

**ಸರ್ವಾಧಿಕಾರಿ ಧೋರಣೆ ಸರಿಯಲ್ಲ**

ವೈಯುಕ್ತಿಕ ಅಭಿಪ್ರಾಯ ಹೇಳುವುದಿಲ್ಲ. ವೀರಶೈವ ಹಾಗೂ ಲಿಂಗಾಯತ ಇಬ್ಬರು ಕೂಡಿಕೊಂಡು ಸೌಲಭ್ಯ ಪಡೆಯಬೇಕು. ಒಟ್ಟಾಗಿ ಹೋಗುವುದು ಅಗತ್ಯವಾಗಿದೆ,'' ಎಂದು ಸ್ವಾಮೀಜಿ ತಿಳಿಸಿದರು.

''ಮೂರ್ತಿ ಪೂಜೆ ಪ್ರಾಚೀನ ಸಂಸ್ಕೃತಿ, ಇತರೆ ನಾಗರಿಕತೆಗಳಲ್ಲಿಯೂ ಮೂರ್ತಿ ಪೂಜೆ ಬೆಳೆದು ಬಂದಿದೆ. ಸಾಕಾರ ರೂಪದ ಮೂಲಕ ನಿರಾಕಾರದ ದೇವ ಸಾನ್ನಿಧ್ಯ ಪಡೆಯುವ ಸಂಸ್ಕೃತಿ ನಮ್ಮದು,

> ಬಸವಾದಿ ಪ್ರಮಥರ ವಿಚಾರಗಳನ್ನು ಬಾಯಲ್ಲಿ ಹೇಳುವುದಕ್ಕಿಂತ ಪಾಲನೆ ಮಾಡಬೇಕು ಎಂದರು.
> **ಹಿಂದೂ ಧರ್ಮಕ್ಕೆ ವಿರೋಧವಿಲ್ಲ:** ''ವೀರಶೈವ-ಲಿಂಗಾಯತ ಹಿಂದೂ ಧರ್ಮದ ವಿರೋಧಿಯಲ್ಲ. ಆದರೆ, ಹಿಂದೂ ಧರ್ಮದ ಭಾಗವಲ್ಲ. ಹಿಂದೂ ಧರ್ಮವನ್ನು ಬಿಟ್ಟುಕೊಡಬಾರದು, ಹಿಂದೂ ಧರ್ಮದ ಬಹುಸಂಖ್ಯಾತರು ಶಿವನ ಭಕ್ತರು.
> -ನಿಡುಮಾಮಿಡಿ ಶ್ರೀ

ಮೂರ್ತಿ ಪೂಜೆ ಬಿಡಿ ಎಂದು ಆಚರಣೆಗಳ ಮೇಲೆ ಸರ್ವಾಧಿಕಾರಿ ಧೋರಣೆಯನ್ನು ಜನರ ಮೇಲೆ ಹೇರುವುದು ಸರಿಯಲ್ಲ, ಎಂದು ಸ್ವಾಮೀಜಿ ತಿಳಿಸಿದರು.

ಹಿಂದೂ ಧರ್ಮವಲ್ಲ ಅದೊಂದು ಸಂಸ್ಕೃತಿ, ಬದುಕಿನ ಮಾರ್ಗ, ಆರ್ಯ ಹಾಗೂ ದ್ರಾವಿಡ ಸಂಸ್ಕೃತಿ ಸಂಗಮವೇ ಹಿಂದೂ,'' ಎಂದು ಸ್ವಾಮೀಜಿ ತಿಳಿಸಿದರು. ಮೈಸೂರು ದಸರಾವನ್ನು ನಾಡ ಹಬ್ಬವನ್ನಾಗಿ ಆಚರಿಸಲಾಗುತ್ತಿದೆ. ಕನ್ನಡ ನಾಡು-ನಾಡಿಗೆ ಅಪಾರ ಕೊಡುಗೆ ನೀಡಿದ ಸಾಧಕರು ಯಾರೇ ಇರಲಿ, ಅವರು ಗೌರವದಿಂದ ಒಪ್ಪಿಕೊಂಡು ಉದ್ಘಾಟನೆಗೆ ಬಂದರೆ ನಾವ್ಯಾರು ವಿರೋಧಿಸಬಾರದು ಎಂದಿದ್ದಾರೆ ವೀರಭದ್ರ, ಚೆನ್ನಮಲ್ಲಿಕಾರ್ಜುನ ಮಹಾಸ್ವಾಮೀಜಿ, ನಿಡುಮಾಮಿಡಿ ಮಠ.

### ಬಸವ ತತ್ವ ಪ್ರಚಾರಕ್ಕೆ ಸೀಮಿತ

ನನ್ನನ್ನು ಸೇರಿದಂತೆ ಎಲ್ಲರೂ ಬಸವ ತತ್ವ ಪಾಲನೆ ಮಾಡುತ್ತಿಲ್ಲ. ಬಸವ ಧರ್ಮ ಪ್ರಚಾರಕಷ್ಟೇ ಸೀಮಿತವಾಗಿದೆ. ಲಿಂಗಪೂಜೆ ಮಾಡಿದರಷ್ಟೇ ಬಸವ ತತ್ವವಲ್ಲ, ಆಧ್ಯಾತ್ಮಿಕ, ಆದರ್ಶದ ಬಹುದೊಡ್ಡ ಬದುಕನ್ನು ಬಸವಾದಿ ಶರಣರು ತೋರಿದ್ದಾರೆ. ಅದರ ಹಾದಿಯಲ್ಲಿಯಾರೂ ಸಾಗುತ್ತಿಲ್ಲ,'' ಎಂದು ನಿಡುಮಾಡಿ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

## ಪದೇಪದೇ ಗಣಿಗಾರಿಕೆ ಮೇಲೆ ದಾಳಿ ನಡೆಸಿ ಭಯದ ವಾತಾವರಣ ಸೃಷ್ಟಿ


ಉದಯವಾಹಿನಿ ಚಿತ್ರ

**ಸಂಸದ ಖಂಡ್ರೆಗೆ ಮನವಿ**

> ಅಧಿಕಾರಿಗಳು ಆಕ್ರಮ ಗಣಿಗಾರಿಕೆ ನಡೆಸುವವರ ಮೇಲೆ ಕ್ರಮಕೈಗೊಳ್ಳಲು ನಮ್ಮ ಅಭ್ಯಂತರವಿಲ್ಲ ಆದರೆ ಕೆಲ ಪ್ರಭಾವಿ ರಾಜಕೀಯ ಮುಖಂಡರಿಂದ ದೂರು ಪಡೆದು ಉದ್ದೇಶಪೂರ್ವಕವಾಗಿ ದಾಳಿ ನಡೆಸುವುದು ತಪ್ಪು, ದಾಳಿ ನಡೆಸಿದ ಮೇಲೆ ವಿದ್ಯುತ್ ಪರಿವರ್ತಕಗಳು ಗಣಿಗಾರಿಕೆಯಲ್ಲಿ ಹೇಗೆ ಬರುತ್ತವೆ, ಗಣಿಗಾರಿಕೆಗೆ ವಿದ್ಯುತ್ ಸಂಪರ್ಕ ಯಾರು ಕೊಡುತ್ತಾರೆ, ತಂತ್ತಿಗಳು ಎಲ್ಲಿಂದ ಬರುತ್ತವೆ ಎಂಬುವುದು ಒಮ್ಮೆ ಸಮಗ್ರವಾಗಿ ತನಿಖೆ ನಡೆಸಿ ಆಗ ವಿದ್ಯುತ್ ಸಂಬಂಧಿತ ಅಧಿಕಾರಿಗಳು ಸಿಬ್ಬಂದಿ ವರ್ಗದವರ ಪಾತ್ರವೇನಿದೆ ಎಂಬುವುದು ಹೊರಗಡೆ ಬರುತ್ತದೆ ಎಂದು ಸಂಸದರಿಗೆ ಭೇಟಿಯಾದ ನಿಯೋಗ ಒತ್ತಾಯಿಸಿದರು.

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಮಿರಿಯಾಣ,ಭೈರಂಪಳ್ಳಿ,ಕಿಷ್ಟಾಪೂರ ಗ್ರಾಮಗಳಲ್ಲಿ ಯಾವುದೇ ಆಕ್ರಮ ಗಣಿಗಾರಿಕೆ ನಡೆಯುತ್ತಿಲ್ಲ ಆದರೆ ಜೇಸ್ಕಾಂ ಜಾಗೃತ ದಳ ಹಾಗೂ ಜೇಸ್ಕಾಂ ಇಲಾಖೆಯವರು ಪದೇಪದೇ ಗಣಿಗಾರಿಕೆಗೆ ಮೇಲೆ ದಾಳಿ ನಡೆಸಿ ಭಯದ ವಾತಾವರಣ ನಿರ್ಮಿಸಿ ಬಡವರ ಬದುಕಿಗೆ ಸಂಕಷ್ಟ ಒಡ್ಡುತ್ತಿದ್ದಾರೆ ಎಂದು ಆರೋಪಿಸಿ ಬೀದರ ಸಂಸದ ಸಾಗರ್ ಖಂಡ್ರೆ ಎದುರು ಮಿರಿಯಾಣ ಗ್ರಾಮದ ಕಾರ್ಮಿಕ ಮುಖಂಡ ಅಬ್ದುಲ್ ರೌಫ್ ಮನವಿಪತ್ರ ಸಲ್ಲಿಸಿದರು.

ತಾಲ್ಲೂಕಿಗೆ ಬೀದರ ಸಂಸದ ಸಾಗರ್ ಖಂಡ್ರೆ ಬೆಳೆಹಾನಿ ವಿಕ್ಷಣೆಗೆ ಆಗಮಿಸಿದ ಸಂದರ್ಭ ಕುಂಚಾವರಂ ಕ್ರಾಸ್ ಹತ್ತಿರ ನಿಯೋಗ ಭೇಟಿಯಾಗಿ ಗಣಿಗಾರಿಕೆ ಕುರಿತು ಮೌಖಿಕ ಮಾಹಿತಿ ನೀಡಿ ಮನವಿ ಸಲ್ಲಿಸಿದ ಅವರು,ಶಾಹಬಾದ ಮಾದರಿ ಕಲ್ಲುಗಣಿಗಾಣಿಕೆ ಉದ್ಯಾಮಿದಾರರು ಸರ್ಕಾರದಿಂದ ಪರವಾನಿಗೆ ಪಡೆದು ಗಣಿಗಾರಿಕೆ ನಡೆಸುತ್ತಿದ್ದೇವೆ ಆದರೆ ಪದೇ ಪದೇ ದಾಳಿನಡೆಸಿ ಬಡವರ ಉದ್ಯಾಮಿದಾರರು ಮೇಲೆ ಬರೆ ಎಳೆಯುವ ಕೆಲಸ ಅಧಿಕಾರಿಗಳು ಮಾಡುತ್ತಿದ್ದಾರೆ ಎಂದು ನೋವು ತೋಡಿಕೊಂಡರು.

ಕಾನೂನು ಬಾಹಿರವಾಗಿ ಯಾವುದೇ ಗಣಿಗಾರಿಕೆ ನಡೆಸುತ್ತಿಲ್ಲಾ ಅಥಹ ಯಾವುದೇ ಗಣಿಗಾರಿಕೆಗಳು ಕಾನೂನು ಬಾಹಿರವಾಗಿ ನಡೆಸುತ್ತಿದ್ದರೆ ಅಂಥಹ ಗಣಿಗಾರಿಕೆಗಳು ಸೀಜ್ ಮಾಡಿ ಅವರ ಮೇಲೆ ಪ್ರಕರಣ ದಾಖಲು ಮಾಡಲಿ ಅದನ್ನುಬಿಟ್ಟು ಪರವಾನಿಗೆ ಪಡೆದ ಗಣಿಗಾರಿಕೆಗಳಿಗೆ ತೊಂದರೆ ಕೊಡುವುದು ಎಷ್ಟರಮಟ್ಟಿಗೆ ಸರಿಯಿದೆ, ಪದೇಪದೇ ಗಣಿಗಾರಿಕೆಗೆ ಮೇಲೆ ದಾಳಿ ಮಾಡುವುದರಿಂದ ಭಯದಲ್ಲಿ ಬಡವರು ಕೂಲಿಕಾರ್ಮಿಕರು ಜೀವನ ನಡೆಸುತ್ತಿದ್ದಾರೆ.

ಸರ್ಕಾರ ಮೊದಲು 20ಗುಂಟೆ ಜಮೀನು ಮೇಲೆ ಪರವಾನಿಗೆ ನೀಡುತ್ತಿತ್ತು ಈಗ ಏಕಾಏಕಿ 02ಏಕರೆಗೆ ಗಣಿಗಾರಿಕೆ ನಡೆಸಲು ಪರವಾನಿಗೆ ನೀಡುತ್ತಿದೆ ಇದರಿಂದ ಗಣಿಗಾರಿಕೆ ಲೀಜ್ ಪಡೆಯಲು ಬಹಳಷ್ಟು ಕಷ್ಟಕರವಾಗಿದೆ, ಸರ್ಕಾರ ಗಮನಹರಿಸಿ ಏಕರೆಯಷ್ಟು ಜಮೀನಿಗೆ ಲೀಜ್ ಕೊಡಬೇಕು ಹಾಗೂ ಗಣಿಗಾರಿಕೆ ನಡೆಸುವ ವಿಧಾನಗಳು ಸಡಿಲಗೊಳಿಸಬೇಕು.

## ಜಾತಿ ಕಲಂ ನಲ್ಲಿ ಹಿಂದೂ ಸವಿತ ಎಂದು ಬರೆಯಿಸಿ

• ಉದಯವಾಹಿನಿ, ಮುದ್ದೇಬಿಹಾಳ

ರಾಜ್ಯ ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಹಾಗೂ ಕೇಂದ್ರ ಸರಕಾರದ ಜನಗಣತಿ ಮಾಡುತ್ತಿದ್ದು ರಾಜ್ಯದಲ್ಲಿರುವ ಸವಿತ ಸಮಾಜದ ಬಾಂದವರು ಹಿಂದೂ ಸವಿತಾ ಎಂದು ಬರೆಸುವ ಮೂಲಕ ಸಮಾಜದ ಬಾಂಧವರು ಒಂದಾಗಬೇಕೆಂದು ಸವಿತ ಸಮಸಜದ ಸಂಶೋಧಕ ಲೇಖಕ ಮಹೇಶ ತೇಲಂಗಿ ( ಹಡಪದ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಿಂದೂ ಧರ್ಮದ ತಳಹದಿಯ ವೇದಗಳಲ್ಲಿ ಒಂದಾದ ಸಾಮವೇದ ಕರ್ತೃ ನಮ್ಮ ಸಮಾಜದ ಮೂಲ ಪುರಷನಾಗಿದ್ದು ನಮ್ಮ. ಸಮಾಜ ಪವಿತ್ರ ಜನಿವಾರ ಧಾರಣೆಯ ಸಮಾಜವಾಗಿದೆ ಮೂಲ ಕ್ಷೌರಿಕ ಪರಂಪರೆಯಲ್ಲಿ ಒಂದಾಗಿರುವ ಈ ಸಮಾಜದ ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದೆ ಆಳುವ ಸರಕಾರಗಳು ನಮ್ಮ ಅಳಲನ್ನು ಕೇಳುತ್ತಿಲ್ಲ ನಮ್ಮ ಕ್ಷೌರಿಕ ವೃತ್ತಿಯನ್ನು ಮಾಡುವ ಉಪಪಂಗಡುಗಳು 28 ಇವೆ ಮೂಲ ಕ್ಷೌರಿಕ ಧರ್ಮವನ್ನು ಬಿಡದೆ ಅದರಲ್ಲಿ ಮುಂದುವರೆದು ಅನೇಕ ಪ್ರಾಂತ್ಯಗಳಲ್ಲಿ ವಿಂಗಡಿಸಿ ಹೋದ ನಮ್ಮ ಸಮಾಜ ಇಂದು ಒಂದಾಗುವ ನಿಟ್ಟಿನಲ್ಲಿ ಹಿಂದೂ ಸವಿತಾ ಎಂದು ಬರೆಯಿಸಬೇಕು.

ಸವಿತಾ ಸಮಾಜ ಅಂತ ಮೊದಲ ಸಂಘ ಮೈಸೂರು ಮಹಾರಾಜರ ಕಾಲದಲ್ಲಿ ಸ್ಥಾಪನೆಯಾಗಿದೆ ಈ ಸಮಾಜ ಪುರಾತನ ಕಾಲದಿಂದಲೂ ದೇವಾಲಯಗಳಲ್ಲಿ ನಾದಸ್ವರ ಮದುವೆ ಶುಭಾರಂಭಗಳಲ್ಲಿ ಮಂಗಳವಾದ್ಯ ನುಡಿಸುವ ಹಾಗೂ ಆಯುರ್ವೇದ ಔಷಧ ನೀಡುವ ಮತ್ತು ಕ್ಷೌರಿಕ ವೃತ್ತಿಯನ್ನು ಮಾಡುತ್ತಾ ಬಂದಿದೆ.

ಇಂದು ಈ ಕ್ಷೌರಿಕ ವೃತ್ತಿಯನ್ನು ಅಪಮಾನಿಸುವ ಅವಹೇಳನವಾಗಿ ಪದಗಳಿಂದ ನಿಂದಿಸುವ ಕಾರ್ಯ ಎಲ್ಲಡೆ ಎಲ್ಲರಿಂದಲೂ ಆಗುತ್ತಿದೆ ಈ ನಿಟ್ಟಿನಲ್ಲಿ ಸರಕಾರ ನಮ್ಮ ವೃತ್ತಿಯನ್ನು ಅವಮಾನಿಸುವ ವೃತ್ತಿ ಹಾಗೂ ಜಾತಿ ನಿಂದನೆ ಮಾಡುವವರ ಮೇಲೆ ಕಾನೂನು ಕ್ರಮಕ್ಕೆ ಮುಂದಾಗಲು ಕಾನೂನು ರೂಪಿಸಬೇಕಿದೆ ಇದಕ್ಕೆ ಸಮಾಜ ಒಂದಾಗಿ ರಾಜ್ಯದಲ್ಲಿ ಹೋರಾಟ ಮಾಡಬೇಕಿದೆ ಎಂದು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿರಂತರ ಮಳೆಗೆ ಬೆಳೆಗಳು ಹಾನಿ, ಎಕರೆಗೆ 20ಸಾವಿರ ಪರಿಹಾರಕ್ಕೆ ವೀರ ಕನ್ನಡಿಗರ ಸೇನೆ ಒತ್ತಾಯ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನಾದ್ಯಂತ ಧಾರಾಕಾರವಾಗಿ ನಿರಂತರ ಮಳೆಗೆ ರೈತರು ಬೆಳೆದ ಉದ್ದು,ಹೆಸರು,ಸೋಯಾಬಿನ್,ತೊಗರಿಬೇಳೆಗಳು ಸಂಪೂರ್ಣ ಹಾನಿಯಾಗಿದ್ದು ರೈತರ ಪ್ರತಿ ಏಕರೆಗೆ 29 ಸಾವಿರ ರೂ.ಪರಿಹಾರಧನ ಮಂಜೂರು ಮಾಡುವಂತೆ ತಾಲ್ಲೂಕು ಆಡಳಿತ ಸೌಧ ಎದುರು ವೀರ ಕನ್ನಡಿಗರ ಸೇನೆ ವತಿಯಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರೈತರು ಸಾಲ ಸೂಲ ಮಾಡಿ ಬೀಜ ರಸಗೊಬ್ಬರ ತಂದು ಬಿತ್ತನೆ ಮಾಡಿದ್ದು ಸತತವಾಗಿ ಸುರಿದ ಮಳೆಯಿಂದ ರೈತರು ಬೆಳೆದ ಉದ್ದು,ಹೆಸರು, ತೊಗರಿಬೇಳೆ,ಸೋಯಾಬಿನ್ ಬೆಳೆಗಳು ಸಂಪೂರ್ಣವಾಗಿ ಹಾನಿಯಾಗಿದ್ದು ಇದರಿಂದ ರೈತರು ಕಂಗಾಲಾಗಿದ್ದಾರೆ. ಪುರಸಭೆ ವ್ಯಾಪ್ತಿಯಲ್ಲಿ ಬರುವ ಕೆಲವೊಂದು ವಾಣಿಜ್ಯ ಮಳಿಗೆಗಳು ಅನಾಧಿಕೃತ ಕಟ್ಟಡ ನಿರ್ಮಿಸಿ ಪುರಸಭೆ ವತಿಯಿಂದ ಎನ್‌ಓಸಿ ತೆಗೆದುಕೊಳ್ಳದೆ



ಉದಯವಾಹಿನಿ ಚಿತ್ರ

ನಿರ್ಮಿಸಿದ್ದು ವಿದ್ಯುತ್ ಸಂಪರ್ಕ ಕಲ್ಪಿಸಿದ ಜೇಸ್ಕಾಂ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವೀರ ಕನ್ನಡಿಗರ ಸೇನೆ ತಾಲ್ಲೂಕಾ ಅಧ್ಯಕ್ಷ ಗೋಪಾಲ ಇಡಗೋಟ್ಟಿ ಒತ್ತಾಯಿಸಿದರು. ಮಾರುತಿ ಗಂಜಗಿರಿ,ವಿಠ್ಠಲ ಕುಸಾಳೆ,ಒಮನರಾವ ಕೊರವಿ,ಸಚ್ಚಿನ್,ಮಹೇಶ,ರಾಜು ತೋಡಿ,ಸತೀಶ,ತುಕ್ಕರಾಮ, ಸೋಮಶೇಖರ,ಭಾಗ್ಯವಂತ , ಲಾಡ್ಲೆಸಾಬ,ಜಗನ್ನಾಥ,ಲೋಹಿತ್,ಸಾಗರ ಆನಂದಿ, ಲಕ್ಷ್ಮಣ, ಜಗದೀಶ,ಅನೇಕರಿದ್ದರು.

## ಚತುಷ್ಪಥ ರಾ. ಹೆದ್ದಾರಿಯ ಸುರಂಗ ಮಾರ್ಗ ತೆರವು ಯಾವಾಗ?

• ಉದಯವಾಹಿನಿ ಕಾರವಾರ

ಮಳೆಗಾಲದ ಆರಂಭದಲ್ಲಿ ಕುಸಿತ ಸಂಭವಿಸಿದ ಕಾರಣಕ್ಕೆ ಸ್ಥಗಿತಗೊಂಡಿರುವ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯ ಸುರಂಗ ಮಾರ್ಗದ ಒಂದು ಪಥದಲ್ಲಿ ಈವರೆಗೂ ಸಂಚಾರ ಪುನರಾರಂಭಗೊಂಡಿಲ್ಲ. ಒಂದೇ ಪಥದಲ್ಲಿ ಸಂಚಾರ ನಡೆಯುತ್ತಿದ್ದು, ಅವಘಡಗಳಿಗೆ ಕಾರಣವಾಗುತ್ತಿರುವ ದೂರು ಹೆಚ್ಚಿದೆ.

ಲಂಡನ್ ಸೇತುವೆಯಿಂದ ಬಿಣಗಾ ಗ್ರಾಮದವರೆಗೆ ಹೆದ್ದಾರಿಗೆ ಒಟ್ಟು ನಾಲ್ಕು ಸುರಂಗ ನಿರ್ಮಿಸಲಾಗಿದೆ. ಎರಡು ಸುರಂಗಗಳಲ್ಲಿ ಕಾರವಾರದಿಂದ ಬಿಣಗಾ ಕಡೆಗೆ, ಇನ್ನೆರಡು ಸುರಂಗಗಳಲ್ಲಿ ಬಿಣಗಾ ಕಡೆಯಿಂದ ಕಾರವಾರಕ್ಕೆ ವಾಹನಗಳು ಸಂಚರಿಸುತ್ತವೆ. ಅವುಗಳ ಪೈಕಿ ಕಾರವಾರದಿಂದ ಬಿಣಗಾ ಕಡೆಗೆ ವಾಹನ ಸಾಗುವ ಸುರಂಗ ಸದ್ಯ ಸ್ಥಗಿತಗೊಂಡಿದೆ. ಈಚೆಗಷ್ಟೆ ಸುರಂಗ ಮಾರ್ಗದಲ್ಲಿ ತಡರಾತ್ರಿ ಎರಡು ಕಾರುಗಳ ಮುಖಾಮುಖಿ ಡಿಕ್ಕಿ ಸಂಭವಿಸಿ, ವ್ಯಕ್ತಿಯೊಬ್ಬರು


ಉದಯವಾಹಿನಿ ಚಿತ್ರ

ಮೃತಪಟ್ಟಿದ್ದರು.

ಕಳೆದ ಹಲವು ದಿನಗಳಿಂದ ಸಣ್ಣ ಪುಟ್ಟ ಅಪಘಾತಗಳು ಸುರಂಗ ಮಾರ್ಗದಲ್ಲಿ ನಡೆಯುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ. ಅಲ್ಲದೇ, ಸುರಂಗ ಮಾರ್ಗದಲ್ಲಿ ಸಂಚಾರ ನಿರ್ಬಂಧ ಆದೇಶ ತೆರವುಗೊಳಿಸುವುದು ಯಾವಾಗ? ಎಂದು ಪ್ರಶ್ನಿಸುತ್ತಿದ್ದಾರೆ.

ಮಳೆಗಾಲದಲ್ಲಿ ಬಿಣಗಾ ಸಮೀಪದಲ್ಲಿರುವ ಸುರಂಗದ ಮೇಲ್ಭಾಗದಲ್ಲಿ ಭೂಕುಸಿತ ಸಂಭವಿಸಿತ್ತು. ಹಲವು ಬಾರಿ ಕಲ್ಲುಗಳು ಉರುಳಿ ಬಿದ್ದಿದ್ದವು. ಸುರಕ್ಷತೆ ದೃಷ್ಟಿಯಿಂದ ಸಂಚಾರ ಸ್ಥಗಿತಗೊಳಿಸಲಾಗಿದೆ.

### ಸುರಕ್ಷತಾ ಕ್ರಮ ಅಗತ್ಯ

ರಾಷ್ಟ್ರೀಯ ಹೆದ್ದಾರಿಯ ಸುರಂಗ ಮಾರ್ಗದ ಬಳಿ ಭೂಕುಸಿತ ಸಂಭವಿಸಿದ್ದರಿಂದ ಜಿಲ್ಲಾಧಿಕಾರಿ ಆದೇಶದ ಹಿನ್ನೆಲೆಯಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ಮಳೆ ಕಡಿಮೆ ಆಗಿದ್ದರಿಂದ ಸಂಚಾರ ಪುನರಾರಂಭಿಸಲು ಜಿಲ್ಲಾಡಳಿತದ ಅನುಮತಿಗೆ ಕಾಯುತ್ತಿದ್ದೇವೆ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು. ಸುರಂಗ ಮಾರ್ಗದ ಹೊರಭಾಗದ ಕೆಲವೆಡೆ ಕುಸಿತ ಸಂಭವಿಸಿದ ಸ್ಥಳಗಳಲ್ಲಿ ತಜ್ಞರ ಸಲಹೆ ಆಧರಿಸಿ ಸುರಕ್ಷತಾ ಕ್ರಮ ಕೈಗೊಳ್ಳಬೇಕಿದೆ. ಸದ್ಯದಲ್ಲೇ ಈ ಕೆಲಸ ಕೈಗೆತ್ತಿಕೊಳ್ಳಲಾಗುತ್ತದೆ' ಎಂದರು.

## ಜಿಲ್ಲಾ ಕೇಂದ್ರವೆಂದು ಘೋಷಿಸಿ: ವಿವಿಧ ಪಕ್ಷ, ಸಂಘ ಸಂಸ್ಥೆಗಳ ಒತ್ತಾಯ

• ಉದಯವಾಹಿನಿ, ಸಾಗರ

ಇಲ್ಲಿನ ಗಾಂಧಿ ಮೈದಾನದಲ್ಲಿರುವ ನಗರಸಭೆ ಬಯಲು ರಂಗ ಮಂದಿರದಲ್ಲಿ ನಡೆದ ವಿವಿಧ ರಾಜಕೀಯ ಪಕ್ಷ, ಸಂಘ-ಸಂಸ್ಥೆಗಳ ಪ್ರಮುಖರ ಸಭೆಯಲ್ಲಿ ಸಾಗರ ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸಬೇಕು ಎಂಬ ಹಕ್ಕೊತ್ತಾಯವನ್ನು ಮಂಡಿಸಲಾಯಿತು.

ಕೇಂದ್ರ ಸರ್ಕಾರ 2026ನೇ ಸಾಲಿನ ಏಪ್ರಿಲ್ 1 ರಿಂದ ಜನಗಣತಿ ಆರಂಭಿಸಲಿದ್ದು, ನೂತನ ಜಿಲ್ಲೆಗಳನ್ನು ರಚಿಸುವುದಾದರೆ ಅಷ್ಟರೊಳಗೆ ಪ್ರಕ್ರಿಯೆ ಮುಗಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ. ಶಿವಮೊಗ್ಗ ಜಿಲ್ಲೆಯನ್ನು ವಿಭಜಿಸುವುದಾದರೆ ಸಾಗರವನ್ನೇ ಜಿಲ್ಲಾ ಕೇಂದ್ರವೆಂದು ಘೋಷಿಸಬೇಕು ಎಂಬ ಒತ್ತಾಯವನ್ನು ಸರ್ಕಾರದ ಮೇಲೆ ತರಲು ಸಭೆಯಲ್ಲಿ ನಿರ್ಣಯಿಸಲಾಯಿತು.

'ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಶಿವಮೊಗ್ಗ ಜಿಲ್ಲೆಯನ್ನು ವಿಭಜಿಸಿ ಶಿಕಾರಿಪುರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸಲು ಮುಂದಾಗಿದ್ದರು.


ಉದಯವಾಹಿನಿ ಚಿತ್ರ

ಆಗ ಸಾಹಿತಿ ನಾ. ಡಿಸೋಜ ಅವರ ನೇತೃತ್ವದಲ್ಲಿ ಪಕ್ಷಾತೀತವಾಗಿ ಎಲ್ಲಾ ಪಕ್ಷಗಳ ವತಿಯಿಂದ ಪ್ರತಿಭಟನೆ ನಡೆದ ನಂತರ ಆ ಪ್ರಸ್ತಾವನೆಯನ್ನು ಕೈಬಿಡಲಾಗಿತ್ತು' ಎಂದು ಪುರಸಭೆ ಮಾಜಿ ಅಧ್ಯಕ್ಷ ತೀ.ನ. ಶ್ರೀನಿವಾಸ್ ತಿಳಿಸಿದರು. 'ಸಾಗರಕ್ಕೆ ಜಿಲ್ಲಾ ಕೇಂದ್ರವಾಗುವ ಎಲ್ಲಾ ಅರ್ಹತೆ ಇದೆ. ಇದೊಂದು ಹೊಸನಗರ, ಸೊರಬ, ಶಿಕಾರಿಪುರ ತಾಲ್ಲೂಕು ಸೇರಿದ ಉಪವಿಭಾಗೀಯ ಕೇಂದ್ರವಾಗಿದೆ. ಭೌಗೋಳಿಕವಾಗಿಯೂ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಸಾಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವುದು ಸೂಕ್ತವಾಗಿದೆ' ಎಂದು ರೋಟರಿ ರಕ್ತನಿಧಿ ಕೇಂದ್ರದ ಗೌರವಾಧ್ಯಕ್ಷೆ ರಾಜನಂದಿನಿ ಕಾಗೋಡು ಹೇಳಿದರು. ಸಾಗರ ಶಿವಮೊಗ್ಗ ಜಿಲ್ಲೆಯ ಪ್ರಮುಖ ಪ್ರವಾಸೋದ್ಯಮ ತಾಣವಾಗಿದೆ. ಜೋಗ, ಸಿಗಂದೂರು, ಇಕ್ಕೇರಿ, ಕೆಳದಿ, ಹೊನ್ನೇಮರಡು, ವರದಹಳ್ಳಿ ಸೇರಿದಂತೆ ಹಲವು ಪ್ರವಾಸಿ ತಾಣಗಳು ಇಲ್ಲಿವೆ. ಪ್ರವಾಸೋದ್ಯಮದ ಅಭಿವೃದ್ಧಿಯ ದೃಷ್ಟಿಯಿಂದಲೂ ಸಾಗರವನ್ನು ಜಿಲ್ಲಾ ಕೇಂದ್ರವನ್ನಾಗಿ ರೂಪಿಸುವುದು ಸರಿಯಾದ ನಡೆಯಾಗಿದೆ' ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಹಕ್ರೆ, ತಿಳಿಸಿದರು.

> ಸಾಗರವನ್ನು ಜಿಲ್ಲಾ ಕೇಂದ್ರವಾಗಿ ಮಾಡಬೇಕು ಎಂಬ ಹೋರಾಟಕ್ಕೆ ತಾಲ್ಲೂಕಿನಾದ್ಯಂತ ಬೆಂಬಲ ವ್ಯಕ್ತವಾಗಿದೆ. ಸೆ. 18ರಂದು ಸರ್ಕಾರದ ಗಮನ ಸೆಳೆಯಲು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಗುವುದು -ಸುಂದರ್
> ರೈತ ಸಂಘದ ತಾಲ್ಲೂಕು ಅಧ್ಯಕ್ಷ

## ವಿಶ್ವ ಹಿರಿಯ ನಾಗರಿಕರ ದಿನಾಚರಣೆ : ಪೂರ್ವಭಾವಿ ಸಭೆ

• ಉದಯವಾಹಿನಿ ಗದಗ

ಸರ್ಕಾರದ ಮಾರ್ಗಸೂಚಿಯನ್ವಯ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಅಕ್ಟೋಬರ್ 1 ರಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಚರಿಸಲಾಗುವುದು. ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಪ್ರಯುಕ್ತ ಹಿರಿಯ ನಾಗರಿಕರಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಸೆಪ್ಟೆಂಬರ್ 19 ರಂದು ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ವ್ಯವಸ್ಥಿತವಾಗಿ ಏರ್ಪಡಿಸಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಲ್ಯಾಣಾಧಿಕಾರಿ ಕೆ. ಮಹಾಂತೇಶ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ವಿಡಿಯೋ ಕಾನ್ಫರನ್ಸ್ ಹಾಲ್‌ದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ಜರುಗಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಸೆಪ್ಟೆಂಬರ್ 19 ರಂದು ನಗರದ ಕೆ.ಎಚ್.ಪಾಟೀಲ ಕ್ರೀಡಾಂಗಣದಲ್ಲಿ ಹಿರಿಯ ನಾಗರಿಕರಿಗಾಗಿ ಕ್ರೀಡಾ ಸ್ಪರ್ಧೆಗಳನ್ನು ಹಾಗೂ



ಉದಯವಾಹಿನಿ ಚಿತ್ರ

ಸಾಂಸ್ಕೃತಿಕ ಸ್ಪರ್ಧೆಗಳನ್ನು ಮಹಿಳೆಯರು ಮತ್ತು ಪುರುಷರಿಗಾಗಿ ಪ್ರತ್ಯೇಕವಾಗಿ ಏರ್ಪಡಿಸಲಾಗುವುದು. ಮಹಿಳೆಯರಿಗೆ ಮತ್ತು ಪುರುಷರಿಗಾಗಿ 60-69, 70-79 ಹಾಗೂ 80 ವರ್ಷ ಮೇಲ್ಪಟ್ಟವರಿಗೆ ಹೀಗೆ ವಿಭಾಗಗಳನ್ನು ಮಾಡಲಾಗಿದ್ದು ಕ್ರೀಡಾ ಸ್ಪರ್ಧೆಯಲ್ಲಿ ಬಿರುಸಿನ ನಡಿಗೆ, ಬಕೆಟ್‌ನಲ್ಲಿ ಬಾಲ್‌ನ್ನು ಎಸೆಯುವುದು, ಮ್ಯೂಸಿಕಲ್ ಚೇರ್ ಸ್ಪರ್ಧೆಗಳನ್ನು ಆಯೋಜಿಸಲಾಗುವುದು.

ಅದರಂತೆಯೇ 60-69, 70-79 ಹಾಗೂ 80 ವರ್ಷ ಮೇಲ್ಪಟ್ಟ ಮಹಿಳೆಯರಿಗೆ , ಪುರಷರಿಗಾಗಿ ಸಾಂಸ್ಕೃತಿಕ ಸ್ಪರ್ಧೆಗಳಾದ ಏಕಪಾತ್ರ ಅಭಿನಯ ಹಾಗೂ ಗಾಯನ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು ಎಂದು ಕೆ.ಮಹಾಂತೇಶ್ ತಿಳಿಸಿದರು.

# ಮೊರಾರ್ಜಿ ಶಾಲೆಯಲ್ಲಿ ಬಿಸಿ ನೀರಿಲ್ಲದೆ ವಿದ್ಯಾರ್ಥಿಗಳ ಪರದಾಟ

### ಮಕ್ಕಳು ತಣ್ಣೀರಿನ ಸ್ನಾನ ಮಾಡುತ್ತಿರುವುದರಿಂದಾಗಿ, ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ: ಪಾಲಕರು ಬೇಸರ

• ಉದಯವಾಹಿನಿ ಹುಲಸೂರ

ಪಟ್ಟಣದ ಹೊರವಲಯದ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯಲ್ಲಿ ಕಳೆದ ಮೂರು ತಿಂಗಳಿಂದ ಮಕ್ಕಳ ಸ್ನಾನಕ್ಕೆ ಬಿಸಿ ನೀರಿಲ್ಲ. ಮಕ್ಕಳು ತಣ್ಣೀರಿನ ಸ್ನಾನ ಮಾಡುತ್ತಿರುವುದರಿಂದಾಗಿ, ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ. ಶೀಘ್ರ ಬಿಸಿನೀರಿನ ವ್ಯವಸ್ಥೆ ಮಾಡಬೇಕು ಎಂದು ಪಾಲಕರು ಬೇಸರ ವ್ಯಕ್ತಪಡಿಸಿದ್ದಾರೆ.

ವಸತಿ ನಿಲಯದಲ್ಲಿ 6ನೇ ತರಗತಿಯಿಂದ 10ನೇ ತರಗತಿವರೆಗೆ ಒಟ್ಟು 230 ವಿದ್ಯಾರ್ಥಿಗಳಿದ್ದಾರೆ. ಸುಸಜ್ಜಿತ ಶಾಲಾ ಕಟ್ಟಡ, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ನಿಲಯಗಳ ವ್ಯವಸ್ಥೆಯಿದೆ. ಆದರೆ, ಶಾಲೆಯಲ್ಲಿ ಇಬ್ಬರಿಗೂ ಸ್ನಾನಕ್ಕೆ ಬಿಸಿ ನೀರಿಲ್ಲದಿರುವುದು, ಪಾಲಕರನ್ನು ಚಿಂತೆಗೀಡು ಮಾಡಿದೆ. ಈ ಅವ್ಯವಸ್ಥೆ ಕುರಿತು ವಿದ್ಯಾರ್ಥಿಗಳು ತಮ್ಮ ಪಾಲಕರ ಗಮನಕ್ಕೂ ತಂದಿದ್ದಾರೆ.

ಗ್ರಾಮೀಣ ವಿದ್ಯಾರ್ಥಿಗಳಿಗೆ ವಸತಿ ಸಹಿತ ಶಿಕ್ಷಣಕ್ಕಾಗಿ ವಸತಿ ನಿಲಯ ಆರಂಭಿಸಲಾಗಿದೆ. ಆದರೆ ವಸತಿ ನಿಲಯದಲ್ಲಿ ಒಮ್ಮೊಟ್ಟಿಗೆ ಇರುವುದು ಹಾಗೂ ವಸ್ತುಗಳನ್ನು ಬಳಸುವುದರಿಂದಾಗಿ ಮಕ್ಕಳಲ್ಲಿ ಚರ್ಮದ ಸಮಸ್ಯೆಗಳಾದ ಕಜ್ಜಿ, ಸೀಬು, ತಾಕಾ, ತುರಿಕೆ, ಉರಿ, ತಣ್ಣನೆಯ ಗಂಟುಗಳು, ಶಿಲೀಂಧ್ರಗಳು ಉಂಟುಮಾಡುವ ಚರ್ಮದ



ಉದಯವಾಹಿನಿ ಚಿತ್ರ

**ವಸತಿ ನಿಲಯದಲ್ಲಿ ಹತ್ತಾರು ಸಮಸ್ಯೆ**

ಸೋಂಕುಗಳು ಕಾಣಿಸಿಕೊಳ್ಳುತ್ತಿವೆ. ಅದರಲ್ಲೂ, ಚರ್ಮರೋಗ ಹೆಚ್ಚಾಗಿ ಕಂಡು ಬರುತ್ತಿರುವುದು ಪಾಲಕರ ಆತಂಕ ಹೆಚ್ಚಿಸಿದೆ. ಈಗಾಗಲೇ ಆರೋಗ್ಯ ಇಲಾಖೆಯಿಂದ ವರ್ಷಕ್ಕೆ ಕನಿಷ್ಠ ಎರಡು ಅಥವಾ ಮೂರು ಬಾರಿ ಚರ್ಮರೋಗ ತಜ್ಞರಿಂದ ತಪಾಸಣೆ, ಚರ್ಮದ ಜೊತೆಗೆ ಔಷಧ ಒದಗಿಸಬೇಕು ಎಂದು ಸರ್ಕಾರ ಆದೇಶ ನೀಡಿದೆ. ಆದರೆ ಸದುಪಯೋಗ ಆಗುತ್ತಿಲ್ಲ ಎಂದು ಪಾಲಕರು ಆರೋಪಿಸಿದ್ದಾರೆ. ಮಕ್ಕಳಲ್ಲಿ ಚರ್ಮ ರೋಗದ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದ್ದರೂ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಸರಿಪಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿಲ್ಲ. ವಸತಿ ನಿಲಯದಲ್ಲಿ ಹತ್ತಾರು ಸಮಸ್ಯೆಗಳಿವೆ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ನಿಲಯದ ಪ್ರಭಾರ ಮೇಲ್ವಿಚಾರಕ, 'ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ. ಪ್ರಾಂಶುಪಾಲರು, ವಾರ್ಡನ್ ಅಸಹಾಯಕರಾಗಿದ್ದಾರೆ. ಜಿಲ್ಲಾಡಳಿತವೇ ನಮ್ಮ ನೆರವಿಗೆ ಬರಬೇಕು' ಎಂದು ಪಾಲಕರು ಅಳಲು ತೋಡಿಕೊಂಡಿದ್ದಾರೆ.ಪ್ರಾಂಶುಪಾಲರ ವಸತಿ ನಿಲಯದಲ್ಲಿ ವಾರ್ಡನ್ ವಾಸ ವಸತಿ ಶಾಲೆಯಲ್ಲಿ ಶಾಲೆಯ ಪ್ರಾಂಶುಪಾಲರು ವಾಸವಾಗಿಲ್ಲ. ಬದಲಿಗೆ ಅವರ ನಿಲಯದಲ್ಲಿ ವಾರ್ಡನ್ ವಾಸಿಸುತ್ತಿದ್ದಾರೆ. ಇದರಿಂದಾಗಿ ಮಕ್ಕಳ ಯಾವುದೇ ಸಮಸ್ಯೆ ಪ್ರಾಂಶುಪಾಲರ ಗಮನಕ್ಕೆ ತರಲು ಸಾಧ್ಯವಾಗುತ್ತಿಲ್ಲ. ಕೂಡಲೇ ಪ್ರಾಂಶುಪಾಲರು ಕೂಡ ವಸತಿ ನಿಲಯದಲ್ಲಿ ವಾಸಿಸಬೇಕು ಎಂದು ಪಾಲಕರು ಅಗ್ರಹಿಸಿದ್ದಾರೆ.

**ನಿರ್ವಹಣೆ ಆಗದ ತೆರೆದ ಜಿಮ್:** ವಸತಿ ಶಾಲೆಯಲ್ಲಿ ಸಂಸದರ ನಿಧಿಯಲ್ಲಿ ಅಂದಾಜು 20 ಲಕ್ಷ ವೆಚ್ಚದಲ್ಲಿ ಮಕ್ಕಳ ದೈಹಿಕ ಸದೃಢತೆಗಾಗಿ ತೆರೆದ ಜಿಮ್‌ಗಳನ್ನು ಸ್ಥಾಪಿಸಲಾಗಿತ್ತು. ಆದರೆ ಸೂಕ್ತ ನಿರ್ವಹಣೆ ಆಗುತ್ತಿಲ್ಲ. ತೆರದ ಜಿಮ್ ಸುತ್ತಲೂ ಹುಲ್ಲು-ಗಿಡಗಂಟೆ ಬೆಳೆದಿದ್ದು ಕ್ರಿಮಿಕಿಟಗಳು ವಾಸಿಸುವ ತಾಣವಾಗಿ ಮಾರ್ಪಟ್ಟಿದೆ. ಮಕ್ಕಳು ಜೀವಭಯದಲ್ಲಿ ವ್ಯಾಯಾಮ ಮಾಡಬೇಕಾಗಿದೆ. ಈ ಸಂಬಂಧ ಪ್ರಾಂಶುಪಾಲ ದಿಗಂಬರ ಕಿವಡೆ ಅವರನ್ನೂ ಸಂಪರ್ಕಿಸಿದಾಗ ಈಗಾಗಲೇ ಈ ವಿಷಯದ ಕುರಿತು ಮೇಲಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಅನುದಾನದ ಕೊರತೆಯಿಂದಾಗಿ ಸಮಸ್ಯೆ ಉದ್ಭವಿಸಿದ್ದು ಎರಡು ಮೂರು ದಿನಗಳಲ್ಲಿ ಸಮಸ್ಯೆ ಬಗೆಹರಿಸಲು ಮೇಲಧಿಕಾರಿಗಳು ಸೂಚಿಸಿದ್ದಾರೆ' ಎಂದು ಹೇಳಿದರು.

> ವಸತಿ ನಿಲಯದಲ್ಲಿ ಕಳೆದ ಮೂರು ತಿಂಗಳಿಂದ ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಇಲ್ಲ. ತಣ್ಣೀರಿನ ಸ್ನಾನದಿಂದಾಗಿ ಕೆಲವರಿಗೆ ತಲೆನೋವು ನೆಗಡಿ ಕೆಮ್ಮುಜ್ವರ ಹಾಗೂ ಚರ್ಮ ರೋಗ ಬರುತ್ತಿದೆ ಹೆಸರು ಹೇಳಲು ಇಚ್ಚಿಸದ ವಿದ್ಯಾರ್ಥಿಗಳು. ಮಕ್ಕಳಿಗೆ ಮೂರು ತಿಂಗಳಿಂದ ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಕಲ್ಪಿಸದೆ ಇರುವುದು ಅಪರಾಧ. ಮಕ್ಕಳ ಹಕ್ಕುಗಳ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು -ಶಶಿಧರ ಕೋಸಂಬೆ
> ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

> ಶೀಘ್ರ ವಸತಿ ನಿಲಯಕ್ಕೆ ಭೇಟಿ ನೀಡಿ ಮಕ್ಕಳ ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಕಲ್ಪಿಸಲು ವ್ಯವಸ್ಥೆ ಮಾಡುತ್ತೇನೆ. ವಸತಿ ನಿಲಯವನ್ನು ಪರಿಶೀಲಿಸುತ್ತೇನೆ.
> -ದಿಲೀಪ ಗೌತಮ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ

## ಮಿನಿ ನ್ಯೂಸ್

### ಜೂಜು ಆಡುತ್ತಿದ್ದ 6 ಜನರ ಬಂಧನ

• ಉದಯವಾಹಿನಿ ಹೊನ್ನಾವರ

ಕರ್ಕಿ ಕಂಫರ್ಟ್ ಹೋಟೆಲ್‌ನ ಎರಡನೇ ಮಹಡಿಯ ಕೊಠಡಿಯೊಂದರಲ್ಲಿ ಜೂಜಾಟ ಆಡುತ್ತಿದ್ದ ವೇಳೆ ದಾಳಿ ನಡೆಸಿದ ಸಿಪಿಐ ಸಿದ್ದರಾಮೇಶ್ವರ ಎಸ್.ನೇತೃತ್ವದ ಪೊಲೀಸ್ ತಂಡ ಒಟ್ಟು 6 ಆರೋಪಿಗಳನ್ನು ಬಂಧಿಸಿದೆ. ಘಟನಾ ಸ್ಥಳದಲ್ಲಿದ್ದ 20,910 ನಗದು. ಇಸ್ಪೀಟ್ ಪರಿಕರಗಳು, ವಾಹನ ಹಾಗೂ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಜೂಜಾಟಕ್ಕೆ ಸಹಕರಿಸಿದ ಇತರ ಇಬ್ಬರು ಆರೋಪಿಗಳ ವಿರುದ್ಧವೂ ದೂರು ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

### ಬೈಕ್ ಕಳ್ಳತನ: ಆರೋಪಿಗಳ ಬಂಧನ

• ಉದಯವಾಹಿನಿ ಹರಿಹರ

ಬೈಕ್ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ನಗರ ಠಾಣೆ ಪೊಲೀಸರು, 8 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ನಗರದ ನಿವಾಸಿಗಳಾದ ಚಂದ್ರು ಎನ್. ಸೈಯದ್ ಹಫೀಜ್, ತೌಸೀಫ್ ಅಹಮದ್ ಬಂಧಿತರು. ನಗರದ ಬಾಜಾರ್ ಮೊಹಲ್ಲಾ ನಿವಾಸಿ ಅಬ್ದುಲ್ ವಾಹಿದ್ ಎಂಬವರು ತಮ್ಮ ಬೈಕ್ ಕಳ್ಳತನವಾಗಿರುವ ಕುರಿತು ಈಚೆಗೆ ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಗಿತ್ತು. ಹರಿಹರ ನಗರ ಠಾಣೆ ಪಿಐ ಆರ್.ಎಫ್. ದೇಸಾಯಿ ನೇತೃತ್ವದ ತಂಡವು ಬಂಧಿತರಿಂದ ಅಂದಾಜು 2.55 ಲಕ್ಷ ಮೌಲ್ಯದ ಬೈಕ್‌ಗಳನ್ನು ವಶಪಡಿಸಿಕೊಂಡಿದೆ.

### ಅಣಬೆ ಬೇಸಾಯಕ್ಕೆ ತರಬೇತಿ: ಅರ್ಜಿ

• ಉದಯವಾಹಿನಿ ಶಿವಮೊಗ್ಗ

ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಅಣಬೆ ಬೇಸಾಯ ಕುರಿತ 10 ದಿನಗಳ ಉಚಿತ ತರಬೇತಿ ಅಕ್ಟೋಬರ್ 6 ರಿಂದ ಹಮ್ಮಿಕೊಳ್ಳಲಾಗಿದೆ. ಆಸಕ್ತ ನಿರುದ್ಯೋಗಿ ಯುವಕ-ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಬಿಪಿಎಲ್ ಕಾರ್ಡ್ ಅಥವಾ ಜಾಬ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ನ್ನು ಕಡ್ಡಾಯವಾಗಿ ಹೊಂದಿರಬೇಕು. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಲು ಸೆಪ್ಟೆಂಬರ್ 25 ಕೊನೆಯ ದಿನ. ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042 ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆ ನಿರ್ದೇಶಕ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಸ್ ಕೊರತೆ- ವಿದ್ಯಾರ್ಥಿಗಳ ಪರದಾಟ

• ಉದಯವಾಹಿನಿ ತೆಕ್ಕಲಕೋಟೆ

ಕಂಪ್ಲಿ- ಎಂ. ಸೂಗೂರು ಮಾರ್ಗವಾಗಿ ಸಿರುಗುಪ್ಪ ತೆರಳಲು ಬಸ್ ಕೊರತೆಯಿಂದ ಸಾರ್ವಜನಿಕರು, ವಿದ್ಯಾರ್ಥಿಗಳು ನಿತ್ಯ ಪರದಾಡುವಂತಾಗಿದೆ. ಕಡಿಮೆ ಬಸ್ ಬಿಟ್ಟಿರುವುರಿಂದ ಮಣ್ಣೂರು, ಸೂಗೂರು, ರುದ್ರಪಾದ, ನಡವಿ, ಉಡೇಗೋಳ ನಿಟ್ಟೂರು, ಹೆರಕಲ್, ಕೆಂಚನಗುಡ್ಡ, ದೇವಲಾಪುರ ಮಾರ್ಗದಲ್ಲಿ ಸಂಚರಿಸುವ ಕಂಪ್ಲಿ ಹಾಗೂ ಬೆಂಗಳೂರು (ಸೂಗೂರು ವಾಸ್ತವ್ಯ) ಬಸ್‌ಗಳು ಪ್ರಯಾಣಿಕರಿಂದ ಸದಾ ತುಂಬಿರುತ್ತವೆ. ವಿದ್ಯಾರ್ಥಿಗಳ ಶಾಲಾ, ಕಾಲೇಜಿಗಳಿಗೆ ತೆರಳಲು ಬಸ್‌ನಲ್ಲಿ ಕುಳಿತುಕೊಳ್ಳಲು ಜಾಗ ಸಿಗದೆ ಬಾಗಿಲಿನಲ್ಲೇ ಜೋತುಬಿದ್ದು ಸಾಗುವಂತಾಗಿದೆ.

ಸಂಜೆ 5 ಗಂಟೆ ನಂತರ ಸಿರುಗುಪ್ಪದಿಂದ ಹೊರಡುವ ಬಸ್ ಹಳ್ಳಿಗಳಿಗೆ ಬರುವುದರೊಳಗೆ ಸಂಜೆ 7ರಿಂದ 8 ಆಗುತ್ತದೆ. ಬಸ್ ಸಮಸ್ಯೆ ಇರುವುದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೋ, ಬೇಡವೋ ಎಂದು ಚಿಂತಿಸುವಂತಾಗಿದೆ ಎಂದು ವಿದ್ಯಾರ್ಥಿ ಪಾಲಕರು ಆತಂಕ ವ್ಯಕ್ತಪಡಿಸಿದರು. ಈ ಕುರಿತು ಸಿರುಗುಪ್ಪ ಡಿಪೋ ಪ್ರಭಾರ ವ್ಯವಸ್ಥಾಪಕ ಉಮಾ ಮಹೇಶ್ವರ ಮಾತನಾಡಿ, ಸಮಸ್ಯೆ ನಮ್ಮ ಗಮನಕ್ಕೆ ಬಂದಿಲ್ಲ. ಮನವಿ ಸಲ್ಲಿಸಿದರೆ ಹೆಚ್ಚುವರಿ ಬಸ್ ಬಿಡಲಾಗುವುದು' ಎಂದು ತಿಳಿಸಿದರು.

### 20 ಮಂದಿಗೆ ವಾಂತಿಭೇದಿ, ಜ್ವರ: ಕೆರೆ ನೀರು ಸೇವಿಸಿ ಅಸ್ವಸ್ಥ

• ಉದಯವಾಹಿನಿ ನವಲಗುಂದ

ಗುಡಿಸಾಗರ ಗ್ರಾಮದ 20ಕ್ಕೂ ಹೆಚ್ಚು ಮಂದಿಗೆ ವಾಂತಿಭೇದಿಯಾಗಿದೆ. ಕೆರೆ ನೀರು ಸೇವಿಸಿ ಅಸ್ವಸ್ಥರಾಗಿದ್ದಾರೆ ಎನ್ನಲಾಗಿದೆ. ನವಲಗುಂದ ಸರ್ಕಾರಿ ಆಸ್ಪತ್ರೆಗೆ 19 ಮಂದಿ ದಾಖಲಾಗಿದ್ದಾರೆ. ಈ ಪೈಕಿ ಒಂಬತ್ತು ಪುರುಷರು, ಎಂಟು ಮಹಿಳೆಯರು ಹಾಗೂ ಇಬ್ಬರು ಮಕ್ಕಳು ಇದ್ದಾರೆ. ಕೆರೆ ನೀರು ಸ್ವಚ್ಛವಾಗಿಲ್ಲ. ಆ ನೀರನ್ನೇ ನಳಗಳಲ್ಲಿ ಗ್ರಾಮಕ್ಕೆ ಪೂರೈಸಲಾಗುತ್ತಿದೆ' ಎಂದು ಆಸ್ಪತ್ರೆಗೆ ದಾಖಲಾಗಿರುವ ಹೇಮವ್ವ ಫಕೀರಪ್ಪ ಬಾಗೂರು ತಿಳಿಸಿದರು. 19 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಿಕಿತ್ಸೆ ನೀಡಲಾಗುತ್ತಿದೆ, ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ. ಗುಡಿಸಾಗರದಲ್ಲೂ ತಾತ್ಕಾಲಿಕ ಕ್ಲಿನಿಕ್ ವ್ಯವಸ್ಥೆ ಮಾಡಲಾಗಿದೆ. ಅಸ್ವಸ್ಥರ ರಕ್ತ ಪರೀಕ್ಷೆ ಮಾಡಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್. ಎಂ.ಹೊನಕೇರಿ ತಿಳಿಸಿದರು. ನೀರಿನ ಮಾದರಿಯನ್ನು ಪರೀಕ್ಷೆಗೆ ಕಳಿಸಲಾಗುವುದು. ಕಾಲರಾ, ಡೆಂಗಿ ಪರೀಕ್ಷೆ ಮಾಡಲು ವೈದ್ಯರಿಗೆ ತಿಳಿಸಲಾಗಿದೆ. ವರದಿ ಬಂದ ನಂತರ ಕಾರಣ ತಿಳಿಯಲಿದೆ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಭುವನೇಶ ಪಾಟೀಲ ತಿಳಿಸಿದರು.

### ಮೋಸ ಹೋಗದಿರುವಂತೆ ಗ್ರಾಹಕರಲ್ಲಿ ಜಾಗೃತಿ ಮೂಡಿಸುವುದು ಅತಿ ಅವಶ್ಯಕ

• ಉದಯವಾಹಿನಿ ಬಾದಾಮಿ

ರೈತರು, ಕಾರ್ಮಿಕರು ಸೇರಿದಂತೆ ಸಾರ್ವಜನಿಕರಿಗೆ ದಿನನಿತ್ಯ ಮೋಸಕ್ಕೆ ಒಳಗಾಗುತ್ತಿದ್ದು, ಗ್ರಾಹಕರಿಗೆ ಬೇರೆಯವರಿಂದ ಮೋಸ ಹೋಗದಿರುವಂತೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಕರ್ನಾಟಕ ಪ್ರಾಂತ ಗ್ರಾಹಕ ಪಂಚಾಯತ ಸದಸ್ಯ, ನಿವೃತ್ತ ಪ್ರಾಚಾರ್ಯ ಎಸ್.ಎಚ್.ವಾಸನ ಹೇಳಿದರು. ಅವರು ಕಾಲೇಜು ರಸ್ತೆಯ ನ್ಯಾಯವಾದಿ ಎಂ.ಎಸ್.ಹಿರೇಮಠ ಅವರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಗ್ರಾಹಕ ಪಂಚಾಯತ ತಾಲ್ಲೂಕಾ ಘಟಕದ ಬೈಟಕ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ತಾಲ್ಲೂಕಾ ಘಟಕದ ಅಧ್ಯಕ್ಷ, ನ್ಯಾಯವಾದಿ ಎಂ.ಎಸ್.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಎರಡು ದೂರುಗಳನ್ನು ಸ್ವೀಕರಿಸಿ ಅವುಗಳ ಬಗ್ಗೆ ಚರ್ಚಿಸಲಾಯಿತು. ಇದೇ ಸಂದರ್ಭದಲ್ಲಿ 15 ಕ್ಕಿಂತ ಹೆಚ್ಚು ಸದಸ್ಯತ್ವ ನೋಂದಣಿ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಆರ್.ಪಿ.ಹಿಂದಿನಮನಿ, ಪ್ರಚಾರ ಸಮಿತಿಯ ಪ್ರಮುಖ ಶಂಕರ ಲಮಾಣಿ, ಎಸ್.ಡಿ.ಜೋಗಿನ, ಭೀಮನಗೌಡ ಬಾಜನ್ನವರ, ಅರುಣ ಗೌಡರ, ಖಜಾಂಚಿ ಜೆ.ಜೆ.ಸುಂಕದ ಭಾಗವಹಿಸಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ.

**ವೃಷಭ** ಸ್ನೇಹಿತರ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು, ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ.

**ಮಿಥುನ** ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದರಿಂದ ದೀರ್ಘ ಪ್ರಯಾಣವನ್ನು ತಪ್ಪಿಸಲು ಪ್ರಯತ್ನಿಸಿ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ.

**ಕರ್ಕಾಟಕ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ.

**ಸಿಂಹ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದು, ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ಕನ್ಯಾ** ಉತ್ತಮ ಜೀವನಕ್ಕಾಗಿ ನಿಮ್ಮ ಆರೋಗ್ಯ, ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ಹೊಸ ಆರ್ಥಿಕ ಒಪ್ಪಂದಕ್ಕೆ ಕೊನೆಯ ರೂಪ ದೊರೆಯುತ್ತದೆ ಮತ್ತು ಹೊಸ ಹಣ ಬರುತ್ತದೆ. ಕುಟುಂಬದ ಸದಸ್ಯರೊಂದಿಗೆ ವಿಶ್ರಾಂತಿಯ ಕ್ಷಣ ಕಳೆಯಿರಿ.

**ತುಲಾ** ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ, ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರುತ್ತವೆ.

**ವೃಶ್ಚಿಕ** ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ಯಾರಾದರೂ ನಿಮ್ಮ ನೆರೆ ಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು.

**ಧನಸ್ಸು** ನಗುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನೀವು ಹಣ ಉಳಿಸುವುದು ಕಷ್ಟ, ನೀವು ಅತಿಯಾಗಿ ಖರ್ಚು ಮಾಡುವ, ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ, ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ.

**ಮಕರ** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**ಕುಂಭ** ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ, ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು. ಸ್ನೇಹಿತರು ನಿಮ್ಮ ಉದಾರ ಪ್ರಕೃತಿಯ ಲಾಭ ಪಡೆಯಲು ಬಿಡಬೇಡಿ.

**ಮೀನ** ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಜೀವನದ ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ ಆದ್ದರಿಂದ ಇಂದಿನಿಂದಲೇ ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಯೋಚಿಸಿ ಇಲ್ಲದಿದ್ದರೆ ನೀವು ತೊಂದರೆಗೊಳಗಾಗಬಹುದು.

### ● ಬೆಳೆ ಹಾನಿ ಕುರಿತು ಜಿಲ್ಲೆಯಲ್ಲಿ ಜಂಟಿ ಸಮೀಕ್ಷೆ ಕೈಗೊಳ್ಳಲಾಗಿದೆ

# ಮಳೆಗೆ 63 ಹೆಕ್ಟೇರ್ ಬೆಳೆ, 149 ಮನೆ ಹಾನಿ

• ಉದಯವಾಹಿನಿ ವಿಜಯನಗರ

ನಿರಂತರ ಮಳೆಗೆ ಜಿಲ್ಲೆಯಲ್ಲಿ ಬೆಳೆ ಮತ್ತು ನೂರಕ್ಕೂ ಅಧಿಕ ಮನೆ ಹಾನಿಗೊಳಗಾಗಿವೆ. ಮುಂಗಾರು ಅರ್ಭಟ ಮುಂದುವರಿಸಿದ್ದರಿಂದ ಬೆಳೆಗಳು ಜಲಾವೃತಗೊಂಡು ಹಾನಿಯಾಗಿವೆ.

ಕಳೆದ ಆಗಸ್ಟ್ ಅಂತ್ಯದವರೆಗೆ ನಿರಂತರ ಸುರಿದ ಮಳೆ ಅವಾಂತರ ಸೃಷ್ಟಿಸಿದ್ದು, ಜಿಲ್ಲೆಯಲ್ಲಿ ಕಳೆದ ಜೂನ್‌ನಿಂದ ನೂರಾರು ಮನೆಗಳು ಹಾನಿಗೊಳಗಾಗಿವೆ. ಭಾರಿ ಮಳೆಯಾಗಿದ್ದರಿಂದ ಉತ್ತಮ ಬೆಳೆದು ನಿಂತಿದ್ದ ಫಸಲು ಹಾನಿಯಾಗಿದ್ದರಿಂದ ಅನ್ನದಾತ ಚಿಂತೆಗೀಡಾಗಿದ್ದಾನೆ. ಇನ್ನೂ ಕೆಲವು ಕಡೆಗಳಲ್ಲಿ

■ ಜಿಲ್ಲೆಯಲ್ಲಿ ಮಳೆಗೆ 149 ಮನೆ ಹಾನಿ- ಸಿಡಿಲಿಗೆ ಜೀವ ಹಾನಿ
■ 57.35 ಹೆಕ್ಟೇರ್ ಕೃಷಿ, 5.50 ಹೆಕ್ಟೇರ್ ತೋಟಗಾರಿಕೆ ಲಾಸ್
■ ಬೆಳೆ ಹಾನಿ ಕುರಿತು ಜಿಲ್ಲೆಯಲ್ಲಿ ಜಂಟಿ ಸಮೀಕ್ಷೆ ಕೈಗೊಳ್ಳಲಾಗಿದೆ.

ಬೆಳೆ ಆರಂಭಿಕ ಹಂತದಲ್ಲಿಯೇ ಮಳೆ ಬಿಡದೆ ಹಾಳಾಗಿದೆ. ಸುರಿಯುತ್ತಿರುವ ಮಳೆಗೆ ಹಾನಿಯಾಗಿವೆ. ಇದರಲ್ಲಿ ಹೊಸಪೇಟೆಯಲ್ಲಿ 5.28, ಹಡಗಲಿ 3.90, ಹರಪನಹಳ್ಳಿ 17.12, ಕೊಟ್ಟೂರು 21.25, ಕೂಡ್ಲಿಗಿ 15.30 ಹೆಕ್ಟೇರ್


ಉದಯವಾಹಿನಿ ಚಿತ್ರ

**ಜೂನ್‌ನಿಂದ ಬೆಳೆ ಹಾನಿ ವಿವರ**

| ತಾಲೂಕು | ಹೆಕ್ಟೇರ್ |
|---|---|
| ಹೊಸಪೇಟೆ ಹಡಗಲಿ | 3.90 ಹೆಕ್ಟೇರ್ |
| ಎಚ್.ಬಿ.ಹಳ್ಳಿ | 00 ಹೆಕ್ಟೇರ್ |
| ಹರಪನಹಳ್ಳಿ | 17.12 ಹೆಕ್ಟೇರ್ |
| ಕೊಟ್ಟೂರು | 21.25 ಹೆಕ್ಟೇರ್ |
| ಕೂಡ್ಲಿಗಿ | 15.30 ಹೆಕ್ಟೇರ್ |
| ಒಟ್ಟು | 62.85 ಹೆಕ್ಟೇರ್ |

ಬೆಳೆಹಾನಿಯಾಗಿದೆ. ಪ್ರಮುಖವಾಗಿ ಮೆಕ್ಕೆಜೋಳ, ರಾಗಿ, ಮತ್ತು ಟೊಮೆಟೊ ಹಾಗೂ ಈರುಳ್ಳಿ ಬೆಳೆಗಳು ಮಳೆಗೆ ಹಾನಿಯಾಗಿ ಅನ್ನದಾತನ ಆತಂಕಕ್ಕೆ ಕಾರಣವಾಗಿದೆ.

ಬೆಳೆ ಹಾನಿ ಕುರಿತು ಜಿಲ್ಲೆಯಲ್ಲಿ ಜಂಟಿ ಸಮೀಕ್ಷೆ

**149 ಮನೆಗಳಿಗೆ ಹಾನಿ**

**ಜಿಲ್ಲೆಯಲ್ಲಿ ಮಳೆಗಾಲ ಆರಂಭವಾದ ಬಳಿಕ ಈವರೆಗೆ 1 ಮನೆ ಹಾನಿಯಾಗಿರುವುದು ಸೇರಿ ಒಟ್ಟು 149 ಮನೆಗಳು ಭಾಗಶಃ ಹಾನಿಯಾಗಿವೆ. ಇದರಲ್ಲಿ ಹರಪನಹಳ್ಳಿ ಅತಿ ಹೆಚ್ಚು 37 ಮನೆ ಹಾನಿಯಾಗಿವೆ. ಇದನ್ನು ಹೊರತುಪಡಿಸಿ ಕೂಡ್ಲಿಗಿ 36 ಮತ್ತು ಕೊಟ್ಟೂರು ತಾಲ್ಲೂಕಿನಲ್ಲಿ 21 ಮನೆಗಳಿಗೆ ಹಾನಿಯಾಗಿವೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 12 ಮನೆ ಹಾನಿಯಾಗಿದ್ದು, ಸಿಡಿಲು ಬಡಿದು ಒಬ್ಬರು ಸಾವನ್ನಪ್ಪಿದ್ದಾರೆ. ಇನ್ನೂ ಕೊಟ್ಟೂರಿನ 2 ದೊಡ್ಡ ಜಾನುವಾರು ಹಾಗೂ ಕೂಡ್ಲಿಗಿಯಲ್ಲಿ 1 ಸಣ್ಣ ಜಾನುವಾರು ಮೃತಪಟ್ಟಿವೆ.**

ಕೈಗೊಳ್ಳಲಾಗಿದೆ. ಕಡಿಮೆ ಪ್ರಮಾಣದಲ್ಲಿ ಹಾನಿಯಾಗಿದ್ದು, ಬೆಳೆ ಹಾನಿಯಾದ ರೈತರಿಗೆ ಪರಿಹಾರ ಸಿಗಲಿದೆ ಎನ್ನಲಾಗಿದೆ.

ಜಿಲ್ಲೆಯಲ್ಲಿ ನಿರಂತರ ಮಳೆ ಸುರಿಯುತ್ತಿರುವ ಪರಿಣಾಮ ಬೆಳೆ ಹಾನಿ ಕುರಿತು ರೈತರ ಜಮೀನುಗಳಿಗೆ ಭೇಟಿ ನೀಡಿ ಸಮೀಕ್ಷೆ ಮಾಡಲಾಗಿದೆ ಈ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲಾಗಿದೆ ಎಂದಿದ್ದಾರೆ ಡಿ.ಟಿ.ಮಂಜುನಾಥ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ವಿಜಯನಗರ. ಈಗಾಗಲೇ ಸಿಎಂ ಸಿದ್ದರಾಮಯ್ಯ ಕೂಡಾ ಈ ಬಗ್ಗೆ ಸಭೆ ನಡೆಸಿದ್ದಾರೆ.

## ಪ್ರವಾಹ ಪೀಡಿತರಿಗೆ 11 ಲಕ್ಷ ದೇಣಿಗೆ

• ಉದಯವಾಹಿನಿ ಬೀದರ್

ಬೀದರನ ಶ್ರೀ ನಾನಕ ಝಿರಾ ಸಾಹೇಬ್ ಪ್ರಬಂಧಕ ಕಮಿಟಿ ಹಾಗೂ ಗುರು ನಾನಕ ಶಿಕ್ಷಣ ಸಂಸ್ಥೆಗಳ ಸಮೂಹದಿಂದ ಪಂಜಾಬ್ ಪ್ರವಾಹ ಪೀಡಿತರಿಗೆ ಪರಿಹಾರ ನಿಧಿಯಾಗಿ 11 ಲಕ್ಷ ರೂಪಾಯಿ ಚೆಕ್‌ನ್ನು ದೇಣಿಗೆ ರೂಪದಲ್ಲಿ ನೀಡಲಾಯಿತು.

ಈ ಚೆಕ್ಕನ್ನು ನಾಂದೇಡಿನ ಸಿಂಗ್ ಸಾಹೇಬ್ ಭಾಯಿ ರಾಮಸಿಂಗ್ ಧುಪಿಯಾ ತಖ್ತ ಸಚ್ಚಖಂಡ ಹಜೂರ ಸಾಹೇಬ್, ಹಾಗೂ ಸಂತ್ ಬಾಬಾ ನರೇಂದ್ರಸಿಂಗ್ ಜತ್ತೆದಾರ ಮತ್ತು ಸಂತ್ ಬಾಬಾ ಬಲ್ವಿಂದರ್ ಸಿಂಗ್ ಗುರುದ್ವಾರಾ ಲಂಗರ್ ಸಾಹೇಬ್ ನಾಂದೇಡ್ ಇವರ ಸಮ್ಮುಖದಲ್ಲಿ ಬೀದರ ಗುರುದ್ವಾರಾ ಶ್ರೀ ನಾನಕ ಝಿರಾ ಸಾಹೇಬ್ ಅಧ್ಯಕ್ಷರಾದ ಡಾ. ಎಸ್.ಬಲಬೀರಸಿಂಗ್ ಅವರು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಮನಪ್ರಿತ್‌ಸಿಂಗ್ ಖನುಜಾ, ಪುನೀತ್ ಸಿಂಗ್ ಉಪಸ್ಥಿತರಿದ್ದರು.

## 10 ಲಕ್ಷ ರೂ. ವಂಚನೆ ಪ್ರಕರಣ; ಮಾಜಿ ಬ್ಯಾಂಕ್ ಸಿಬ್ಬಂದಿ ಬಂಧನ, ಸಹಚರ ನಾಪತ್ತೆ

• ಉದಯವಾಹಿನಿ ಬೆಳ್ತಂಗಡಿ

ಬೆಳಾಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದ ಹಣಕಾಸು ವಂಚನೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಬ್ಯಾಂಕಿನ ಮಾಜಿ ಸಿಬ್ಬಂದಿಯನ್ನು ಧರ್ಮಸ್ಥಳ ಪೊಲೀಸರು ಬಂಧಿಸಿದ್ದಾರೆ. ಆರೋಪಿ ಸದಾಶಿವ ಅಲಿಯಾಸ್ ಸುಜಿತ್ ಎಂಬಾತನನ್ನು ಧರ್ಮಸ್ಥಳ ಎಸ್‌ಐ ಸಮರ್ಥ್ ಆರ್ ಗಾಣಿಗೇರ ನೇತೃತ್ವದ ತಂಡ ಖಚಿತ ಆಧಾರದ ಮೇರೆಗೆ ಸೆಪ್ಟೆಂಬರ್ 5 ರಂದು ಮಂಗಳೂರಿನ ಪಡೀಲ್ನಲ್ಲಿ ಪತ್ತೆಹಚ್ಚಿ ಬಂಧಿಸಿದ್ದಾರೆ. ಸೆಪ್ಟೆಂಬರ್ 6 ರಂದು ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇದೇ ವೇಳೆ ಪ್ರಕರಣದ ಮತ್ತೊಬ್ಬ ಆರೋಪಿ, ಮಾಜಿ ಉದ್ಯೋಗಿ ಪ್ರಶಾಂತ್ ನಾಪತ್ತೆಯಾಗಿದ್ದಾನೆ.

## 1.14 ಕೋಟಿ ರೂ. ವಂಚನೆ

• ಉದಯವಾಹಿನಿ ಮಂಗಳೂರು

ಆನ್‌ಲೈನ್ ಮೂಲಕ ಹೂಡಿಕೆ ನೆಪದಲ್ಲಿ ವ್ಯಕ್ತಿಯೊಬ್ಬರಿಗೆ 1,14,50000 ರೂ. ವಂಚನೆ ಮಾಡಿರುವ ಬಗ್ಗೆ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರುದಾರ ವ್ಯಕ್ತಿ ತನ್ನ ಉಳಿತಾಯದ ಹಣವನ್ನು ಬ್ಯಾಂಕ್ ಖಾತೆಯಲ್ಲಿರಿಸಿದ್ದರು. ಜು, 17 ರಂದು ಅವರನ್ನು ಅಪರಿಚಿತನೊಬ್ಬ ಸ್ಟಾಕ್ ಎಕ್ಸ್ಚೇಂಜ್ ವಾಟ್ಸ್ಆ್ಯಪ್ ಗ್ರೂಪ್‌ಗೆ ಸೇರಿಸಿದ್ದನು. ಗ್ರೂಪ್ ಅಡ್ಮಿನ್ ವೀರೆಂದರ್‌ಸಿಂಗ್ ಎಂಬಾತ ಸಂದೇಶ ಕಳುಹಿಸಿ ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಗಳಿಸುವ ಆಮಿಷ ತೋರಿಸಿದನು. ಅದರಂತೆ ಆ.11 ರಂದು ಅಪರಿಚಿತ ಮಹಿಳೆ ಕ್ರಿಸ್ಟಿನ್ ಎಂಬವಳನ್ನು ವಾಟ್ಸ್‌ಅಪ್ ಮೂಲಕ ಸಂಪರ್ಕಿಸಿ ಮಾರುಕಟ್ಟೆ ಬಗ್ಗೆ ವಿಚಾರಿಸಿದ್ದರು, ಬಳಿಕ ಆ 13 ರಿಂದ ಸೆ.2 ರವರೆಗೆ ಹಂತ ಹಂತವಾಗಿ ಆರ್‌ಟಿಜಿಎಸ್, ನೆಫ್ಟ್ ಮೂಲಕ 1, 14, 50,00 ರೂಗಳನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿದ್ದರು. ಬಳಿಕ ಶೇ.20 ರಷ್ಟು ಹೆಚ್ಚಿನ ತೆರಿಗೆ ಪಾವತಿಸುವಂತೆ ಹಾಗೂ ಹೂಡಿಕೆ ಮಾಡದಿದ್ದರೆ ಹಣ ಹಿಂಪಡೆಯಲು ಅಗುವುದಿಲ್ಲ ಎಂದು ತಿಳಿದ್ದರು. ಟ್ರೇಡಿಂಗ್ ಜಾಹೀರಾತು ನೋಡಿ ಹಣ ಹೂಡಿಕೆ ಮಾಡಲು ಹೋಗಿ 23.96 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ಮಂಗಳೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೂರುದಾರರು ದುಬೈಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿ ಮನೆಯಲ್ಲಿದ್ದರು. 2024ರ ಫೆ.27 ರಂದು ಟ್ರೇಡಿಂಗ್ ಜಾಹೀರಾತು ನೋಡಿ ನೋಂದಣಿ ಮಾಡಿ ಮೊದಲಿಗೆ 82,862 ರೂ. ಪಾವತಿಯನ್ನು ಮಾಡಿದರು. ನಂತರ ಹಂತ ಹಂತವಾಗಿ ಒಟ್ಟು 23,96,980 ರೂ. ಗಳನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿದ್ದರು.

## ಜನರ ಸಮಸ್ಯೆ ಬರುವುದಕ್ಕೂ ಮುನ್ನವೇ ಬಗೆಹರಿಸಬೇಕು

# ಶಾಸಕ ಸಿ.ಎಸ್. ನಾಡಗೌಡ ಹೇಳಿಕೆ

• ಉದಯವಾಹಿನಿ ಮುದ್ದೇಬಿಹಾಳ

ಜನರ ಅಭಿವೃದ್ದಿಗಾಗಿ ಸರ್ಕಾರ ಹಲವಾರು ಸೌಲಭ್ಯಗಳನ್ನು ಜಾರಿಗೊಳಿಸಿದ್ದು, ಅವುಗಳನ್ನು ತಲುಪಿಸುವುದು ಅಧಿಕಾರಿಗಳ ಕರ್ತವ್ಯ ಮಾತ್ರವಲ್ಲದೆ ಜವಾಬ್ದಾರಿಯೂ ಆಗಿದೆ ಎಂದು ಶಾಸಕ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ ಹೇಳಿದರು.

ಹಡಲಗೇರಿ ಗ್ರಾಮಪಂಚಾಯತ್ ವ್ಯಾಪ್ತಿಯ ಹಡಲಗೇರಿ, ಮುದ್ನಾಳ, ಮುದ್ನಾಳ ತಾಂಡಾ, ಗೆದ್ದಲಮರಿ, ಗೆದ್ದಲಮರಿ ತಾಂಡಾ ಗ್ರಾಮಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಮೇತ ನಡೆದ ಜನಸಂಪರ್ಕ ಸಭೆಗಳಲ್ಲಿ ಮಾತನಾಡಿದ ಅವರು, ''ಗ್ರಾಮಸ್ಥರ ಸಮಸ್ಯೆಗಳು ನನ್ನ ಹತ್ತಿರ ಬರದೇ ಮುಂಚೆಯೇ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಂಡರೆ ಜನರಿಗೆ ಅನುಕೂಲವಾಗುತ್ತದೆ. ಜನರು ಕಚೇರಿಗಳಿಗೆ ಅಲೆದಾಡಬೇಕಾಗದಂತೆ ವ್ಯವಸ್ಥೆ ಮಾಡಬೇಕು ಎಂದರು.

ಸಭೆಯಲ್ಲಿ ಗ್ರಾಮಸ್ಥರು ನೀರಾವರಿ, ಹೊಲಗಾಲುವೆ, ಗ್ರಾಮೀಣ ರಸ್ತೆಗಳ ದುರಸ್ತಿ, ಬಸ್ ಸೌಲಭ್ಯ ಸೇರಿದಂತೆ ಹಲವು ಬೇಡಿಕೆಗಳನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಶಾಸಕರು ಸ್ಥಳದಲ್ಲೇ ಸಾರಿಗೆ ಇಲಾಖೆಯ ಅಧಿಕಾರಿಗೆ ಕರೆ ಮಾಡಿ ಮುದ್ನಾಳ ಹಾಗೂ ಮುದ್ನಾಳ ತಾಂಡಾಗೆ ಶೀಘ್ರ ಬಸ್ ಸೌಲಭ್ಯ ಕಲ್ಪಿಸಲು ಸೂಚಿಸಿದರು.



ಉದಯವಾಹಿನಿ ಚಿತ್ರ

**ಇತ್ತೀಚಿನ ಮಳೆಯಿಂದ ಹದಗೆಟ್ಟ ಗ್ರಾಮೀಣ ರಸ್ತೆಗಳ ದುರಸ್ತಿ, ಆಲಮಟ್ಟಿ ಎಡದಂಡೆ ಕಾಲುವೆಯಿಂದ ಉಂಟಾಗಿರುವ ಸವುಳು-ಜವುಳು ಸಮಸ್ಯೆಗೆ ಪರಿಹಾರ, ಶಾಲಾ ಕಟ್ಟಡಗಳ ಮೇಲ್ಚಾವಣಿ ಸೋರಿಕೆ ತುರ್ತು ದುರಸ್ತಿ, ಕುಡಿಯುವ ನೀರು ಮತ್ತು ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಕೂಡ ಶಾಸಕರು ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಶಾಸಕ ಸಿ.ಎಸ್. ನಾಡಗೌಡ**

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿಬಾಯಿ ಬಿರಾದಾರ, ಉಪಾಧ್ಯಕ್ಷೆ ಗೌರಮ್ಮ ಪರಪ್ಪಗೋಳ, ಮುಖಂಡರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಶಿಕ್ಷಣವೇ ಶಕ್ತಿ, ಶಿಕ್ಷಣದಿಂದಲೇ ಪ್ರಗತಿ

• ಉದಯವಾಹಿನಿ ಭಾಲ್ಕಿ

ಶಿಕ್ಷಣವೇ ಶಕ್ತಿ, ಶಿಕ್ಷಣದಿಂದಲೇ ಪ್ರಗತಿ ಸಾಧ್ಯ, ಶಿಕ್ಷಕರಿಗೆ ಗೌರವಕೊಡುವ ಕಾರ್ಯ ನಮ್ಮಿಂದಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ಪಟ್ಟಣದ ಪ್ರಯಾಗ ಫಂಕ್ಷನ್ ಹಾಲ್‌ನಲ್ಲಿ ನಡೆದ ಬೀದರ ಜಿಲ್ಲಾ ಹಾಗು ಭಾಲ್ಕಿ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಕರಿಗೆ ಪಾರದರ್ಶಕತೆಯಿಂದ ಗೌರವ ಕೊಡುವ ಕಾರ್ಯವಾಗಬೇಕು. ಧಾರ್ಮಿಕ ಪ್ರಧಾನವಾದ ನಮ್ಮ ದೇಶದಲ್ಲಿ ಗುರುಕುಲ ಪದ್ಧತಿ ಎತ್ತಿ ಹಿಡಿಯಲಾಗಿದೆ. ಶಿಕ್ಷಕರ ವೃತ್ತಿ ಒಂದು ಸಾಮಾಜಿಕ ಸೇವೆಯಾಗಿದೆ. ಶಿಕ್ಷಕ ವೃತ್ತಿಯ ಪಾವಿತ್ರತೆ ಕಾಪಾಡಿಕೊಂಡು ಹೋಗುವುದು ಎಲ್ಲಾ ಶಿಕ್ಷಕರ ಕರ್ತವ್ಯವಾಗಿದೆ.

ರಾಷ್ಟ್ರ ನಿರ್ಮಾಣ ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ನಮ್ಮ ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ, ಪ್ರತಿವರ್ಷ ಶಿಕ್ಷಣಕ್ಕೆ ಹೆಚ್ಚುವರಿಯಾಗಿ ಶಿಕ್ಷಣ ಅವಿಸ್ಕಾರ ರೂಪದಲ್ಲಿ 125 ಕೋಟಿ ರೂ. ಅನುದಾನ ನೀಡಲಾಗುತ್ತಿದೆ. 3 ವರ್ಷಗಳ ಅವಧಿಯಲ್ಲಿ ಬೀದರ ಜಿಲ್ಲೆಗೆ ಶಿಕ್ಷಣಕ್ಕಾಗಿ 4.5ಕೋಟಿ ರೂ. ಅನುದಾನ ಒದಗಿಸಲಾಗಿದೆ. ಜೂನ್ ತಿಂಗಳಿನಲ್ಲಿಯೇ ಶಿಕ್ಷಕರ ಕೊರತೆ ನೀಗಿಸುವ ನಿಟ್ಟಿನಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಕೊಳ್ಳಲಾಗಿದೆ. ಶಿಕ್ಷಕರು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ, ಎಸ್.ಎಸ್.ಎಲ್.ಸಿ ಫಲಿತಾಂಶ ಉತ್ತಮ ಪಡಿಸುವ ಕಾರ್ಯಮಾಡಬೇಕು ಎಂದು ಹೇಳಿದರು. ಹಿರೇಮಠ ಸಂಸ್ಥಾನದ ಶ್ರೀ ಮಹಾಲಿಂಗ ಸ್ವಾಮೀಜಿ, ಅಣದೂರಿನ ವರಜ್ಯೋತಿ ಭಂತೆ, ಪ್ರೇರಣಾತಾಯಿ ಭೊಸ್ಲೆ ತೋರಣೆಕರ ಸಾನಿಧ್ಯವಹಿಸಿ ಮಾತನಾಡಿದರು.

## ಗ್ರಾಮೀಣ ಭಾಗದ ಜನರ ಅನುಕೂಲ ತಕ್ಕಂತೆ ನೂತನ ದ್ವಿಚಕ್ರ ವಾಹನ ಬಿಡುಗಡೆ

• ಉದಯವಾಹಿನಿ, ಚಿಂಚೋಳಿ

ಗ್ರಾಮೀಣ ಭಾಗದ ಜನರಿಗೆ ಅನುಕೂಲ ತಕ್ಕಂತೆ ನೂತನವಾದ ಶೈನ್ ಹೂಂಡಾ ಡಿ.ಕ್ಸ್ 100ಸಿಸಿ ಹಾಗೂ ಸಿ.ಬಿ ಓರೆಂಟ್ 125ಸಿಸಿ ಮತ್ತು ಎಕ್ಟೀವಾ 25 ದ್ವಿಚಕ್ರ ವಾಹನಗಳು ಹೂಂಡಾ ಕಂಪನಿ ಯು ಬಿಡುಗಡೆ ಮಾಡಿದೆ ಎಂದು ಹಿರಿಯ ಸಮಾಜ ಸೇವಕ ಅಶೋಕ ಪಾಟೀಲ ಹೇಳಿದರು.

ಪಟ್ಟಣದ ಮಹೇಶ ಹೂಂಡಾ ದ್ವಿಚಕ್ರ ವಾಹನ ಮಾರಾಟ ಮಳಿಗೆಯಲ್ಲಿ ಹಮ್ಮಿಕೊಂಡ ನೂತನ ಶೈನ್ ಹೂಂಡಾ ಡಿ.ಕ್ಸ್,ಸಿ.ಬಿ.ಓರೆಂಟ್ 125,ಆ್ಯಕ್ಟೀವಾ 25 ನೂತನವಾಗಿ ಮಾರುಕಟ್ಟೆಗೆ ಬಂದಿರುವ ದ್ವಿಚಕ್ರ ವಾಹನಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ಈಗ ಕಾಲ ಬಹಳಷ್ಟು ವೇಗವಾಗಿ ಮುಂದುವರೆಯುತ್ತಿದೆ,ಅದರ ತಕ್ಕಂತೆ ಜನರಿಗೆ ಅನುಕೂಲ ಕೂಡ ಬೇಕಾಗುತ್ತದೆ ಜನರ ಬೇಡಿಕೆಯಂತೆ ಕಂಪನಿಗಳು ಹೊಸ ಹೊಸ ಸ್ಥಾಪನೆಯಾಗುತ್ತಿದೆ.


ಉದಯವಾಹಿನಿ ಚಿತ್ರ

ಮೂರು ದಶಕಗಳ ಹಿಂದೆ ಬರೀ ಸೈಕಲ್ ಸವಾರಿ ಮಾಡುತ್ತಿದ್ದೇವು ತದನಂತರ ಜಾವಾ,ರಾಜ್ ಧೂತ್,ಬೂಲೋಟ್ ಅಂಥಹ ದ್ವಿಚಕ್ರ ವಾಹನಗಳು ಮಾರುಕಟ್ಟೆಗೆ ಬಂದಿದವು ಈಗ ಕಂಪನಿಗಳು ಮಾಯಾವಾಗಿವೆ,ಈಗಿನ ಕಾಲದ ಹೊಸ ಹೊಸ ಕಂಪನಿಗಳು ಹೊಸ ಹೊಸ ದ್ವಿಚಕ್ರ ವಾಹನಗಳು ಬರುತ್ತಿವೆ ಆದರೆ ವಾಹನ ಸವಾರರು ಬಹಳಷ್ಟು ಎಚ್ಚರಿಕೆಯಿಂದ ಟ್ರಾಫಿಕ್ ನಿಯಮವಳಿಗಳು ಪಾಲನೆ ಮಾಡುತ್ತಾ ದ್ವಿಚಕ್ರ ವಾಹನಗಳು ಚಲಿಸಬೇಕು ಎಂದರು. ಮಹೇಶ ಹೂಂಡಾ ದ್ವಿಚಕ್ರ ವಾಹನ ಮಾರಾಟ ಮಳಿಗೆ ಮಾಲಿಕ ಮನೋಹರ ಪತ್ತಾರ್ ಅಧ್ಯಕ್ಷತೆ ವಹಿಸಿದ್ದರು.

**ನೂತನವಾದ ದ್ವಿಚಕ್ರಗಳು ಮಾರುಕಟ್ಟೆಗಳಿಗೆ ಬರುತ್ತಿವೆ ಮಕ್ಕಳಿಗೆ ವಾಹನಗಳು ಖರೀದಿಸಿ ಕೊಡಬೇಕು ಎಂಬುವುದು ಪಾಲಕರ ಮನಸ್ಸು ಇರುತ್ತೆ ಆದರೆ ಮಕ್ಕಳು ಉಪಯೋಗಕ್ಕೆ ತಕ್ಕಂತೆ ವಾಹನ ಬಳಸಿ ಟ್ರಾಫಿಕ್ ನಿಯಮಗಳು ಪಾಲಿಸಿ ಪಾಲಕರ ಭರವಸೆಗಳು ಈಡೇರಿಸಿ ಉನ್ನತಮಟ್ಟದ ಶಿಕ್ಷಣ ಪಡೆದು ಪಾಲಕರ ಹೆಸರು ಅಮರಗೊಳಿಸಿ.**
**-ಶ್ರೀದೇವಿ, ನಿವೃತ್ತ ಶಿಕ್ಷಕಿ**

## ಬಸವ ಜನ್ಮಭೂಮಿಯಲ್ಲಿ ಶಸಾಪ 31ನೇ ಸರ್ವ ಸದಸ್ಯರ ಸಭೆ

• ಉದಯವಾಹಿನಿ, ಬಸವನಬಾಗೇವಾಡಿ

ಕಳೆದ ವಾರ ಪಟ್ಟಣದಿಂದ ಚಾಲನೆ ಸಿಕ್ಕು ಇಡೀ ರಾಜ್ಯದಾದ್ಯಂತ ಸಂಚರಿಸುತ್ತಿರುವ ಬಸವ ಸಂಸ್ಕೃತಿ ಅಭಿಯಾನವನ್ನು ಪಟ್ಟಣದ ಸಮಸ್ತ ಜನತೆ ಇತಿಹಾಸದಲ್ಲಿ ಬರೆದಿಡುವ ಹಾಗೇ ಮಾಡಿದ್ದೀರಿ, ಅದೇ ರೀತಿಯಾಗಿ ಶಸಾಪ ಸಭೆಯನ್ನು ಆಯೋಜಿಸುವ ಮಹತ್ತರ ಜವಾಬ್ದಾರಿ ಬಸವ ಜನ್ಮಭೂಮಿಯ ಸರ್ವ ಸದಸ್ಯರ ಮೇಲಿದೆ ಎಂದು ಪಟ್ಟಣದ ಸಿದ್ದಲಿಂಗ ಸ್ವಾಮೀಜಿ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದರು.

ಅವರು ಪಟ್ಟಣದ ವಿರಕ್ತಮಠದಲ್ಲಿ ನಡೆದ ಶಸಾಪ ಸದಸ್ಯರ ಸಭೆಯಲ್ಲಿ ಮಾತನಾಡಿದರು. ರಾಜ್ಯ ಸಹಕಾರಿ ಮಹಾ ಮಂಡಳ ನಿರ್ದೇಶಕ ಈರಣ್ಣ..ಚ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇದೇ 14ರಂದು ಜಿಲ್ಲಾ ಕೇಂದ್ರದಲ್ಲಿ ನಡೆಯಬೇಕಾದ ಶರಣ ಸಾಹಿತ್ಯ ಪರಿಷತ್ತಿನ 31ನೇ ಸರ್ವ ಸದಸ್ಯರ ಸಭೆಯನ್ನು ಪಟ್ಟಣದಲ್ಲಿ ಆಯೋಜನೆ ಮಾಡಿದ್ದು ಹೆಮ್ಮೆಯ ಸಂಗತಿ. ಸರ್ವ ಸದಸ್ಯರು ಜವಾಬ್ದಾರಿಯುತವಾಗಿ


ಉದಯವಾಹಿನಿ ಚಿತ್ರ

ಇಡೀ ನಾಡಿನಾದ್ಯಾಂತ ಆಗಮಿಸುವ ಸದಸ್ಯರಿಗೆ ಸೂಕ್ತ ವಸತಿ , ಪ್ರಸಾದ ಹಾಗೂ ಅಚ್ಚುಕಟ್ಟಾಗಿ ಸಭೆಯ ಯಶಸ್ವಿಗೆ ಶ್ರಮಿಸೋಣ. ಹೊರಗಿನ ಜಿಲ್ಲೆಗಳಿಂದ ಆಗಮಿಸುವ ಸದಸ್ಯರಿಗೆ ವಸತಿಗಾಗಿ ಶ್ರೀ ಬಸವೇಶ್ವರ ದೇವಸ್ಥಾನದ ಪ್ರಾಂಗಣದ ಕೋಣೆಗಳನ್ನು , ಶ್ರೀ ಬಸವೇಶ್ವರ ಮಂಗಲ ಕಾರ್ಯಾಲಯವನ್ನು ಬಳಸಿಕೊಳ್ಳೋಣ. ಸಭೆಯ ಕಾರ್ಯಕ್ರಮವನ್ನು ಊರಿನ ಕಾರ್ಯಕ್ರಮ ಎಂದು ಯಶಸ್ವಿಗೆ ಸಹಕರಿಸೋಣ ಎಂದರು. ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ, ಕದಳಿ ವೇದಿಕೆ ತಾಲ್ಲೂಕಾ ಸಂಚಾಲಕಿ ಸಾವಿತ್ರಿ ವಿ.ಕಲ್ಯಾಣಶೆಟ್ಟಿ, ಹಿರಿಯ ಸದಸ್ಯರಾದ ಎಸ್.ಎಸ್ ಝುಳಕಿ, ಎಫ್.ಡಿ ಮೇಟಿ, ವೀರೇಶ ಬಿ ಕುಂಟೋಜಿ, ಎಚ್.ಎಸ್ ಬಿರಾದಾರ, ಪಿ.ಎಲ್ ಹಿರೇಮಠ, ಸಂಗನಗೌಡ ಹಾಜರಿದ್ದರು.

**ಇದೇ 13 ಹಾಗೂ 14ರಂದು ಸಭೆಯಲ್ಲಿ ಪರಿಷತ್ತಿನ ಗೌರವಾಧ್ಯಕ್ಷರಾದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪೂಜ್ಯ ಜಗದ್ಗುರು ಡಾ. ಶ್ರೀ ತೋಂಟದ ಸಿದ್ದರಾಮ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಜರುಗುವ ಸಭೆಯಲ್ಲಿ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಗೊರು ಚನ್ನಬಸಪ್ಪ ಹಾಗೂ ಮಾಜಿ ಸಚಿವರಾದ ಎಸ್ ಎಸ್ ಪಾಟೀಲ, ಲೀಲಾವತಿ ಆರ್.ಪ್ರಸಾದ ಸೇರಿದಂತೆ ಅನೇಕ ಗಣ್ಯರು ಆಗಮಿಸುವರು.**
**-ವೀರಣ್ಣ.ಬ ಮರ್ತುರ,ಶಸಾಪ ತಾಲ್ಲೂಕಾಧ್ಯಕ್ಷ**

## ವಿದ್ಯಾರ್ಥಿಗಳ ದೈಹಿಕ ಮಾನಸಿಕ ಬೆಳವಣಿಗೆಗೆ ಕ್ರೀಡೆ ಅವಶ್ಯಕ: ಚವ್ಹಾಣ

• ಉದಯವಾಹಿನಿ, ಚಿಂಚೋಳಿ

ವಿದ್ಯಾರ್ಥಿಗಳ ದೈಹಿಕ ಮಾನಸಿಕ ಬೆಳವಣಿಗೆಗೆ ಕ್ರೀಡೆ ಅವಶ್ಯಕವಾಗಿದ್ದು,ಸೋಲು ಗೆಲುವು ಸಮಾನವಾಗಿ ಸ್ವೀಕರಿಸಿ,ಸ್ಪರ್ಧಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷಕುಮಾರ ಚವ್ಹಾಣ ಹೇಳಿದರು. ಪಟ್ಟಣದ ತಾಲ್ಲೂಕಾ ಕ್ರೀಡಾಂಗಣದಲ್ಲಿ 2025-26ನೇ ಸಾಲಿನ ತಾಲ್ಲೂಕಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು,ಕ್ರೀಡೆಯಲ್ಲಿ ಗೆದ್ದವನು ನಾಯಕನಾದರೆ ಸೋತವನು ಮಾರ್ಗದರ್ಶಕನಾಗುತ್ತಾನೆ.

ವಿದ್ಯಾರ್ಥಿಗಳು ಇಂದಿನ ಕಾಲದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವುದರ ಜೊತೆ ಕ್ರೀಡೆಗೂ ಮಹತ್ವ ನೀಡಿ ಹಾಗೂ ದುಶ್ಚಟಗಳಿಂದ ದೂರವಿದ್ದು ಪೌಷ್ಟಿಕ ಆಹಾರ ಸೇವನೆ ದೈನಂದಿನ ದೈಹಿಕ ವ್ಯಾಯಾಮ ಹಾಗೂ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಲಕ್ಷ್ಮಯ್ಯ ಮಾತನಾಡಿ ಭಾರತ ದೇಶದಲ್ಲಿ 140ಕೋಟಿ ಜನಸಂಖ್ಯೆ ಇದ್ದರೂ ಕೂಡ ಒಲಂಪಿಕ್ಸ್‌ನಲ್ಲಿ ಪದಕಗಳು ಗೆಲ್ಲಲು ಆಗುತ್ತಿಲ್ಲ ನೋವಿನ ಸಂಗತಿಯಾಗಿದೆ. ವಿದ್ಯಾರ್ಥಿಗಳು ವಲಯ ಮಟ್ಟದಿಂದ ಕ್ರೀಡೆಗಳು ಆಡುತ್ತಾ ತಾಲ್ಲೂಕಾ ಮಟ್ಟ ಜಿಲ್ಲಾ ಮಟ್ಟ ರಾಜ್ಯಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಉತ್ತಮವಾಗಿ ಕ್ರೀಡೆಗಳು ಆಟಗಳು ಗೆಲ್ಲಬೇಕು.

ಪಾಲಕರ,ಶಾಲೆಯ,ಶಿಕ್ಷಕರ,ತಾಲ್ಲೂಕಿನ,ಜಿಲ್ಲೆಯ, ರಾಜ್ಯದ ಹೆಸರು ಅಮರಗೊಳಿಸಲು ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡಿ ಪದಗಳನ್ನು ಗೆಲ್ಲಲೇಬೇಕು ಇದಕ್ಕಾಗಿ ಬಹಳಷ್ಟು ಕಷ್ಟಪಡಬೇಕಾಗುತ್ತದೆ ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದರೆ ಮಾತ್ರ ಕ್ರೀಡಾಕೂಟಗಳಲ್ಲಿ ಗೆಲುವು ಸಾಧಿಸಲು ಸಾಧ್ಯವಾಗುತ್ತದೆ ಎಂದರು. ಪೋಲಕಪಳ್ಳಿ ಗ್ರಾಪಂ.ಅಧ್ಯಕ್ಷೆಸುವರ್ಣ ಜಗನ್ನಾಥ ಅಧ್ಯಕ್ಷತೆ ವಹಿಸಿದ್ದರು.


ಉದಯವಾಹಿನಿ ಚಿತ್ರ

**ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಬೆಳೆಸುವುದು ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. ಸೋಲು ಗೆಲುವು ಸಮಾನವಾಗಿ ಸ್ವೀಕರಿಸಿ ಸೋತೆವೆಂದು ಕುಗ್ಗದೆ ಸೋಲೆ ಗೆಲುವಿನ ಸೋಪಾನವೆಂದು ಭಾವಿಸಿ ಸೋಲೆ ಗೆಲುವಿನ ಮೆಟ್ಟಿಲುವೆಂದು ತಿಳಿದುಕೊಳ್ಳಬೇಕು,ಕ್ರೀಡಾಕೂಟದಲ್ಲಿ ಅಂಪೈರ್ ನಿರ್ಣಯವೇ ಅಂತಿಮವಾಗಿದ್ದು ಯಾವುದೇ ಮನಸ್ತಾಪ ಇಟ್ಟುಕೊಳ್ಳದೆ ಉತ್ತಮ ಕ್ರೀಡಾಪಟ್ಟು ಆಗಿ ಕ್ರೀಡಾಮನೋಭಾವ ಬೆಳೆಸಿಕೊಂಡು ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ.**
**-ದೇವೀಂದ್ರಪ್ಪ ಹೋಳ್ಕರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ**

## ಶಿಕ್ಷಣದಿಂದ ಮಾನವೀಯ ಮೌಲ್ಯಗಳನ್ನು ಬೆಳಿಸಿಕೊಳ್ಳಲು ಕರೆ

• ಉದಯವಾಹಿನಿ ಬಳ್ಳಾರಿ

ಸಮಾಜದಲ್ಲಿ ಮಾನವನು ಶಿಕ್ಷಣದಿಂದ ಮಾತ್ರ ಉತ್ತಮವಾದ ಉದ್ಯೋಗ, ಭವಿಷ್ಯ, ಸಂಸ್ಕಾರ ಮತ್ತು ಮೌಲ್ಯಗಳನ್ನು ಬೆಳಿಸಿಕೊಳ್ಳಲು ಸಾಧ್ಯ ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪೂರೆ ಅವರು ಅಭಿಪ್ರಾಯಪಟ್ಟರು.

ನಗರದ ಕೋಟೆ ಪ್ರದೇಶದ ತಾಲ್ಲೂಕು ಪಂಚಾಯತ್ ಕಾರ್ಯಾಲಯದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ದರ್ಶಿನಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಪಂ ಮೇಲ್ವಿಚಾರಕರು ಹಾಗೂ ತಾಲ್ಲೂಕು ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು ವಿವಿಧ ಪುಸ್ತಕಗಳ ಜ್ಞಾನವನ್ನು ವಿಕಲಚೇತನ ಹಾಗೂ ವಿಶೇಷಚೇತನರಿಗೆ ದರ್ಶಿನಿ ಅರಿವು ಗ್ರಂಥಾಲಯ ಕೇಂದ್ರಗಳ ಮೂಲಕ ವಿಷಯ ಜ್ಞಾನ ನೀಡಿದರೆ ವಿಶೇಷಚೇತನರು ಉತ್ತಮ ಭವಿಷ್ಯ ರೂಪಿಸಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗಲಿದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಅಂಗವಿಕಲತೆಯುಳ್ಳ ಮಕ್ಕಳು ಎದುರಿಸುತ್ತಿರುವ ಅಡೆ-ತಡೆಗಳು, ವಿವಿಧ ಬಗೆಯ ಅಂಗವಿಕಲತೆ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016, ದರ್ಶಿನಿ ಅರಿವು ಗ್ರಂಥಾಲಯ ಕೇಂದ್ರಗಳ ಪರಿಚಯ, ಅರಿವು ಕೇಂದ್ರಗಳಲ್ಲಿ ಸುಗಮ ಹಾಗೂ ಅಡೆ-ತಡೆ ಮತ್ತು ಸಂಪನ್ಮೂಲದ ಮೂಲಗಳು, ಅಂಧತ್ವವುಳ್ಳ ಮಕ್ಕಳಿಗಾಗಿ ಪೂರೈಸಿರುವ ಸಹಾಯಕ ಸಾಧನಗಳ ಪರಿಚಯ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ತರಬೇತಿ ನೀಡಲಾಯಿತು.


ಉದಯವಾಹಿನಿ ಚಿತ್ರ

# ಕಾನೂನು ನೆಪದಲ್ಲಿ ಕಲೆ, ಧಾರ್ಮಿಕ ನಂಬಿಕೆಗಳಿಗೆ ತೊಂದರೆ ಕೊಡಬೇಡಿ

### ಜಿಲ್ಲೆಯಲ್ಲಿ ಎಲ್ಲಾ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಿಂದಿನಂತೆ ನಡೆಯಲು ಅನುಮತಿ ನೀಡಬೇಕು

• ಉದಯವಾಹಿನಿ ಮಂಗಳೂರು

ಕಾನೂನು ಸುವ್ಯವಸ್ಥೆ ನೆಪದಲ್ಲಿ ಕಲೆ ಮತ್ತು ಧಾರ್ಮಿಕ ನಂಬಿಕೆಗಳಿಗೆ ತೊಂದರೆ ಕೊಡಬಾರದು. ದಕ್ಷಿಣ ಕನ್ನಡಜಿಲ್ಲೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಮೆರವಣಿಗೆ ಯಕ್ಷಗಾನ ನಾಟಕ ದೈವಕೋಲ, ಭರತನಾಟ್ಯ, ಇತ್ಯಾದಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುಮತಿ ನೀಡುವಾಗ ಎದುರಾಗಿರುವ ತೊಂದರೆಗಳನ್ನು ನಿವಾರಿಸಿ ಅವುಗಳನ್ನು ಮೊದಲಿನ ಹಾಗೆ ನಡೆಸಲು ಅನುವು ಮಾಡಿ ಕೊಡಬೇಕು ಎಂದು ವಿಶ್ವ ಹಿಂದೂ ಪರಿಷತ್ ಹಾಗೂ ತುಳುನಾಡ ಧಾರ್ಮಿಕ ಸಾಂಸ್ಕೃತಿಕ ವೈಭವ ಸಂರಕ್ಷಣಾ ಸಮಿತಿ ಸರ್ಕಾರವನ್ನು ಆಗ್ರಹಿಸಿದೆ.

ಈ ಸಂಘಟನೆಗಳ ಆಶ್ರಯದಲ್ಲಿ ಇಲ್ಲಿ ಮಂಗಳವಾರ ಏರ್ಪಡಿಸಿದ್ದ ಬೃಹತ್ ಜನಾಗ್ರಹ ಸಭೆಯಲ್ಲಿ ಈ ಕುರಿತ ಮನವಿಯನ್ನು ಶಾಸಕರ ಮೂಲಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆ ಇದೆ ರಾತ್ರಿ-ಹಗಲು ಕಾರ್ಯಕ್ರಮ ನಡೆಯುವುದು ಇಲ್ಲಿಯ ಸಂಪ್ರದಾಯ. ಹಿಂದಿಗಿಂತ ಈಗ ಜನಸಂಖ್ಯೆ ಹೆಚ್ಚಾಗಿದ್ದು ಇತ್ತೀಚೆಗೆ ಇಂತಹ ಕಾರ್ಯಕ್ರಮದಲ್ಲಿ ಜನರು ಉತ್ಸಾಹದಿಂದ ಭಕ್ತಿ ಶ್ರದ್ದೆಯಿಂದ ಬಹಳ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಇಂತಹ ಸಂಧರ್ಭದಲ್ಲಿ ಧ್ವನಿವರ್ಧಕ ಬಳಕೆ ಅನಿವಾರ್ಯ.

ಆದರೆ ಈ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಸಂಧರ್ಭದಲ್ಲಿ, ರಾತ್ರಿ ಧ್ವನಿವರ್ಧಕ ಉಪಯೋಗಿಸದಂತೆ ಹಾಗೂ ರಾತ್ರಿ 10.30ರ ಒಳಗೆ ಕಾರ್ಯಕ್ರಮ ನಿಲ್ಲಿಸುವಂತೆ ಷರತ್ತು ವಿಧಿಸಲಾಗುತ್ತದೆ. ಇದರಿಂದ ಜಿಲ್ಲೆಯಲ್ಲಿ ಧಾರ್ಮಿಕ ಮತ್ತು ಕಲಾಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಲಕ್ಷಾಂತರ ಜನರಿಗೆ ಆಘಾತವಾಗಿದೆ. ಇವುಗಳನ್ನೇ ನೆಚ್ಚಿಕೊಂಡು ಬದುಕುವ ಕಲಾವಿದರು ಮತ್ತು ಧ್ವನಿವರ್ಧಕ, ಶಾಮಿಯನ ಮುಂತಾದ ಕ್ಷೇತ್ರಗಳ ಕಾರ್ಮಿಕರ ಜೀವನ ನಿರ್ವಹಣೆಗೂ ತೊಂದರೆ ಆಗಿದೆ. ಅನೇಕರ ಬದುಕೇ ಸ್ಥಬ್ಧವಾಗಿದೆ' ಎಂದು ಸಂಘಟನೆಗಳು ಆರೋಪಿಸಿವೆ.


ಉದಯವಾಹಿನಿ ಚಿತ್ರ

**ಕ್ರಮೇಣ ನಶಿಸುವ ಸಾಧ್ಯತೆ**

**'ಜಿಲ್ಲೆ ಸೂಕ್ಷ್ಮ ಪ್ರದೇಶ ಶಾಂತಿ ಸುವ್ಯವಸ್ಥೆ ಕಾಪಾಡಲು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಜಿಲ್ಲೆಯಲ್ಲಿ ನಡೆದಿರುವ ಯಾವುದೇ ಅಹಿತಕರ ಘಟನೆಗಳಿಗೂ ಧ್ವನಿವರ್ಧಕ ಬಳಕೆಗೂ ಯಾವುದೇ ಸಭೆ ಮೆರವಣಿಗೆಗಳಿಗೂ ಸಂಬಂಧವೇ ಇಲ್ಲ. ಯಾವುದೇ ಮೆರವಣಿಗೆಗಳನ್ನು ರಾತ್ರಿ ನಡೆಸಬಾರದೆಂದು ನಿಯಮಗಳು ಇಲ್ಲ. ಹಲವಾರು ಶತಮಾನಗಳಿಂದ ಜಿಲ್ಲೆಯಲ್ಲಿ ಯಕ್ಷಗಾನ, ನಾಟಕ ಹಾಗೂ ದೈವ ಕೋಲ, ನೇಮ ಇತ್ಯಾದಿಗಳು ರಾತ್ರಿ 10 ಗಂಟೆಯಿಂದ ಬೆಳಿಗ್ಗೆ ತನಕ ನಡೆಸಯವ ಸಂಪ್ರದಾಯ ಇದೆ. ಸ್ವಾತಂತ್ರ್ಯ ಪೂರ್ವದಲ್ಲೂ ಹಾಗೂ ಅದರ ನಂತರ ಇಂದಿನವರೆಗೂ ಯಾವುದೇ ಅಡಚಣೆ ಇಲ್ಲದೇ ನಡೆದುಕೊಂಡು ಬಂದ ಪರಂಪರೆಯನ್ನು ಈಗ ಮೊಟಕುಗೊಳಿಸುವುದು ಸರಿಯಲ್ಲ. ಕಲೆಗಳನ್ನೂ ಹಾಗೂ ಧಾರ್ಮಿಕ ನಂಬಿಕೆಗಳನ್ನೂ ಅದುಮಿ ಹಿಡಿದರೆ, ಅವು ಕ್ರಮೇಣ ನಶಿಸುವ ಸಾಧ್ಯತೆ ಇದೆ. ಆದ್ದರಿಂದ ಕಲೆಯನ್ನೂ ಜಿಲ್ಲೆಯ ವಿಶೇಷವಾಗಿ ಎಲ್ಲಾ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಕೊಲ ನೇಮಗಳನ್ನು ಯಥಾವತ್ತಾಗಿ ನಡೆಸುವಂತೆ ಸರ್ಕಾರ ವ್ಯವಸ್ಥೆಗೊಳಿಸಬೇಕು ಎಂದು ಆಗ್ರಹಿಸಿವೆ.**

### ನರೇಂದ್ರ ಮೋದಿ ಅವರಿಂದ ಕಲಿಯಿರಿ: ನೆತನ್ಯಾಹುಗೆ ರಾಷ್ಟ್ರೀಯ ಗೌರವದ ಪಾಠ ಮಾಡಲು ಇಸ್ರೇಲ್ ರಕ್ಷಣಾ ತಜ್ಞ ಮನವಿ

# ರಾಷ್ಟ್ರೀಯ ಗೌರವ ಭಾರತದ ಕಾರ್ಯತಂತ್ರದ ಆಸ್ತಿ: ಝುಕಿ ಶಾಲೋಮ್

**ಟೆಲ್ ಅವಿವ್:** ರಾಷ್ಟ್ರೀಯ ಗೌರವವನ್ನು ದೇಶದ ಕಾರ್ಯತಂತ್ರದ ಆಸ್ತಿಯನ್ನಾಗಿ ಮಾಡುವುದು ಹೇಗೆ ಎಂಬುದನ್ನು, ಇಸ್ರೇಲ್ ಪ್ರಧಾನಮಂತ್ರಿ, ಬೆಂಜಮಿನ್ ನೆತನ್ಯಾಹು ಅವರು ಭಾರತದ ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರಿಂದ ಕಲಿಯಬೇಕು ಎಂದು ಇಸ್ರೇಲ್ ಪತ್ರಿಕೆಯೊಂದು ಸಲಹೆ ನೀಡಿದೆ.

ಇಸ್ರೇಲ್ ರಕ್ಷಣಾ ನೀತಿ ತಜ್ಞ ಝುಕಿ ಶಾಲೋಮ್ ಅವರು ದಿ ಜೆರುಸಲೆಮ್ ಪೋಸ್ಟ್‌ನಲ್ಲಿ ಪ್ರಕಟಿಸಿರುವ ಲೇಖನದಲ್ಲಿ, ಪ್ರಧಾನಿ ಮೋದಿ ಅವರು ರಾಷ್ಟ್ರೀಯ ಗೌರವವನ್ನು ತಮ್ಮ ಸರ್ಕಾರದ ಕಾರ್ಯತಂತ್ರದ ಆಸ್ತಿಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದ್ದಾರೆ.

ಭಾರತದ ಈ ಹೊಸ ನೀತಿಯನ್ನು ಇಸ್ರೇಲ್ ಅಳವಡಿಸಿಕೊಳ್ಳಬೇಕು ಎಂದು ಹೇಳಿರುವ ಮಿಸ್ಗಾವ್ ಇನ್‌ಸ್ಟಿಟ್ಯೂಟ್ ಫಾರ್ ನ್ಯಾಷನಲ್ ಸೆಕ್ಯುರಿಟಿ ಅಂಡ್ ಝಿಯೋನಿಸ್ಟ್ ಸ್ಟ್ರಾಟಜಿಯ ಹಿರಿಯ ಸಹೋದ್ಯೋಗಿ ಝುಕಿ ಶಾಲೋಮ್, ಭಾರತದ ವಿರುದ್ಧದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರದ ವಿರುದ್ಧ ಪ್ರಧಾನಿ ನರೇಂದ್ರ ಮೋದಿಯವರ ಕಠಿಣ ನಿಲುವು ಮತ್ತು ಪಾಕಿಸ್ತಾನದೊಂದಿಗಿನ ಗಡಿ ಘರ್ಷಣೆಗಳಿಗೆ ಸಂಬಂಧಿಸಿದಂತೆ ಭಾರತದ ಆಕ್ರಮಣಕಾರಿ ವಿಧಾನವು, ರಾಷ್ಟ್ರೀಯ ಗೌರವವು ಐಷಾರಾಮಿ ಅಲ್ಲ ಆದರೆ ದೂರಗಾಮಿ ಕಾರ್ಯತಂತ್ರದ ಆಸ್ತಿ ಎಂದು ತೋರಿಸುತ್ತದೆ ಎಂದು ಹೇಳಿದ್ದಾರೆ. ಅದೇ ರೀತಿ, ಪಾಕಿಸ್ತಾನದೊಂದಿಗಿನ ಭಾರತದ ಗಡಿ ಘರ್ಷಣೆ ನಂತರ, ಕದನ ವಿರಾಮ ಒಪ್ಪಂದ ಮಾತುಕತೆಯಲ್ಲಿ ಮಧ್ಯಸ್ಥಿಕೆವಹಿಸಲು ಬಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭಾರತ



- ಪ್ರಧಾನಿ ಮೋದಿ ಕಾರ್ಯವೈಖರಿ ಹಾಡಿ ಹೊಗಳಿದ ಇಸ್ರೇಲ್ ರಕ್ಷಣಾ ತಜ್ಞ.
- ರಾಷ್ಟ್ರೀಯ ಗೌರವ ಭಾರತದ ಕಾರ್ಯತಂತ್ರದ ಆಸ್ತಿ ಎಂದ ಝುಕಿ ಶಾಲೋಮ್.
- ಬೆಂಜಮಿನ್ ನೆತನ್ಯಾಹು ಪ್ರಧಾನಿ ಮೋದಿ ಅವರಿಂದ ಪ್ರೇರಣೆ ಪಡೆಯುವಂತೆ ಶಾಲೋಮ್ ಸಲಹೆ.

ದೂರ ತಳ್ಳಿತು. ಅಲ್ಲದೇ ಕದನ ವಿರಾಮ ಒಪ್ಪಂದದಲ್ಲಿ ತಮ್ಮ ಪಾತ್ರವಿದೆ ಎಂಬ ಟ್ರಂಪ್ ಅವರ ವಾದವನ್ನು ಅತ್ಯಂತ ಗಟ್ಟಿಯಾಗಿ ತಿರಸ್ಕರಿಸಿತು. ಇದು ಭಾರತ ತನ್ನ ರಾಷ್ಟ್ರೀಯತೆಗೆ ನೀಡುವ ಮನ್ನಣೆ ಎಂದು ಶಾಲೋಮ್ ಪ್ರತಿಪಾದಿಸಿದ್ದಾರೆ.

ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಕಠಿಣ ಪ್ರತಿಕ್ರಿಯೆಯು, ಆರ್ಥಿಕ ಮತ್ತು ಮಿಲಿಟರಿ ಉದ್ವಿಗ್ನತೆಯಲ್ಲಿ ಬೇರೂರಿದೆ. ಆದರೆ ಪ್ರಾಥಮಿಕವಾಗಿ ವೈಯಕ್ತಿಕ ಮತ್ತು ರಾಷ್ಟ್ರೀಯ ಗೌರವಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವ ಎಂಬ ಭಾವನೆಯಿಂದ ಹುಟ್ಟಿಕೊಂಡಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಾಲ್ಕು ಫೋನ್ ಕರೆಗಳನ್ನು ಸ್ವೀಕರಿಸಲು ಪ್ರಧಾನಿ ಮೋದಿ ನಿರಾಕರಣೆ ಮಾಡಿರುವುದು ಸಣ್ಣ ವಿಷಯವಲ್ಲ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಪ್ರಧಾನಿ ಮೋದಿ ಅವರಿಂದ ಬಹಳಷ್ಟು ಸಂಗತಿಗಳನ್ನು ಕಲಿಯಬೇಕಿದೆ ಎಂದು ಝುಕಿ ಶಾಲೋಮ್ ಸಲಹೆ ನೀಡಿದ್ದಾರೆ.

ಕಠಿಣ ಮತ್ತು ಸಂಕೀರ್ಣ ಸಂದರ್ಭಗಳನ್ನು ಎದುರಿಸುವಾಗಲೂ ಒಂದು ದೇಶವು ತನ್ನ ರಾಷ್ಟ್ರೀಯ ಗೌರವವನ್ನು ರಕ್ಷಿಸಿಕೊಳ್ಳಬೇಕು. ಈ ಕುರಿತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಂದ ಪಾಠ ಕಲಿಯಬೇಕು.

ಸಂಕಷ್ಟದ ಸಮಯದಲ್ಲಿ ಇಡೀ ದೇಶವನ್ನು ಒಗ್ಗೂಡಿಸಿ ಮುನ್ನಡೆಯುವುದು ಸುಲಭವಲ್ಲ ಝುಕಿ ಶಲೋಮ್ ಅಭಿಪ್ರಾಯಪಟ್ಟಿದ್ದಾರೆ. ಭಾರತದಿಂದ ನಾವು ರಾಷ್ಟ್ರೀಯ ಗೌರವವು ಐಷಾರಾಮಿಯಲ್ಲ, ಬದಲಾಗಿ ಅದು ದೂರಗಾಮಿ ಕಾರ್ಯತಂತ್ರದ ಆಸ್ತಿ ಎಂದು ಕಲಿತಿದ್ದೇವೆ. ಇಸ್ರೇಲ್ ತನ್ನ ನಿಲುವು , ಭದ್ರತೆಯನ್ನು ಭದ್ರಪಡಿಸಿಕೊಳ್ಳಲು ಬಯಸಿದರೆ, ಅದು ಜಗತ್ತಿಗೆ ದೃಢವಾದ ಸ್ಥಿತಿಸ್ಥಾಪಕತ್ವವನ್ನು ಪ್ರದರ್ಶಿಸಬೇಕು. ಇದಕ್ಕಾಗಿ ನಾವು ಭಾರತದತ್ತ ನೋಡಬೇಕು ಎಂದು ಶಾಲೋಮ್ ಹೇಳಿದ್ದಾರೆ.

#### ನೆತನ್ಯಾಹುಗೆ ಕಿವಿಮಾತು

**ರಕ್ಷಣಾ ತಜ್ಞ ಝುಕಿ ಶಾಲೋಮ್ ಅವರು ಇಸ್ರೇಲ್‌ನ ಪರಿಸ್ಥಿತಿಯನ್ನು ಭಾರತದೊಂದಿಗೆ ಹೋಲಿಕೆ ಮಾಡಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಅಭೂತಪೂರ್ವ ಮೌಖಿಕ ದಾಳಿಗಳನ್ನು ಎದುರಿಸಿದಾಗಲೂ, ಭಾರತ ಮತ್ತು ಪ್ರಧಾನಿ ಮೋದಿ ತಲೆಬಾಗಲಿಲ್ಲ. ರಾಷ್ಟ್ರೀಯ ಗೌರವವನ್ನು ಎತ್ತಿ ಹಿಡಿಯುವ ಮೂಲಕ, ಟ್ರಂಪ್ ದಾಳಿಗಳನ್ನು ಭಾರತ ಯಶಸ್ವಿಯಾಗಿ ಎದುರಿಸಿತು. ಆದರೆ ಗಾಜಾದ ನಾಸರ್ ಆಸ್ಪತ್ರೆ ಮೇಲೆ ದಾಳಿ ಆಮೇಲೆ ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿದು, ಇಸ್ರೇಲ್ ಬೆಂಜಮಿನ್ ನೆತನ್ಯಾಹು ಕ್ಷಮೆ ಕೇಳುವ ರೀತಿ ಮಾತನಾಡಿರುವುದು ಸರಿಯಲ್ಲ ಎಂದು ಶಾಲೋಮ್ ತರಾಟೆಗೆ ತೆಗೆದುಕೊಂಡಿದ್ದಾರೆ.**

#### ಶಾಲೋಮ್ ಏನು ಹೇಳುತ್ತಾರೆ?

**ರಷ್ಯಾದೊಂದಿಗೆ ತೈಲ ಸಂಬಂಧ ಹೊಂದಿರುವ ಕಾರಣಕ್ಕೆ, ಅಮೆರಿಕವು ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ಹೇರಿದೆ. ಇದರಿಂದ ಅಮೆರಿಕ-ಭಾರತ ಸಂಬಂಧಗಳು ಹದಗೆಟ್ಟಿದೆಯಾದರೂ, ಪ್ರಧಾನಿ ಮೋದಿ ಅವರು ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ.**

## ಹಿಮಾಚಲ ಪ್ರದೇಶದಲ್ಲಿ ಭೂಕುಸಿತ: ನಾಲ್ವರು ಸಮಾಧಿ

ಶಿಮ್ಲಾ: ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯಲ್ಲಿ ಮುಂಜಾನೆ ಸಮಭವಿಸಿದ ಭೂಕುಸಿತದಲ್ಲಿ ಮಹಿಳೆ ಸಾವನ್ನಪ್ಪಿದ್ದು, ಅವರ ಕುಟುಂಬದ ನಾಲ್ವರು ಸದಸ್ಯರು ಅವಶೇಷಗಳ ಅಡಿಯಲ್ಲಿ ಸಮಾಧಿಯಾಗಿರುವ ಶಂಕೆ ವ್ಯಕ್ತವಾಗಿದೆ.

ಜಿಲ್ಲೆಯ ಘಾಟು ಪಂಚಾಯತ್‌ನ ಶರ್ಮಾನಿ ಗ್ರಾಮದಲ್ಲಿ ಮುಂಜಾನೆ 1:30 ರ ಸುಮಾರಿಗೆ ಭಾರಿ ಮಳೆಯಿಂದ ಉಂಟಾದ ಭೂಕುಸಿತದ ಪರಿಣಾಮವಾಗಿ ಎರಡು ಮನೆಗಳು ಸಂಪೂರ್ಣವಾಗಿ ಹಾನಿಗೊಳಗಾಗಿವೆ. ಒಬ್ಬರ ಶವ ಪತ್ತೆಯಾಗಿದ್ದು, ಕುಟುಂಬದ ಇತರ ನಾಲ್ವರು ಸದಸ್ಯರು ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಶಂಕೆ ಇದೆ ಎಂದು ಗ್ರಾಮ ಪಂಚಾಯತ್ ಪ್ರಧಾನ್ ಭೋಗ ರಾಮ್ ತಿಳಿಸಿದ್ದಾರೆ.

ಮೃತ ಮಹಿಳೆಯನ್ನು ಶಿವ ರಾಮ್ ಅವರ ಪತ್ನಿ ಬ್ರಸಿತಿ ದೇವಿ ಎಂದು ಗುರುತಿಸಲಾಗಿದೆ, ಚುನ್ನಿ ಲಾಲ್, ಅಂಜು, ಜಾಗೃತಿ ಮತ್ತು ಪುಪೇಶ್ ಇನ್ನೂ ಮಣ್ಣಿನಡೆ ಸಿಕ್ಕಿದ್ದು ಶೋಧ ಕಾರ್ಯಾಚರಣೆ



ನಡೆಯುತ್ತಿದೆ ಎಂದು ಅವರು ಹೇಳಿದರು.

ಧರಮ್ ದಾಸ್, ಅವರ ಪತ್ನಿ ಕಲಾ ದೇವಿ ಮತ್ತು ಶಿವ ರಾಮ್ ಎಂಬ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಗ್ರಾಮಸ್ಥರು ಅವರನ್ನು ನಿರ್ಮಂದಿಸಿದ್ದಾರೆ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ.

ದುರಂತದ ಬಗ್ಗೆ ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಕಚೇರಿಗೆ ಮಾಹಿತಿ ನೀಡಿ ಗ್ರಾಮಸ್ಥರು ರಾತ್ರಿಯಿಂದಲೇ ಶೋಧ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಅವರು ಹೇಳಿದರು. ಕಳೆದ ಜೂನ್ 20 ರಂದು ಆರಂಭವಾದ ಮುಂಗಾರು ಸೆಪ್ಟೆಂಬರ್ 8 ರವರೆಗೆ ರಾಜ್ಯದಲ್ಲಿ ಮಳೆ ಸಂಬಂಧಿತ ಘಟನೆಗಳು ಮತ್ತು ರಸ್ತೆ ಅಪಘಾತಗಳಲ್ಲಿ ಒಟ್ಟು 370 ಜನರು ಸಾವನ್ನಪ್ಪಿದ್ದಾರೆ.

370 ಸಾವುಗಳಲ್ಲಿ 205 ಜನರು ಮಳೆ ಸಂಬಂಧಿತ ಘಟನೆಗಳಿಂದ ಸಾವನ್ನಪ್ಪಿದ್ದಾರೆ, ಇದರಲ್ಲಿ 43 ಸಾವುಗಳು ಭೂಕುಸಿತದಿಂದ, 17 ಸಾವುಗಳು ಮೇಘ ಸ್ಫೋಟದಿಂದ ಮತ್ತು ಒಂಬತ್ತು ಸಾವುಗಳು ದಿಢೀರ್ ಪ್ರವಾಹದಿಂದ ಇವೆ.

#### ಕುಲ್ಲುವಿನಲ್ಲಿ 22 ಭೂಕುಸಿತ

**ಹೆಚ್ಚುವರಿಯಾಗಿ, 41 ಜನರು ಇನ್ನೂ ಕಾಣೆಸಿಕೊಂಡಿದ್ದಾರೆ ಎಂದು ವರದಿಯಾಗಿದೆ, ಆದರೆ ರಸ್ತೆ ಅಪಘಾತಗಳಲ್ಲಿ 165 ಸಾವುಗಳು ಸಂಭವಿಸಿವೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ ತಿಳಿಸಿದೆ ನಂತರ. ಕುಲ್ಲುವಿನಲ್ಲಿ 22 ಭೂಕುಸಿತ ಘಟನೆಗಳಲ್ಲಿ ಗರಿಷ್ಠ 15 ಜನರು ಸಾವನ್ನಪ್ಪಿದ್ದಾರೆ.**

### ಪ್ರವಾಹ ಪೀಡಿತ ಪ್ರದೇಶಕ್ಕೆ ಪ್ರಧಾನಿ ಮೋದಿ ಭೇಟಿ

## 1,500 ಕೋಟಿ ರೂ. ನೆರವು ಘೋಷಣೆ

**ನವದೆಹಲಿ :** ಮಂಗಳವಾರ ಪ್ರವಾಹದಿಂದ ತತ್ತರಿಸಿರುವ ಹಿಮಾಚಲ ಪ್ರದೇಶಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ, ರಾಜ್ಯಕ್ಕೆ 1,500 ಕೋಟಿ ಆರ್ಥಿಕ ನೆರವು ಘೋಷಿಸಿದರು. ಕಾಂಗ್ರಾದಲ್ಲಿ ಪ್ರವಾಹ ಮತ್ತು ಭೂಕುಸಿತ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆಯನ್ನು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ನಡೆಸಿದರು. ಕಾಂಗ್ರಾದಲ್ಲಿ ಪ್ರವಾಹ ಮತ್ತು ಭೂಕುಸಿತ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆಯನ್ನು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ನಡೆಸಿದರು. ಇಡೀ ಪ್ರದೇಶ ಮತ್ತು ಜನರನ್ನು ಮತ್ತೆ ಸ್ಥಿತಿಗೆ ತರಲು ಬಹು ಆಯಾಮದ ದೃಷ್ಟಿಕೋನವನ್ನು ತೆಗೆದುಕೊಳ್ಳಬೇಕೆಂದು ಪ್ರಧಾನಿ ಕೇಳಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ಹಂತಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮೂಲಕ ಮನೆಗಳ ಪುನರ್ನಿರ್ಮಾಣ, ರಾ. ಹೆದ್ದಾರಿಗಳ ಪುನಃಸ್ಥಾಪನೆ, ಶಾಲೆಗಳ ಪುನರ್ನಿರ್ಮಾಣ, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಪಿಎಂಎನ್‌ಆರ್‌ಎಫ್ ಅಡಿಯಲ್ಲಿ ನಿಬಂಧನೆಗಳು ಮತ್ತು



ಜಾನುವಾರುಗಳಿಗೆ ಕಿಟ್‌ಗಳನ್ನು ಬಿಡುಗಡೆ ಮಾಡುವುದು ಸೇರಿವೆ. ಕೃಷಿ ಸಮುದಾಯವನ್ನು ಬೆಂಬಲಿಸುವ ನಿರ್ಣಾಯಕ ಅಗತ್ಯವನ್ನು ಗುರುತಿಸಿ, ಪ್ರಸ್ತುತ ವಿದ್ಯುತ್ ಸಂಪರ್ಕವಿಲ್ಲದ ರೈತರನ್ನು ಗುರಿಯಾಗಿಟ್ಟುಕೊಂಡು ಹೆಚ್ಚುವರಿ ಸಹಾಯವನ್ನು ಒದಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆವಾಸ್ ಯೋಜನೆಯಡಿಯಲ್ಲಿ, ಹಾನಿಗೊಳಗಾದ ಮನೆಗಳ ಜಿಯೋಟ್ಯಾಗಿಂಗ್ ಮಾಡಲಾಗುವುದು. ಸಇದು ನಿಖರವಾದ ಹಾನಿಯ ಮೌಲ್ಯಮಾಪನ ಮತ್ತು ಸಹಾಯವನ್ನು ವೇಗವಾಗಿ ತಲುಪಿಸಲು ಸಹಾಯ ಮಾಡುತ್ತದೆ. ಪ್ರಧಾನಿ ಮೋದಿ ಪಂಜಾಬ್‌ಗೆ ಕೂಡ ಭೇಟಿ ನೀಡಲಿದ್ದಾರೆ.

## 40 ಕೆಜಿ ಪ್ಲಾಸ್ಟಿಕ್ ವಸ್ತು ತೆಗೆದ ವೈದ್ಯರು

**ಬೆರ್ಹಾಂಪುರ:** ಒಡಿಶಾದ ಗಂಜಾಂ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪಶು ವೈದ್ಯರು ಬೀದಿ ಹಸುವಿನ ಹೊಟ್ಟೆಯಿಂದ ಸುಮಾರು 40 ಕೆಜಿ ತೂಕದ ಪಾಲಿಥಿನ್ ಚೀಲಗಳಂತಹ ಪ್ಲಾಸ್ಟಿಕ್ ವಸ್ತುಗಳನ್ನು ಹೊರತೆಗೆದಿದ್ದಾರೆ. ಐದು ವರ್ಷದ ಹಸುವಿನ ಹೊಟ್ಟೆಯಿಂದ ಪಾಲಿಥಿನ್ ಚೀಲಗಳು ಮತ್ತು ಇತರ ಜೀರ್ಣವಾಗದ ವಸ್ತುಗಳನ್ನು ಹೊರತೆಗೆಯಲು ಶಸ್ತ್ರಚಿಕಿತ್ಸೆನಡೆಸಲು ಸುಮಾರು ಮೂರು ಗಂಟೆಗಳು ಬೇಕಾಯಿತು ಎಂದು ಗಂಜಾಂನ ಮುಖ್ಯ ಜಿಲ್ಲಾ ಪಶುವೈದ್ಯ ಅಧಿಕಾರಿ (ಸಿಡಿವಿಒ) ಅಂಜನ್ ಕುಮಾರ್ ದಾಸ್ ಹೇಳಿದ್ದಾರೆ.

ಶಸ್ತ್ರಚಿಕಿತ್ಸೆಯ ನಂತರ ಸಸ್ಯಾಹಾರಿಯ ಸ್ಥಿತಿ ಸ್ಥಿರವಾಗಿದೆ ಮತ್ತು ಅದು ಸುಮಾರು ಒಂದು ವಾರ ಆಸ್ಪತ್ರೆಯಲ್ಲಿಯೇ ಇರುತ್ತದೆ ಎಂದು ಅವರು ಹೇಳಿದರು.ಪ್ಲಾಸ್ಟಿಕ್ ಚೀಲಗಳಲ್ಲಿ ಬಿಸಾಡಲಾದ ಉಳಿದ ಆಹಾರವನ್ನು ತಿನ್ನುವ ಬೀದಿ ಹಸುಗಳು ಪ್ಲಾಸ್ಟಿಕ್ ವಸ್ತುಗಳನ್ನು ಸೇವಿಸುತ್ತವೆ. ಇದು ಪ್ರಾಣಿಗಳ ಕರುಳುಗಳನ್ನು ನಿರ್ಬಂಧಿಸಲು




ಕಾರಣವಾಯಿತು. ಹೆಚ್ಚು ಸಮಯ ಗಮನಿಸದೆ ಬಿಟ್ಟರೆ ಅವು ಸಾಯುತ್ತವೆ ಎಂದು ಶಸ್ತ್ರಚಿಕಿತ್ಸೆನಡೆಸಿದ ತಂಡದ ನೇತೃತ್ವ ವಹಿಸಿದ್ದ ಸತ್ಯ ನಾರಾಯಣ್ ಕರ್ ಹೇಳಿದರು. ಎರಡು ದಿನಗಳಿಂದ ಸ್ಥಳದಲ್ಲೇ ಚಿಕಿತ್ಸೆ ನೀಡಿದರೂ ಹಸುವಿನ ಸ್ಥಿತಿ ಸುಧಾರಿಸದ ಕಾರಣ, ಹಿಲ್ಪಟ್ನಾ ಪ್ರದೇಶದಿಂದ ಪ್ರಾಣಿಗಳ ಆಂಬ್ಯುಲೆನ್ಸ್‌ನಲ್ಲಿ ಪಶುವೈದ್ಯಕೀಯ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಹೇಳಿದರು. ಮಲ ಮತ್ತು ಮೂತ್ರ ವಿಸರ್ಜನೆಯಲ್ಲಿ ತೊಂದರೆ ಅನುಭವಿಸುತ್ತಿದ್ದ ಪ್ರಾಣಿ, ಸ್ವಲ್ಪ ಸಮಯದಿಂದ ನೋವಿನಿಂದ ಹೊಟ್ಟೆಯನ್ನು ಒದೆಯುತ್ತಿತ್ತು ಎಂದು ಕರ್ ಹೇಳಿದರು.

## ಕತಾರ್ ರಾಜಧಾನಿ ದೋಹಾದಲ್ಲಿ ಭಾರೀ ಸ್ಫೋಟ

**ದೋಹಾ:** ಮಂಗಳವಾರ ಸಂಜೆ ಕತಾರ್ ರಾಜಧಾನಿ ದೋಹಾದಲ್ಲಿ ಸತತ ಹಲವಾರು ಸ್ಫೋಟಗಳು ಕೇಳಿಬಂದವು. ಪ್ರತ್ಯಕ್ಷದರ್ಶಿಗಳ ಪ್ರಕಾರ, ರಾಜಧಾನಿಯ ಕತಾರ್ ಜಿಲ್ಲೆಯ ಮೇಲೆ ಹೊಗೆಯ ಮೋಡವು ಸುತ್ತುವರೆದ ದೃಶ್ಯಗಳು ಕಂಡುಬಂದಿದೆ. ಏತನ್ಮಧ್ಯೆ, ಇಸ್ರೇಲ್ ರಕ್ಷಣಾ ಪಡೆ ಹಮಾಸ್‌ನ ಹಿರಿಯ ನಾಯಕತ್ವವನ್ನು ಗುರಿಯಾಗಿಸಿಕೊಂಡು ನಿಖರವಾದ ದಾಳಿ ನಡೆಸಿದೆ ಎಂದು ಹೇಳಿಕೊಂಡಿದೆ. ಆದಾಗ್ಯೂ, ದಾಳಿ ದೋಹಾದಲ್ಲಿ ನಡೆದಿದೆಯೇ ಅಥವಾ ಬೇರೆಲ್ಲಿಯಾದರೂ ನಡೆದಿದೆಯೇ ಎಂಬುದನ್ನು ಐಡಿಎಫ್ ಸ್ಪಷ್ಟಪಡಿಸಿಲ್ಲ.

ಹಮಾಸ್‌ನ ಈ ನಾಯಕತ್ವವು ಹಲವು ವರ್ಷಗಳಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುತ್ತಿದೆ ಮತ್ತು ಅಕ್ಟೋಬರ್ 7 ರ ಹತ್ಯಾಕಾಂಡಕ್ಕೆ ನೇರ ಕಾರಣವಾಗಿದೆ. ದಾಳಿಯ ಮೊದಲು, ನಾಗರಿಕರನ್ನು ಹಾನಿಯಿಂದ ರಕ್ಷಿಸಲು ಹೆಚ್ಚು ನಿಖರವಾದ ಶಸ್ತ್ರಾಸ್ತ್ರಗಳು ಮತ್ತು ಗುಪ್ತಚರ ಮಾಹಿತಿಗಳನ್ನು ಬಳಸಲಾಗಿತ್ತು. ಸಂಪೂರ್ಣ ದೃಢನಿಶ್ಚಯದಿಂದ ಹಮಾಸ್ ಅನ್ನು ನಿರ್ಮೂಲನೆ ಮಾಡಲು ಕ್ರಮಕೈಗೊಳ್ಳುವುದನ್ನು ಮುಂದುವರಿಸುತ್ತದೆ.

**ಮುಖ್ಯ ಸಮಾಲೋಚಕ ಬಲಿ:** ಆರಂಭಿಕ ಮಾಹಿತಿಯ ಪ್ರಕಾರ, ಕತಾರ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ



ಹಮಾಸ್‌ನ ಮುಖ್ಯ ಸಮಾಲೋಚಕ ಖಲೀಲ್ ಅಲ್-ಹಯ್ಯ ಸಾವನ್ನಪ್ಪಿದ್ದಾರೆ ಎಂದು ಅಲ್ ಅರೇಬಿಯಾ ಹೇಳಿಕೊಂಡಿದೆ. ಈ ವ್ಯಕ್ತಿ ಇಸ್ರೇಲ್‌ನೊಂದಿಗೆ ಮಾತುಕತೆ ನಡೆಸುತ್ತಿದ್ದರು. ಆದಾಗ್ಯೂ, ಈ ಸುದ್ದಿಯನ್ನು ಇನ್ನೂ ಅಧಿಕೃತವಾಗಿ ದೃಢಪಡಿಸಲಾಗಿಲ್ಲ. ಹಮಾಸ್‌ನ ಹಿರಿಯ ನಾಯಕತ್ವದ ತಂಡವನ್ನು ಗುರಿಯಾಗಿಸಿಕೊಂಡು ತನ್ನ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಕತಾರ್‌ನಲ್ಲಿ ಹಮಾಸ್ ಮೇಲಿನ ದಾಳಿಯ ಬಗ್ಗೆ ಅಮೆರಿಕಕ್ಕೆ ಮುಂಚಿತವಾಗಿ ತಿಳಿಸಲಾಗಿತ್ತು ಮತ್ತು ಈ ಕ್ರಮಕ್ಕೆ ವಾಷಿಂಗ್ಟನ್‌ನಿಂದ ಸಂಪೂರ್ಣ ಬೆಂಬಲ ದೊರೆತಿದೆ ಎಂದು ಇಸ್ರೇಲಿ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಮತ್ತೊಂದೆಡೆ, ಕತಾರ್ ಈ ದಾಳಿಯನ್ನು ಎಲ್ಲಾ ಅಂತರರಾಷ್ಟ್ರೀಯ ಕಾನೂನುಗಳ ಸಂಪೂರ್ಣ ಉಲ್ಲಂಘನೆ ಎಂದು ಬಣ್ಣಿಸಿದೆ. ಈ ದಾಳಿಯು ತನ್ನ ಸಾರ್ವಭೌಮತ್ವ ಮತ್ತು ಭದ್ರತೆಗೆ ನೇರ ಬೆದರಿಕೆ ಮಾತ್ರವಲ್ಲದೆ, ದೋಹಾದಲ್ಲಿ ವಾಸಿಸುವ ಕತಾರಿಗಳು ಮತ್ತು ವಿದೇಶಿ ನಾಗರಿಕರ ಜೀವಗಳಿಗೆ ಗಂಭೀರ ಅಪಾಯವಾಗಿದೆ ಎಂದು ಕತಾರ್‌ನ ವಿದೇಶಾಂಗ ಸಚಿವಾಲಯ ಹೇಳಿದೆ.

#### ಇಸ್ರೇಲ್ ದಾಳಿ ನಡೆಸಿದೆ: ಕತಾರ್

**ದೋಹಾ ಮೇಲೆ ಇಸ್ರೇಲ್ ದಾಳಿ ಮಾಡಿದೆ ಎಂದು ಕತಾರ್ ಒಪ್ಪಿಕೊಂಡಿದೆ. ಹಮಾಸ್‌ನ ರಾಜಕೀಯ ಬ್ಯೂರೋದ ಅನೇಕ ಸದಸ್ಯರು ವಾಸಿಸುವ ವಸತಿ ಸಂಕೀರ್ಣದ ಮೇಲೆ ಈ ದಾಳಿ ನಡೆದಿದೆ ಎಂದು ಕತಾರ್ ವಿದೇಶಾಂಗ ಸಚಿವಾಲಯದ ವಕ್ತಾರ ಡಾ. ಮಜೀದ್ ಅಲ್ ಅನ್ಸಾರಿ ಹೇಳಿದ್ದಾರೆ. ಈ ದಾಳಿ ಅಂತರರಾಷ್ಟ್ರೀಯ ಕಾನೂನುಗಳ ಸ್ಪಷ್ಟ ಉಲ್ಲಂಘನೆ ಮಾತ್ರವಲ್ಲದೆ, ಕತಾರ್‌ನ ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ನೇರ ಬೆದರಿಕೆಯಾಗಿದೆ ಎಂದು ಅವರು ಹೇಳಿದರು.**

## ಭಾರತಕ್ಕೆ ಶೇ. 50 ಸುಂಕ: ಝೆಲೆನ್ಸ್ಕಿ ಬೆಂಬಲ

**ಕೈವ್:** ಭಾರತದ ಮೇಲೆ ಅಮೆರಿಕಾ ವಿಧಿಸಿರುವ ಶೇಕಡಾ 50ರಷ್ಟು ಹೆಚ್ಚುವರಿ ಸುಂಕದ ಕ್ರಮ ಸರಿಯಾಗಿಯೇ ಇದೆ ಎಂದು ಉಕ್ರೇನ್ ಅಧ್ಯಕ್ಷ ವೊಲೋಡಿಮಿರ್ ಝೆಲೆನ್ಸ್ಕಿ ಬೆಂಬಲಿಸಿದ್ದಾರೆ.

ರಷ್ಯಾದಿಂದ ತೈಲ ಖರೀದಿಸುವುದಕ್ಕಾಗಿ ಭಾರತದ ಮೇಲೆ ಶೇಕಡಾ 50 ರಷ್ಟು ಸುಂಕ ವಿಧಿಸುವ ಅಮೇರಿಕಾ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರವನ್ನು ಬೆಂಬಲಿಸಿದ್ದು ಅಮೇರಿಕಾದ ಕ್ರಮ ಸರಿಯಾಗಿಯೇ ಎಂದು ಹೇಳಿದ್ದಾರೆ. ವೊಲೋಡಿಮಿರ್ ಝೆಲೆನ್ಸ್ಕಿಪ್ರತಿಕ್ರಿಸಿ ರಷ್ಯಾಗೆ ಸಹಾಯ ಮಾಡುವ ದೇಶಗಳ ಮೇಲೆ ಅಮೇರಿಕಾ ಹೆಚ್ಚುವರಿ ಸುಂಕ ವಿಧಿಸುವುದು ಒಳ್ಳೆಯ ಬೆಳವಣಿಗೆ ಎಂದಿದ್ದಾರೆ.

ರಷ್ಯಾದ ತೈಲ ಅಥವಾ ಅನಿಲವನ್ನು ಖರೀದಿಸುವುದು ಅಥವಾ ವ್ಯಾಪಾರ ಒಪ್ಪಂದಗಳಿಗೆ ಪ್ರವೇಶಿಸುವುದು ಯುದ್ಧವನ್ನು ಮಾತ್ರ ದೀರ್ಘಗೊಳಿಸುತ್ತದೆ ಅಂತಹ ದೇಶಗಳ ಮೇಲೆ ದಂಡ ಧಿಸುವುದು ಸೂಕ್ತ ಎಂದು ತಿಳಿಸಿದ್ದಾರೆ.

**ಟ್ರಂಪ್ ನಿರ್ಧಾರಕ್ಕೆ ಬೆಂಬಲ**

ಪ್ರಧಾನಿ ನರೇಂದ್ರ ಮೋದಿ ಶಾಂಘೈ ಸಹಕಾರ ಸಂಸ್ಥೆ ಶೃಂಗಸಭೆಗಾಗಿ ಚೀನಾಕ್ಕೆ ಭೇಟಿ ನೀಡಿದ ಕೆಲವೇ ದಿನಗಳಲ್ಲಿ ಉಕ್ರೇನ್ ಅಧ್ಯಕ್ಷ ವಲೋಡಿಮಿರ್ ಝೆಲೆನ್ಸ್ಕಿಯ ಈ ಹೇಳಿಕೆ ಬಂದಿದೆ.ಶೃಂಗಸಭೆಯ ಸಮಯದಲ್ಲಿ ಪ್ರಧಾನಿ ಮೋದಿ ರಷ್ಯಾದ ಅಧ್ಯಕ್ಷ



ವ್ಲಾಡಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಲಘು ಕ್ಷಣಗಳನ್ನು ಹಂಚಿಕೊಂಡಿರುವುದು ಕಂಡುಬಂದಿದೆ.

ದ್ವಿಪಕ್ಷೀಯ ಮಾತುಕತೆಗಾಗಿ ಸ್ಥಳಕ್ಕೆ ಒಟ್ಟಿಗೆ ಪ್ರಯಾಣಿಸುವಾಗ ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ 45 ನಿಮಿಷಗಳ ಚರ್ಚೆ ನಡೆಸಿದರು. ಇಂಧನ ಮತ್ತು ಶುದ್ಧ ಗಾಳಿಯ ಸಂಶೋಧನಾ ಕೇಂದ್ರದ ಪ್ರಕಾರ, ಭಾರತ ಮತ್ತು ಚೀನಾ ರಷ್ಯಾದ ತೈಲ ಮತ್ತು ಅನಿಲದ ಅತಿದೊಡ್ಡ ಖರೀದಿದಾರರಲ್ಲಿ ಸೇರಿವೆ, ಇದು ಯುದ್ಧ ಪ್ರಾರಂಭವಾದಾಗಿನಿಂದ ಮಾಸ್ಕೋಗೆ ಅಂದಾಜು 985 ಬಿಲಿಯನ್ ಡಾಲರ್ ಆದಾಯ ನಿರೀಕ್ಷೆ ಇದೆ.

## ಖಾತೆ ಬಾಡಿಗೆಗೆ ಪಡೆದು ಅಕ್ರಮ ವಹಿವಾಟು

**ವಯನಾಡ್:** ಕೇರಳದ ವಯನಾಡ್ ಜಿಲ್ಲೆಯಲ್ಲಿ 500ಕ್ಕೂ ಹೆಚ್ಚು ಜನರು, ಹೆಚ್ಚಾಗಿ ಯುವಕರು ಮತ್ತು ಮಹಿಳೆಯರು 'ಮ್ಯೂಲ್ ಅಕೌಂಟ್' ವಂಚನೆಗೆ ಬಲಿಯಾಗಿದ್ದಾರೆ ಎಂದು ಸೈಬರ್ ಪೊಲೀಸ್ ಮೂಲಗಳು ಇಲ್ಲಿ ತಿಳಿಸಿವೆ. ತನಿಖಾಧಿಕಾರಿಗಳ ಪ್ರಕಾರ, ವಂಚಕರು ಹಣ ನೀಡಿ ಸ್ಥಳೀಯ ನಿವಾಸಿಗಳ ಬ್ಯಾಂಕ್ ಖಾತೆಗಳನ್ನು ಬಾಡಿಗೆಗೆ ಪಡೆದು ನಂತರ ಅಕ್ರಮ ವಹಿವಾಟು ಮತ್ತು ಇತರ ಕಾನೂನುಬಾಹಿರ ಚಟುವಟಿಕೆಗಳಿಗೆ ದುರುಪಯೋಗಪಡಿಸಿಕೊಂಡಿದ್ದಾರೆ.



ವಯನಾಡಿನ ಹಲವಾರು ಖಾತೆದಾರರು ಈಗ ಉತ್ತರ ಮತ್ತು ಈಶಾನ್ಯ ಭಾರತದ ವಿವಿಧ ರಾಜ್ಯಗಳಲ್ಲಿ ದಾಖಲಾದ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಇಂತಹ ಪ್ರಕರಣಗಳನ್ನು ಎದುರಿಸುತ್ತಿರುವ ಕನಿಷ್ಠ ಆರು ಜನರು ಕಂಬಲಕ್ಕಾಡ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಿವಾಸಿಗಳಾಗಿದ್ದಾರೆ. ಅವರಲ್ಲಿ ಒಬ್ಬಾತನನ್ನು ನಾಗಾಲ್ಯಾಂಡ್ ಪೊಲೀಸರು ಈಗಾಗಲೇ ಬಂಧಿಸಿದ್ದು, ಕೊಹಿಮಾಗೆ ಕರೆದೊಯ್ದಿದ್ದಾರೆ ಎಂದು ಸೈಬರ್ ಪೊಲೀಸ್ ಮೂಲಗಳು ತಿಳಿಸಿವೆ.

### • ಯುನೈಟೆಡ್ ಸ್ಟೇಟ್ಸ್‌ಗೆ ಕಾರ್ಯಸಾಧ್ಯವಾದ ಬೆದರಿಕೆಯನ್ನು ಒಡ್ಡುವ ಶಸ್ತ್ರಾಗಾರವನ್ನು ನಿರ್ಮಿಸುವ ಪ್ರಯತ್ನ

# ಅಮೆರಿಕದ ಮೇಲೆ ದಾಳಿ ನಡೆಸಬಲ್ಲ ರಾಕೆಟ್ ಸಿದ್ಧಪಡಿಸಿದ ಕಿಮ್

**ಸಿಯೋಲ್:** ಉತ್ತರ ಕೊರಿಯಾ ನಾಯಕ ಕಿಮ್ ಜೊಂಗ್ ಉನ್ ಅವರು ಖಂಡಾಂತರ ಕ್ಷಿಪಣಿಗಳಿಗಾಗಿ ವಿನ್ಯಾಸಗೊಳಿಸಲಾದ ಹೊಸ ರಾಕೆಟ್ ಎಂಜಿನ್‌ನ ಪರೀಕ್ಷೆ ಮಾಡಿದ್ದಾರೆ ಎಂದು ವರದಿಯಾಗಿದೆ.

ಇದು ಭೂಖಂಡದ ಯುನೈಟೆಡ್ ಸ್ಟೇಟ್ಸಗೆ ಕಾರ್ಯಸಾಧ್ಯವಾದ ಬೆದರಿಕೆಯನ್ನು ಒಡ್ಡುವ ಶಸ್ತ್ರಾಗಾರವನ್ನು ನಿರ್ಮಿಸುವ ಅವರ ಪ್ರಯತ್ನದ ಇತ್ತೀಚಿನ ಹೆಜ್ಜೆ ಯಾಗಿದೆ.

ಈ ಕಾರ್ಯಕ್ರಮವು ಕಾರ್ಬನ್ ಫೈಬರ್‌ನಿಂದ ನಿರ್ಮಿಸಲಾದ ಮತ್ತು 1,971 ಕಿಲೋನ್ಯೂಟನ್‌ಗಳ ಒತ್ತಡವನ್ನು ಉತ್ಪಾದಿಸುವ ಸಾಮರ್ಥ್ಯವಿರುವ ಘನ-ಇಂಧನ ರಾಕೆಟ್ ಎಂಜಿನ್‌ನ ಒಂಬತ್ತನೇ ಮತ್ತು ಅಂತಿಮ ನೆಲದ ಪರೀಕ್ಷೆಯಾಗಿದೆ ಎಂದು ಉತ್ತರ ಕೊರಿಯಾದ ಅಧಿಕೃತ ಕೊರಿಯನ್ ಸೆಂಟ್ರಲ್ ನ್ಯೂಸ್ ಏಜೆನ್ಸಿ ತಿಳಿಸಿದೆ, ಇದು ಹಿಂದಿನ ಮಾದರಿಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿದೆ.

ಉತ್ತರ ಕೊರಿಯಾವು ಹ್ವಾಸಾಂಗ್ -20 ಎಂಬ ವ್ಯವಸ್ಥೆಯನ್ನು ಒಳಗೊಂಡಂತೆ ಭವಿಷ್ಯದ ಐಸಿಬಿಎಂಗಳಿಗೆ ಬಳಸಲಾಗುವುದು ಎಂದು ಹೇಳಿದ್ದ ಎಂಜಿನ್ ಅನ್ನು ಅಭಿವೃದ್ಧಿಪಡಿಸಿದ ಸಂಶೋಧನಾ ಸಂಸ್ಥೆಗೆ ಕಿಮ್ ಭೇಟಿ ನೀಡಿದ ಒಂದು ವಾರದ ನಂತರ ಈ ವರದಿ ಬಂದಿದೆ.

**ಮತ್ತಷ್ಟು ಪ್ರಗತಿಗೆ ಕಿಮ್ ಕರೆ**

ಇತ್ತೀಚಿನ ವರ್ಷಗಳಲ್ಲಿ ಉತ್ತರ ಕೊರಿಯಾವು ಯುಎಸ್ ಮುಖ್ಯ ಭೂಭಾಗವನ್ನು ತಲುಪಲು ಸಂಭಾವ್ಯ ವ್ಯಾಪ್ತಿಯನ್ನು ಪ್ರದರ್ಶಿಸುವ ವಿವಿಧಗಳನ್ನು ಹಾರಾಟ-ಪರೀಕ್ಷೆ ಮಾಡಿದೆ. ಇದರಲ್ಲಿ ಚಲಿಸಲು ಮತ್ತು ಮರೆಮಾಡಲು ಸುಲಭವಾದ ಮತ್ತು ಉತ್ತರದ ಹಿಂದಿನ ದ್ರವ-ಇಂಧನ ಕ್ಷಿಪಣಿಗಳಿಗಿಂತ ಹೆಚ್ಚು ವೇಗವಾಗಿ ಉಡಾವಣೆಗೆ ಸಿದ್ಧಗೊಳಿಸಬಹುದಾದ ಅಂತರ್ನಿರ್ಮಿತ ಘನ ಪ್ರೊಪೆಲ್ಲೆಂಟ್‌ಗಳನ್ನು ಹೊಂದಿದೆ.ಉತ್ತರ ಕೊರಿಯಾದ ದೀರ್ಘ-ಶ್ರೇಣಿಯ ಶಸ್ತ್ರಾಸ್ತ್ರಗಳಲ್ಲಿ ಮತ್ತಷ್ಟು ಪ್ರಗತಿಗೆ ಕಿಮ್ ಕರೆ ನೀಡಿದ್ದಾರೆ, ಇದರಲ್ಲಿ ಕ್ಷಿಪಣಿ ರಕ್ಷಣೆಯನ್ನು ಸೋಲಿಸುವ ಸಾಧ್ಯತೆಗಳನ್ನು ಸುಧಾರಿಸುವ ಬಹು-ಶ್ರೇಣಿಯ ವ್ಯವಸ್ಥೆಗಳ ಅಭಿವೃದ್ಧಿಯೂ ಸೇರಿದೆ.ಉತ್ತರ ಕೊರಿಯಾದ ಎಲ್ಲಾ ಪರೀಕ್ಷೆಗಳನ್ನು



**ಕಿಮ್ ಅವರ ಪರಮಾಣು ಒತ್ತಡವು ಅಂತಿಮವಾಗಿ ಉತ್ತರವನ್ನು ಪರಮಾಣು ಶಕ್ತಿಯಾಗಿ ಸ್ವೀಕರಿಸಲು ಮತ್ತು ಬಲದ ಸ್ಥಾನದಿಂದ ಆರ್ಥಿಕ ಮತ್ತು ಭದ್ರತಾ ರಿಯಾಯಿತಿಗಳನ್ನು ಮಾತುಕತೆ ನಡೆಸಲು ವಾಷಿಂಗ್ಟನ್ ಮೇಲೆ ಒತ್ತಡ ಹೇರುವ ಗುರಿಯನ್ನು ಹೊಂದಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.**

ನೆರೆಯ ಪ್ರದೇಶಗಳನ್ನು ತಪ್ಪಿಸಲು ಸಾಮಾನ್ಯಕ್ಕಿಂತ ಕಡಿದಾದ ಪಥಗಳಲ್ಲಿ ನಡೆಸಲಾಗಿದೆ ಮತ್ತು ತಜ್ಞರು ಹೇಳುವಂತೆ ದೇಶವು ತನ್ನ ಸಿಡಿತಲೆಗಳು ವಾತಾವರಣದ ಮರು-ಪ್ರವೇಶದ ಕಠಿಣ ಪರಿಸ್ಥಿತಿಗಳಲ್ಲಿ ಬದುಕುಳಿಯುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ತಂತ್ರಜ್ಞಾನವನ್ನು ಇನ್ನೂ ಪರಿಪೂರ್ಣಗೊಳಿಸಿಲ್ಲದಿರಬಹುದು.

ಪರೀಕ್ಷೆಯ ನಂತರ ಕಿಮ್ ತೃಪ್ತಿ ವ್ಯಕ್ತಪಡಿಸಿದರು, ಹೊಸ ರಾಕೆಟ್ ಎಂಜಿನ್‌ನ ಕಣ್ಣು ತೆರೆಸುವ ಅಭಿವೃದ್ಧಿಯನ್ನು ಉತ್ತರ ಕೊರಿಯಾದ ಪರಮಾಣು ಪಡೆಗಳನ್ನು ವಿಸ್ತರಿಸುವ ಅವರ ಪ್ರಯತ್ನದಲ್ಲಿ ಮಹತ್ವದ ಬದಲಾವಣೆ ಎಂದು ಕರೆದರು ಎಂದು ಹೇಳಿದೆ.

2019 ರಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ಅವಧಿಯಲ್ಲಿ ಅಮೆರಿಕ ಜೊತೆಗಿನ ಪರಮಾಣು ಮಾತುಕತೆಗಳು ಕುಸಿದ ನಂತರ ಕಿಮ್ ಪರೀಕ್ಷಾ ಚಟುವಟಿಕೆಗಳನ್ನು ಹೆಚ್ಚಿಸಿದ್ದಾರೆ, ಏಷ್ಯಾ ಮತ್ತು ಅಮೆರಿಕ ಮುಖ್ಯ ಭೂಭಾಗದಲ್ಲಿ ಅಮೆರಿಕದ ಮಿತ್ರರಾಷ್ಟ್ರಗಳನ್ನು ಹೊಡೆಯಲು ವಿನ್ಯಾಸಗೊಳಿಸಲಾದ ವಿವಿಧ ಶ್ರೇಣಿಗಳ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸುತ್ತಿದ್ದಾರೆ. ಅವರು ಕಳೆದ ವಾರ ಬೀಜಿಂಗ್‌ಗೆ ಭೇಟಿ ನೀಡಿದರು, ಎರಡನೇ ಮಹಾಯುದ್ಧದ ಅಂತ್ಯದ 80 ನೇ ವಾರ್ಷಿಕೋತ್ಸವ ಮತ್ತು ಜಪಾನಿನ ಆಕ್ರಮಣದ ವಿರುದ್ಧ ಚೀನಾದ ಹೋರಾಟವನ್ನು ಗುರುತಿಸುವ ಬೃಹತ್ ಮಿಲಿಟರಿ ಮೆರವಣಿಗೆಯಲ್ಲಿ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ಪುಟಿನ್ ಅವರೊಂದಿಗೆ ಗಮನ ಸೆಳೆದರು. ಕಿಮ್ ಅವರ ಅಪರೂಪದ ವಿದೇಶ ಪ್ರವಾಸವು ಯುನೈಟೆಡ್ ಸ್ಟೇಟ್ಸ್‌ನೊಂದಿಗೆ ಮಾತುಕತೆಗಳ ಸಂಭಾವ್ಯ ಪುನರಾರಂಭಕ್ಕೆ ಮುಂಚಿತವಾಗಿ ಅವರ ಹತೋಟಿಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ ಎಂದು ತಜ್ಞರು ಹೇಳುತ್ತಾರೆ.

#### ರಷ್ಯಾ ಮತ್ತು ಚೀನಾ ಜೊತೆಗಿನ ಸಹಕಾರ

**ಕಿಮ್ ಸಾಂಪ್ರದಾಯಿಕ ಮಿತ್ರರಾಷ್ಟ್ರಗಳಾದ ರಷ್ಯಾ ಮತ್ತು ಚೀನಾ ಜೊತೆಗಿನ ಸಹಕಾರವನ್ನು ಬಲಪಡಿಸುವ ಮೂಲಕ ತಮ್ಮ ಹತೋಟಿಯನ್ನು ಬಲಪಡಿಸಲು ಪ್ರಯತ್ನಿಸುತ್ತಿದ್ದಾರೆ, ಇದು ಅಮೆರಿಕದ ಪ್ರಭಾವವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ. ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಉಕ್ರೇನ್ ಮೇಲಿನ ಯುದ್ಧಕ್ಕೆ ಇಂಧನ ತುಂಬಲು ಕಿಮ್ ರಷ್ಯಾಕ್ಕೆ ಸಾವಿರಾರು ಸೈನಿಕರು ಮತ್ತು ದೊಡ್ಡ ಪ್ರಮಾಣದ ಮಿಲಿಟರಿ ಉಪಕರಣಗಳನ್ನು ಕಳುಹಿಸಿದ್ದಾರೆ.**

## ಮಿನಿ ನ್ಯೂಸ್

### ಕಟ್ಟಡ ಕುಸಿದು ಅತ್ತೆ ಸಾವು, ಸೊಸೆಗೆ ಗಾಯ

**ಥಾಣೆ:** ಮಧ್ಯರಾತ್ರಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕಟ್ಟಡ ಒಂದು ಭಾಗ ಕುಸಿದು ಅವಶೇಷಗಳು ಮೇಲೆ ಬಿದ್ದ ಮಹಿಳೆಯೊಬ್ಬರು ಸಾವನ್ನಪ್ಪಿದ್ದು, ಅವರ ಸೊಸೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ಇಲ್ಲಿ ನಡೆದಿದೆ. ಮುಂಬ್ರಾ ಪ್ರದೇಶದ ದೌಲತ್ ನಗರದ ಲಕ್ಕಿ ಕಾಂಪೌಂಡ್‌ನಲ್ಲಿ ಮಧ್ಯರಾತ್ರಿ 12.36 ಕ್ಕೆ ಈ ಘಟನೆ ಸಂಭವಿಸಿದೆ ಎಂದು ಥಾಣೆ ಮಹಾನಗರ ಪಾಲಿಕೆಯ ವಿಪತ್ತು ನಿರ್ವಹಣಾ ಕೋಶದ ಮುಖ್ಯಸ್ಥ ಯಾಸಿನ್ ತಡ್ವಿ ತಿಳಿಸಿದ್ದಾರೆ.

ನಾಲ್ಕು ಅಂತಸ್ತಿನ ಕಟ್ಟಡದ ಫ್ಲಾಟ್‌ನ ಪ್ಯಾರಪೆಟ್‌ನ ಒಂದು ಭಾಗ ಕುಸಿದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಇಬ್ಬರು ಮಹಿಳೆಯರ ಮೇಲೆ ಬಿದ್ದಿದೆ ಎಂದು ಅವರು ಹೇಳಿದರು.

ಅವರಲ್ಲಿ ಸನಾ ಟವರ್ ನಿವಾಸಿಯಾದ ಅತ್ತೆ ನಹಿದ್ ಜೈನುದ್ದೀನ್ ಜಮಾಲಿ (62) ಸಾವನ್ನಪ್ಪಿದ್ದಾರೆ ಸೊಸೆ ಇಲಾ ಜೆಹ್ರಾ ಜಮಾಲಿ (26)ಗಾಯಗೊಂಡಿದ್ದು ಅವರನ್ನುಆಸ್ಪತ್ರೆಗೆ ದಾಖಲಿಸಲಾಗಿದೆ.

ಕುಸಿದಿರುವ ಕಟ್ಟಡವನ್ನು ಹಿಂದೆಯೇ ಅಪಾಯಕಾರಿ ಎಂದು ಘೋಷಿಸಿತ್ತು ಮತ್ತು ಸುರಕ್ಷತಾ ಕಾರಣಗಳಿಗಾಗಿ, ಕಟ್ಟಡದಲ್ಲಿರುವ ಎಲ್ಲಾ ಮನೆಗಳನ್ನು ತೆರವುಗೊಳಿಸಲಾಯಿತು ಮತ್ತು ಆವರಣವನ್ನು ಸೀಲ್ ಮಾಡಲಾಗಿದೆಎಂದು ಅಧಿಕಾರಿ ಹೇಳಿದರು. ದುರಾದೃಷ್ಟವಾಗಿ ಈ ಘಟನೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

### ಸಿಯಾಚಿನ್‌ನಲ್ಲಿ ಹಿಮಪಾತ ಮೂವರು ಸೈನಿಕರು ಹುತಾತ್ಮ

**ಲಡಾಖ್:** ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿರುವ ವಿಶ್ವದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿ ಹಿಮಪಾತ ಸಂಭವಿಸಿ ಮೂವರು ಸೈನಿಕರು ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 12,000 ಅಡಿ ಎತ್ತರದ ಸಿಯಾಚಿನ್ ಬೇಸ್ ಕ್ಯಾಂಪ್ ಪ್ರದೇಶದಲ್ಲಿ ಭಾನುವಾರ ಹಿಮಪಾತ ಸಂಭವಿಸಿದ್ದು, ಇಬ್ಬರು ಅಗ್ನಿವೀರರು ಸೇರಿದಂತೆ ಮೂವರು ಸೈನಿಕರು ಸಿಕ್ಕಿಬಿದ್ದಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. ತಕ್ಷಣವೇ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಮತ್ತು ಹಿಮಪಾತದಲ್ಲಿ ಸಿಲುಕಿದ್ದ ಸೈನಿಕರ ಶವಗಳನ್ನು ಹೊರತೆಗೆಯಲಾಯಿತು ಎಂದು ಅವರು ತಿಳಿಸಿದ್ದಾರೆ.

### 10 ಗಂಟೆಗಳಲ್ಲಿ 21 ಸಿಜರಿಯನ್ ಮಾಡಿದ ವೈದ್ಯನಿಗೆ ನೋಟಿಸ್ ಜಾರಿ

**ಗುವಾಹಟಿ:** ಅಸ್ಸಾಂನ ವೈದ್ಯರೊಬ್ಬರು 10 ಗಂಟೆಗಳ ಒಳಗೆ 21 ಸಿ-ಸೆಕ್ಷನ್(ಸಿಜರಿಯನ್) ಶಸ್ತ್ರಚಿಕಿತ್ಸೆ ಮಾಡಿದ್ದು, ಅವರಿಂದ ವಿವರಣೆ ಕೋರಿ ನೋಟಿಸ್ ಜಾರಿ ಮಾಡಲಾಗಿದೆ. ಹೆಚ್ಚುವರಿ ಜಿಲ್ಲಾ ಆಯುಕ್ತ (ಆರೋಗ್ಯ) ನಿತೀಶ್ ಬೋರಾ ಅವರು ಸೆಪ್ಟೆಂಬರ್ 6 ರಂದು ಮೋರಿಗಾಂವ್‌ನ ಸಿವಿಲ್ ಆಸ್ಪತ್ರೆಯ ಹಿರಿಯ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಸ್ತ್ರೀರೋಗತಜ್ಞ ಡಾ. ಕಾಂತೇಶ್ವರ್ ಬೋರ್ಡೊಲೊಯ್ ಅವರಿಗೆ ನೋಟಿಸ್ ನೀಡಿದ್ದಾರೆ.

ಸೆಪ್ಟೆಂಬರ್ 5 ರ ಮಧ್ಯಾಹ್ನ 3:40 ರಿಂದ ಸೆಪ್ಟೆಂಬರ್ 6 ರ ಬೆಳಗಿನ ಜಾವ 1:50 ರ ನಡುವೆ ಸುಮಾರು 10 ಗಂಟೆಗಳ ಒಳಗೆ ಅವರು 21 ತುರ್ತು ಲೋವರ್ ಸೆಗ್ಮೆಂಟ್ ಸಿಜರಿಯನ್ ಸೆಕ್ಷನ್ ಶಸ್ತ್ರಚಿಕಿತ್ಸೆ ಮಾಡಿದ್ದಾರೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ. ಇದು ಕೆಲವು ಗಂಭೀರ ಕಳವಳಗಳನ್ನು ಹುಟ್ಟುಹಾಕುತ್ತಿದೆ ಮತ್ತು ಆದ್ದರಿಂದ, ಪ್ರತಿಯೊಂದು ಪ್ರಕರಣದ ಬಗ್ಗೆಯೂ ಸಮಗ್ರ ವರದಿಯನ್ನು ಸಲ್ಲಿಸುವಂತೆ ನಿಮಗೆ ನಿರ್ದೇಶಿಸಲಾಗಿದೆ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ. ಪ್ರಕರಣದ ಸಿದ್ಧತೆಯ ವಿವರಗಳನ್ನು, ಕ್ರಿಮಿನಾಶಕ ಪ್ರೋಟೋಕಾಲ್‌ಗಳನ್ನು ಅನುಸರಿಸಲಾಗಿದೆಯೇ ಮತ್ತು ಶಸ್ತ್ರಚಿಕಿತ್ಸಾ ಉಪಕರಣಗಳ ಕ್ರಿಮಿನಾಶಕಕ್ಕೆ ಅನುಸರಿಸಲಾದ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳು, ಯಾವುದೇ ಮಾರಕ ತೊಂದರೆ ಪ್ರಕರಣಗಳ ದಾಖಲಾತಿ, ಸಹಾಯಕ ಸಿಬ್ಬಂದಿಯ ವಿವರಗಳು ಮತ್ತು ಅವರಿಗೆ ನಿಯೋಜಿಸಲಾದ ಪಾತ್ರ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡುವಂತೆ ಡಾ. ಬೋರ್ಡೊಲೊಯ್ ಅವರಿಗೆ ಸೂಚಿಸಲಾಗಿದೆ.

### 183 ಕೋಟಿ ರೂ. ನಕಲಿ ಬ್ಯಾಂಕ್ ಗ್ಯಾರಂಟಿ ಹಗರಣ: ಇಬ್ಬರ ಬಂಧನ

**ಭೋಪಾಲ್:** ರೂ.183.21 ಕೋಟಿ ರೂ. ನಕಲಿ ಬ್ಯಾಂಕ್ ಗ್ಯಾರಂಟಿ ಹಗರಣಕ್ಕೆ ಸಂಬಂಧಿಸಿದಂತೆ, ಇಂದೋರ್ ಮೂಲದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ(ಎಂಡಿ) ಸೇರಿದಂತೆ ಇಬ್ಬರನ್ನು ಕೇಂದ್ರ ತನಿಖಾ ಸಂಸ್ಥೆ(ಸಿಬಿಐ) ಬಂಧಿಸಿದೆ. ತೀರ್ಥ್ ಗೋಪಿಕಾನ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಕುಂಭಾನಿ ಮತ್ತು ಗೌರವ್ ಧಕಾಡ್ ಅವರನ್ನು ಸಿಬಿಐ ಬಂಧಿಸಿದೆ. ಈ ಇಬ್ಬರನ್ನು ಮಂಗಳವಾರ ವಿಶೇಷ ಸಿಬಿಐ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಕೇಂದ್ರ ತನಿಖಾ ಸಂಸ್ಥೆ ಕೋಲ್ಕತ್ತಾದ ಮೂವರು ವ್ಯಕ್ತಿಗಳನ್ನು ಇದೇ ಪ್ರಕರಣಗಳಲ್ಲಿ ಬಂಧಿಸಿದ ಮೂರು ತಿಂಗಳ ನಂತರ ಈಗ ಮತ್ತೆ ಇಬ್ಬರನ್ನು ಬಂಧಿಸಿದೆ. ಜೂನ್‌ನಲ್ಲಿ, ರೂ.183.21 ಕೋಟಿ ರೂ. ನಕಲಿ ಬ್ಯಾಂಕ್ ಗ್ಯಾರಂಟಿ ಹಗರಣಕ್ಕೆ ಸಂಬಂಧಿಸಿದ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಹಿರಿಯ ವ್ಯವಸ್ಥಾಪಕ ಗೋವಿಂದ್ ಚಂದ್ರ ಹನ್ಸ್‌ಡಾ ಮತ್ತು ಮೊಹಮ್ಮದ್ ಫಿರೋಜ್ ಖಾನ್ ಸೇರಿದಂತೆ ಮೂವರನ್ನು ಸಿಬಿಐ ಬಂಧಿಸಿತ್ತು.

ಇದಕ್ಕೂ ಮೊದಲು, ಮಧ್ಯಪ್ರದೇಶ ಹೈಕೋರ್ಟ್‌ನ ನಿರ್ದೇಶನದ ಮೇರೆಗೆ, ಸಿಬಿಐ, ಇಂದೋರ್ ಮೂಲದ ತೀರ್ಥ್ ಗೋಪಿಕಾನ್ ಲಿಮಿಟೆಡ್, ಎಂಪಿ ಜಲ ನಿಗಮ್ ಲಿಮಿಟೆಡ್(ಎಂಪಿಜೆಎನ್‌ಎಲ್) ನಿಂದ 974 ಕೋಟಿ ರೂ. ಮೌಲ್ಯದ ಒಪ್ಪಂದಗಳನ್ನು ಪಡೆಯಲು ಎಂಟು ನಕಲಿ ಬ್ಯಾಂಕ್ ಗ್ಯಾರಂಟಿಗಳನ್ನು ಸಲ್ಲಿಸಿದ್ದಕ್ಕೆ ಸಂಬಂಧಿಸಿದಂತೆ ಮೂರು ಪ್ರಕರಣಗಳನ್ನು ದಾಖಲಿಸಿತ್ತು.

2023ರಲ್ಲಿ, ಕಂಪನಿಯು ಮಧ್ಯಪ್ರದೇಶದ ಛತ್ತರ್‌ಪುರ, ಸಾಗರ್ ಮತ್ತು ದಿಂಡೋರಿ ಜಿಲ್ಲೆಗಳಲ್ಲಿ ಒಟ್ಟು 974 ಕೋಟಿ ರೂ. ಮೌಲ್ಯದ ಮೂರು ನೀರಾವರಿ ಯೋಜನೆಗಳ ಗುತ್ತಿಗೆ ಪಡೆದುಕೊಂಡಿತ್ತು. ಈ ಒಪ್ಪಂದಗಳನ್ನು ಪಡೆಯಲು ಕಂಪನಿಯು 183.21 ಕೋಟಿ ರೂ. ಮೌಲ್ಯದ ಎಂಟು ನಕಲಿ ಬ್ಯಾಂಕ್ ಗ್ಯಾರಂಟಿಗಳನ್ನು ಸಲ್ಲಿಸಿತ್ತು. ಈ ನಕಲಿ ಗ್ಯಾರಂಟಿಗಳ ಆಧಾರದ ಮೇಲೆ, ಅದು ಎಂಪಿಜೆಎನ್ ಎಲ್‌ನಿಂದ ಸುಮಾರು 85 ಕೋಟಿ ರೂ.ಗಳನ್ನು ಮುಂಗಡವಾಗಿ ಪಡೆದುಕೊಂಡಿತ್ತು.



# ಜಡ್ಜ್ ಎದುರು ದರ್ಶನ್ ಅಳಲು



ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ದರ್ಶನ್ ಅರೆಸ್ಟ್ ಆಗಿದ್ದರು. ಆ ಬಳಿಕ ಅವರಿಗೆ ಜಾಮೀನು ಸಿಕ್ಕಿತು. ಸುಪ್ರೀಂಕೋರ್ಟ್ ದರ್ಶನ್ ಅವರ ಜಾಮೀನನ್ನು ರದ್ದು ಮಾಡಿತು. ಹೀಗಾಗಿ, ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಅವರನ್ನು ಇಡಲಾಗಿದೆ. ಅಲ್ಲಿನ ಕಠಿಣ ನಿಯಮಗಳಿಂದ ಅವರಿಗೆ ನರಕಯಾತನೆ ಉಂಟಾಗುತ್ತಿದೆ. ರೇಣುಕಾ ಸ್ವಾಮಿ ಕೊಲೆ ಕೇಸ್ ಆರೋಪಿ ನಟ ದರ್ಶನ್ ಅವರಿಗೆ ಈ ಬಾರಿ ಜೈಲಿನಲ್ಲಿ ಯಾವುದೇ ಸವಲತ್ತು ಸಿಗುತ್ತಿಲ್ಲ. ಇದರಿಂದ ಅವರು ಹೈರಾಣವಾಗಿ ಹೋಗಿದ್ದಾರೆ. ಈ ಕಾರಣದಿಂದಲೇ ದರ್ಶನ್ ಅವರು ಜಡ್ಜ್ ಎದುರು ಬೇಡಿಕೆ ಒಂದನ್ನು ಇಟ್ಟಿದ್ದಾರೆ. 'ನನಗೆ ವಿಷ ನೀಡಲು ಆದೇಶಿಸಿ' ಎಂದು ಜಡ್ಜ್ ಎದುರೇ ಕೇಳಿದ್ದಾರೆ. ದರ್ಶನ್ ಬೇಡಿಕೆ ಕೇಳಿ ಜಡ್ಜ್ ಒಮ್ಮೆ ಶಾಕ್ ಆದರು. 'ಹಾಗೆಲ್ಲ ಕೇಳಬಾರದು' ಎಂದು ಜಡ್ಜ್ ದರ್ಶನ್‌ಗೆ ಕಿವಿ ಮಾತು ಹೇಳಿದ್ದಾರೆ. ನಟ ದರ್ಶನ್ ಆಂಡ್ ಗ್ಯಾಂಗ್ ಅನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಳ್ಳಾರಿ ಜೈಲಿಗೆ ಶಿಫ್ಟ್ ಮಾಡಬೇಕೆಂದು ಕೋರಿದ್ದ ಅರ್ಜಿಯನ್ನು ಬೆಂಗಳೂರಿನ 57ನೇ ಸಿಸಿಹೆಚ್ ಕೋರ್ಟ್ ವಜಾ ಮಾಡಿದೆ.

ಇದರಿಂದಾಗಿ ದರ್ಶನ್ ಆಂಡ್ ಗ್ಯಾಂಗ್ ಬೆಂಗಳೂರು ಪರಪ್ಪನ ಅಗ್ರಹಾರ ಜೈಲಿನಲ್ಲೇ ಉಳಿಯಲಿದೆ. ಇನ್ನು ದರ್ಶನ್ ಗೆ ಕನಿಷ್ಠ ಮೂಲಸೌಕರ್ಯಗಳನ್ನು ನೀಡಬೇಕೆಂದು ಕೋರಿದ್ದ ಅರ್ಜಿಯನ್ನು ಸಹ ಕೋರ್ಟ್ ಮಾನ್ಯ ಮಾಡಿದ್ದು, ಜೈಲು ಮ್ಯಾನುಯಲ್ ಪ್ರಕಾರ ಏನೆಲ್ಲಾ ಸೌಲಭ್ಯ ಕೊಡಬೇಕು ಅದನ್ನು ನೀಡಿ ಎಂದು ಕೋರ್ಟ್ ಆದೇಶಿಸಿದೆ.

# ಗೃಹಸಚಿವರ ಮಾತಿಗೆ ನಾಚಿಕೆಯಾಗ್ಬೇಕು

ಪೋಸ್ಟ್‌ಗೆ ಪರ ವಿರೋಧ ಕಾಮೆಂಟ್ಸ್


ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ ಗಣಪತಿ ವಿಸರ್ಜನೆ ವೇಳೆ ದಾಂಧಲೆ ನಡೆದಿದೆ. ಕೋಮು ಗಲಭೆಗೆ ಕಾರಣವಾಗಿದೆ. ಹಿಂದೂ ಸಂಘಟನೆಗಳಿಂದ ಸೋಮವಾರ ಪ್ರತಿಭಟನೆ ನಡೆದಿದೆ. ಉದ್ರಿಕ್ತ ಪ್ರತಿಭಟನಾಕಾರರ ಮೇಲೆ ಲಾಠಿ ಪೊಲೀಸರಿಂದ ಲಾಠಿ ಪ್ರಹಾರವೂ ನಡೆದಿದೆ. ರಾಜ್ಯವ್ಯಾಪಿ ಚರ್ಚೆಯಾಗುತ್ತಿರುವ ಈ ಘಟನೆ ಕುರಿತು ಇದೀಗ ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ / ನಟಿ, ನಿರೂಪಕಿ ಕಾವ್ಯ ಶಾಸ್ತ್ರಿ ಧ್ವನಿ ಎತ್ತಿದ್ದಾರೆ. ಗೃಹಮಂತ್ರಿಗಳ ಮಾತನ್ನ ತೀವ್ರವಾಗಿ ವಿರೋಧಿಸಿ ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಹಾಕಿದ್ದಾರೆ ಕಾವ್ಯ ಶಾಸ್ತ್ರಿ. ಘಟನೆ ಸಂಬಂಧ ಗೃಹಸಚಿವ ಜಿ ಪರಮೇಶ್ವರ್ ಪ್ರತಿಕ್ರಿಯೆ ಕೊಟ್ಟಿದ್ದರು. ಇದೀಗ ಸಚಿವರ ಮಾತನ್ನ ವಿರೋಧಿಸಿ ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿರುವ ಕಾವ್ಯ ''ಮದ್ದೂರಿನಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದ ದಾಂಧಲೆಗೆ ಹಿಂದೂ ಸಂಘಟನೆಗಳು ಕಾರಣ ಎನ್ನುವ ಶಂಕೆ ಅಂದಿರೋ ಗೃಹಮಂತ್ರಿಗಳು. ನಾಚಿಕೆಯಾಗಬೇಕು ಸ್ವಾಮಿ, ಆ ಸ್ಥಾನದಲ್ಲಿದ್ದು ಇಂತಹ ಮಾತುಗಳನ್ನಾಡೋದಕ್ಕೆ'' ಎಂದಿದ್ದಾರೆ ಕಾವ್ಯ. ಹೀಗೆ ಬರೆದಿರುವ ಕಾವ್ಯ ಶಾಸ್ತ್ರಿಯವರ ಪೋಸ್ಟ್‌ಗೆ ಪರ ವಿರೋಧ ಕಾಮೆಂಟ್ಸ್ ಬರುತ್ತಿದೆ. ಹೀಗೆ ಹೇಳುವ ಮೂಲಕ ಗೃಹಮಂತ್ರಿಗಳ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ ನಟಿ.



# 'ಕ್ರಿಶ್ 4' ಚಿತ್ರೀಕರಣ ಯಾವಾಗ

ಉತ್ತರ ನೀಡಿದ ರಾಕೇಶ್


ಭಾರತದ ಜನಪ್ರಿಯ ಸೂಪರ್ ಹೀರೋ ಸಿನಿಮಾ ಆಗಿರುವ 'ಕ್ರಿಶ್' ಸರಣಿಯ ಹೊಸದೊಂದು ಸಿನಿಮಾ ಚಿತ್ರೀಕರಣಕ್ಕೆ ವೇದಿಕೆ ಸಜ್ಜಾಗುತ್ತಿದೆ. ಹೃತಿಕ್ ರೋಷನ್ 'ಕ್ರಿಶ್' ಪಾತ್ರದಲ್ಲಿ ನಟಿಸುತ್ತಾ ಬಂದಿದ್ದಾರೆ. ಆದರೆ ಇದೀಗ ಹೃತಿಕ್ ಅವರೇ ಈ ಸಿನಿಮಾದ ನಿರ್ದೇಶನವನ್ನೂ ಮಾಡಲಿದ್ದಾರೆ. ಸಿನಿಮಾದ ಶೂಟಿಂಗ್ ಶುರು ಯಾವಾಗ ಇಲ್ಲಿದೆ ಉತ್ತರ...



ವಿದೇಶದಲ್ಲಿ ಸೂಪರ್ ಹೀರೋ ಸಿನಿಮಾಗಳು ಅನೇಕ. 'ಸೂಪರ್ ಮ್ಯಾನ್', 'ಐರನ್ ಮ್ಯಾನ್', 'ಬ್ಯಾಟ್‌ಮ್ಯಾನ್', 'ಹಲ್ಕ್', 'ಕ್ಯಾಪ್ಟನ್ ಅಮೆರಿಕ', 'ಸ್ಪೈಡರ್‌ಮ್ಯಾನ್' ಇನ್ನೂ ಅನೇಕ ಸೂಪರ್ ಹೀರೋಗಳು ಹಾಲಿವುಡ್‌ನಲ್ಲಿದ್ದಾರೆ. ಭಾರತದಲ್ಲಿ ಸೂಪರ್ ಹೀರೋ ಸಿನಿಮಾಗಳು ಕಡಿಮೆಯೇ. 2006 ರಲ್ಲಿ ಬಿಡುಗಡೆ ಆದ 'ಕ್ರಿಶ್' ಸಿನಿಮಾ ಭಾರತದ ಮೊದಲ ಅಧಿಕೃತ ಸೂಪರ್ ಹೀರೋ ಎನ್ನಬಹುದು. ಅದಕ್ಕೂ ಮುಂಚೆ ಕೆಲ ಸಿನಿಮಾಗಳು ಬಿಡುಗಡೆ ಆಗಿದ್ದವರಾದರೂ ತಾಂತ್ರಿಕವಾಗಿ ಗಟ್ಟಿಯಾಗಿದ್ದ ಮೊದಲ ಸೂಪರ್ ಹೀರೋ ಸಿನಿಮಾ 'ಕ್ರಿಶ್' ಆಗಿತ್ತು. 'ಕ್ರಿಶ್' ಈಗ ಭಾರತದ ಜನಪ್ರಿಯ ಸೂಪರ್ ಹೀರೋ ಸಿನಿಮಾ ಆಗಿದ್ದು, ಇದೀಗ ಸಿನಿಮಾದ ನಾಲ್ಕನೇ ಆವೃತ್ತಿ ತೆರೆಗೆ ಬರಲು ವೇದಿಕೆ ಸಜ್ಜುಗೊಳ್ಳುತ್ತಿದೆ.

ಹೃತಿಕ್ ರೋಷನ್ 'ಕ್ರಿಶ್' ಪಾತ್ರದಲ್ಲಿ ಮಿಂಚುತ್ತಾ ಬಂದಿದ್ದಾರೆ. ಈವರೆಗೆ ಮೂರು ಕ್ರಿಶ್ ಸಿನಿಮಾಗಳು ತೆರೆಗೆ ಬಂದಿದ್ದು, ಮೂರೂ ಸಿನಿಮಾಗಳು ಸೂಪರ್ ಹಿಟ್ ಎನಿಸಿಕೊಂಡಿವೆ. ಆದರೆ ಇದೇ ಮೊದಲ ಬಾರಿಗೆ 'ಕ್ರಿಶ್ 4' ಸಿನಿಮಾ ಅನ್ನು ಹೃತಿಕ್ ರೋಷನ್ ನಿರ್ದೇಶನ ಮಾಡಲು ಮುಂದಾಗಿದ್ದಾರೆ. ಇದು ಅವರ ಮೊದಲ ನಿರ್ದೇಶನದ ಸಿನಿಮಾ ಸಹ. ಈ ಹಿಂದಿನ 'ಕ್ರಿಶ್' ಸಿನಿಮಾಗಳನ್ನು ಹೃತಿಕ್ ಅವರ ತಂದೆ ರಾಕೇಶ್ ರೋಷನ್ ನಿರ್ದೇಶನ ಮಾಡಿದ್ದರು.

# ಧರ್ಮಸ್ಥಳಕ್ಕೆ ಪವನ್ ಕಲ್ಯಾಣ್



ಆಂಧ್ರ ಪ್ರದೇಶ ರಾಜ್ಯದ ಉಪ ಮುಖ್ಯಮಂತ್ರಿ ಮತ್ತು ತೆಲುಗು ಚಿತ್ರರಂಗದ ಸ್ಟಾರ್ ನಟರೂ ಆಗಿರುವ ಪವನ್ ಕಲ್ಯಾಣ್ ಅವರು ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಲಿದ್ದಾರೆ. ಧರ್ಮಸ್ಥಳ ಕ್ಷೇತ್ರದ ಪರವಾಗಿ ತಮ್ಮ ನಿಲುವು ಪ್ರಕಟಿಸಲೆಂದೇ ಪವನ್ ಕಲ್ಯಾಣ್ ಅವರು ದೇವಾಲಯಕ್ಕೆ ಭೇಟಿ ನೀಡಲಿದ್ದಾರೆ ಎನ್ನಲಾಗುತ್ತಿದೆ. ಪುಣ್ಯಕ್ಷೇತ್ರ, ಭಕ್ತಿ ಕೇಂದ್ರವಾಗಿದ್ದ ಧರ್ಮಸ್ಥಳ ಇತ್ತೀಚೆಗೆ ಬೇರೆ ಬೇರೆ ಕಾರಣಕ್ಕೆ ಸುದ್ದಿಯಲ್ಲಿದೆ. ಧರ್ಮಸ್ಥಳದ ಘನತೆಯನ್ನು ಮಣ್ಣುಪಾಲು ಮಾಡುವ ಪ್ರಯತ್ನ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದ್ದು, ಇದೀಗ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡಿದವರಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ. ಧರ್ಮಸ್ಥಳದ ಧರ್ಮಾಧಿಕಾರಿಗಳ ವಿರುದ್ಧ ಆರೋಪ ಮಾಡಿದ್ದ ಚಿನ್ನಯ್ಯ ಎಂಬಾತನನ್ನು ಬಂಧಿಸಲಾಗಿದ್ದು, ವಿಚಾರಣೆ ಚಾಲ್ತಿಯಲ್ಲಿದೆ. ಇದರ ನಡುವೆ ನೆರೆಯ ರಾಜ್ಯದ ಉಪಮುಖ್ಯಮಂತ್ರಿ ಮತ್ತು ಸ್ಟಾರ್ ನಟ ಪವನ್ ಕಲ್ಯಾಣ್ ಅವರು ಧರ್ಮಸ್ಥಳಕ್ಕೆ ಭೇಟಿ ನೀಡುತ್ತಿದ್ದಾರೆ. ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ ಮತ್ತು ಸ್ಟಾರ್ ನಟರಾಗಿರುವ ಪವನ್ ಕಲ್ಯಾಣ್ ಅವರು ಸೆಪ್ಟೆಂಬರ್ 11 ರಂದು ಧರ್ಮಸ್ಥಳ ಕ್ಷೇತ್ರಕ್ಕೆ ಭೇಟಿ ನೀಡಲಿದ್ದಾರೆ. ಧರ್ಮಸ್ಥಳದ ಪರವಾಗಿ ನಿಲುವು ಪ್ರಕಟಿಸಲೆಂದೇ ಪವನ್ ಕಲ್ಯಾಣ್ ಅವರು ಕರ್ನಾಟಕಕ್ಕೆ ಬರುತ್ತಿದ್ದಾರೆ. ಸೆಪ್ಟೆಂಬರ್ 11 ರಂದು ಸಂಜೆ ಐದು ಗಂಟೆ ವೇಳೆಗೆ ಪವನ್ ಕಲ್ಯಾಣ್ ಅವರು ಧರ್ಮಸ್ಥಳಕ್ಕೆ ಆಗಮಿಸಲಿದ್ದು, ದೇವಾಲಯದಲ್ಲಿ ವಿಶೇಷ ಪೂಜೆಯನ್ನು ಪವನ್ ಕಲ್ಯಾಣ್ ಮಾಡಿಸಲಿದ್ದಾರೆ.

# ದರ್ಶನ್ ಅಮೇಝಿಂಗ್ ವ್ಯಕ್ತಿ

ಕ್ರಾಂತಿ ಸೆಟ್ ಮೆಲುಕು ಹಾಕಿದ ಪುಷ್ಪವತಿ



ಕ್ರಾಂತಿ ಸಿನಿಮಾದ ಸ್ಪೆಷಲ್ ಸಾಂಗ್‌ನಲ್ಲಿ ಪುಷ್ಪವತಿ ಹೆಜ್ಜೆ ಹಾಕಿದ್ದರು. ಆ ವೇಳೆ ಸೆಟ್‌ನಲ್ಲಿ ನಟ ದರ್ಶನ್ ಅವರನ್ನು ಉಪಚರಿಸಿದ ರೀತಿ ಬಗ್ಗೆ ನಟಿ ನಿಮಿಕಾ ರತ್ನಾಕರ್ ಹೇಳಿಕೊಂಡಿದ್ದಾರೆ. ಸದ್ಯ ಫೀನಿಕ್ಸ್ ಸಿನಿಮಾದ ಶೂಟಿಂಗ್‌ನಲ್ಲಿ ಭಾಗಿಯಾಗಿರುವ ನಿಮಿಕಾ ರತ್ನಾಕರ್, ಸಿನಿಮಾದಲ್ಲಿ ತಮ್ಮ ಪಾತ್ರ ಹಾಗೂ ಸಿನಿಮಾ ಶೂಟಿಂಗ್ ಎಕ್ಸ್‌ಪೀರಿಯನ್ಸ್ ಹಂಚಿಕೊಂಡಿದ್ದಾರೆ.

ಫೀನಿಕ್ಸ್ ಸಿನಿಮಾ ಮಹಿಳಾ ಪ್ರಧಾನ ಸಿನಿಮಾವಾಗಿದ್ದು, ಚಿತ್ರದ ಕೊನೆಯ ದಿನದ ಶೂಟಿಂಗ್‌ನ್ನ ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ ಚಿತ್ರೀಕರಿಸಿದೆ ಚಿತ್ರತಂಡ. ಈ ವೇಳೆ ಮಾಧ್ಯಮಗಳ ಜೊತೆ ಮಾತನಾಡಿದ ನಿಮಿಕಾ ರತ್ನಾಕರ್ ದರ್ಶನ್ ಅವರ ಜೊತೆ ಕ್ರಾಂತಿ ಸಿನಿಮಾದ ಅನುಭವವನ್ನ ಹಂಚಿಕೊಂಡಿದ್ದಾರೆ. ''ದರ್ಶನ್ ಸರ್ ಇರೋದಕ್ಕೂ, ಕೆಲವರು ಅವರನ್ನ ತೋರಿಸೋದಕ್ಕೂ ವ್ಯತ್ಯಾಸವಿದೆ. ಪ್ರತಿದಿನ ಅಮ್ಮ ತಿಂಡಿ ಆಯ್ತಾ, ಊಟ ಆಯ್ತಾ ಅಂತಾ ಕೇಳ್ತಿದ್ರು. ಅಮೇಝಿಂಗ್ ವ್ಯಕ್ತಿ ದರ್ಶನ್ ಸರ್'' ಎಂದು ಹೇಳಿದ್ದಾರೆ. ಓಂ ಪ್ರಕಾಶ್ ರಾವ್ ನಿರ್ದೇಶನದ ಫೀನಿಕ್ಸ್ ಸಿನಿಮಾದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ ನಿಮಿಕಾ. ಇನ್ನು ಓಂ ಪ್ರಕಾಶ್ ರಾವ್ ಅವರ ಮುಂದಿನ 50ನೇ ಸಿನಿಮಾದಲ್ಲೂ ನಿಮಿಕಾ ಮುಖ್ಯ ಪಾತ್ರದಲ್ಲಿ ನಟಿಸಲಿದ್ದಾರಂತೆ.

# ಮಿನಿ ಫ್ರಾಕ್ ಧರಿಸಿದ ಊರ್ಮಿಳಾ



ಬಾಲಿವುಡ್‌ನಲ್ಲಿ ಸೆನ್ಸೇಷನ್ ಕ್ರಿಯೇಟ್ ಮಾಡಿರುವ ಚಿತ್ರಗಳಲ್ಲಿ ರಂಗೀಲಾ ಸಿನಿಮಾ ಕೂಡ ಒಂದು. ಇಂದಿಗೆ ರಂಗೀಲಾ ಸಿನಿಮಾ ಬಿಡುಗಡೆಯಾಗಿ 30 ವರ್ಷವಾಗಿದೆ. 1995 ಸೆಪ್ಟೆಂಬರ್ 8 ರಂದು ರಿಲೀಸ್ ಆಗಿದ್ದ ರಂಗೀಲಾ ಮ್ಯೂಸಿಕಲ್ ಹಿಟ್ ಜೊತೆಗೆ ಬ್ಲಾಕ್‌ಬಸ್ಟರ್ ಚಿತ್ರವಾಗಿತ್ತು. ಹಾಡುಗಳಂತೂ ಇಂದಿಗೂ ಎವರ್‌ಗ್ರೀನ್. ಈ ಚಿತ್ರದ ಮೂಲಕ ಬೆಡಗಿ ಊರ್ಮಿಳಾ ಮತೋಂಡ್ಕರ್ ಎಷ್ಟೋ ಪಡ್ಡೆಗಳ ಹೃದಯಕ್ಕೆ ಕಿಚ್ಚು ಹಚ್ಚಿದ್ದ ನಾಯಕಿಯಾದ್ರು. ಈವರೆಗೂ ಊರ್ಮಿಳಾ ಅಂದ್ರೆ ರಂಗೀಲಾ ಎಂದೇ ಕರೆಯಲಾಗುತ್ತೆ. ಊರ್ಮಿಳಾ ಜೊತೆ ಅಮಿರ್ ಖಾನ್ ಹಾಗೂ ಜಾಕಿ ಶ್ರಾಫ್ ತೆರೆ ಹಂಚಿಕೊಂಡಿದ್ದರು. ಈ ಚಿತ್ರದಲ್ಲಿ ಊರ್ಮಿಳಾ ಹಸಿಬಿಸಿಯಾಗಿ ಕಾಣಿಸಿಕೊಂಡ ಪರಿಗೆ ಸಿನಿಮಾ ಇಂಡಸ್ಟ್ರಿ ಶೇಕ್ ಶೇಕ್ ಆಗಿತ್ತು. ಇದೀಗ ಅದೇ ರಂಗೀಲಾ ಚಿತ್ರದ ರಂಗೀಲಾರೇ ಹಾಡಿಗೆ ರೀಲ್ಸ್ ಮಾಡುವ ಮೂಲಕ 30 ವರ್ಷದ ಆನಿವರ್ಸರಿ ಖುಷಿ ಹಂಚಿಕೊಂಡಿದ್ದಾರೆ ಊರ್ಮಿಳಾ ಮತೋಂಡ್ಕರ್.

ಈ ಹಾಡಿನಲ್ಲಿ ಊರ್ಮಿಳಾ ಮಿನಿ ಫ್ರಾಕ್ ಧರಿಸಿ ಮುಂಬೈ ಬೀದಿಗಳಲ್ಲಿ ಜಸ್ಟ್ ಹೆಜ್ಜೆ ಹಾಕ್ತಾರೆ. ಹೊಸ ನಾಯಕಿಯ ಸೋಲೋ ಹಾಡು ಮ್ಯಾಜಿಕ್ ಕ್ರಿಯೇಟ್ ಮಾಡುತ್ತೆ. ಊರ್ಮಿಳಾ ಅಂದ ಚೆಂದ ನಟನೆ ನೃತ್ಯಕ್ಕೆ, ಆಶಾ ಭೋಸ್ಲೆ ಹಿನ್ನೆಲೆ ಗಾಯನ ಇನ್ನಿಲ್ಲದಂತೆ ಹಾಡಿಗೆ ಮಾದಕತೆಯ ಸ್ಪರ್ಷ ಕೊಡುತ್ತೆ. ಈಗಲೂ ಈ ಹಾಡಿನಲ್ಲಿ ಕಾಣಿಸ್ಕೊಂಡ ಊರ್ಮಿಳಾರನ್ನ ಯಾರೂ ಮರೆಯಲ್ಲ. ಇದೀಗ ಈ ಚಿತ್ರ 30 ವರ್ಷ ಪೂರೈಸಿರುವ ಹಿನ್ನೆಲೆ ಇನ್ಸ್ಟಾಗ್ರಾಂನಲ್ಲಿ ರೀಲ್ಸ್ ಪೋಸ್ಟ್ ಮಾಡಿ ಸುದೀರ್ಘ ಪದಗಳಲ್ಲಿ ಸಂತಸ ಹಂಚಿಕೊಂಡಿದ್ದಾರೆ ನಟಿ ಊರ್ಮಿಳಾ. ತಮ್ಮನ್ನು ಬೆಳೆಸಿದ ಅಭಿಮಾನಿಗಳಿಗೆ ಧನ್ಯವಾದ ಹೇಳಿದ್ದಾರೆ.

ಇಂದಿಗೆ 30 ವರ್ಷಗಳ ಹಿಂದೆ, ರಂಗೀಲಾ ನಿಮ್ಮಲ್ಲಿ ಒಬ್ಬಳಾಗಿದ್ದಳು, ಇಂದಿಗೂ ಸಹ. ನೀವು ನಕ್ಕಾಗ, ನೀವು ಹರಿದುಂಬಿಸಿದಾಗ, ಮಾಂತ್ರಿಕತೆಯಿಂದ ಪ್ರೀತಿಸಿದಾಗ ಅದು ಹಿಂದುರುಗಿ ಶಕ್ತಿಯಾಗುತ್ತದೆ.

# ಗಂಡ ಆಗಿದ್ದ ಅಂತ ಸುಮ್ನೆ ಇದೀನಿ



ಧನಶ್ರೀ ವರ್ಮ ಮತ್ತು ಯಜುವೇಂದ್ರ ಚಹಲ್ ಅವರ ವಿಚ್ಛೇದನದ ನಂತರ, ಚಹಲ್ ಅವರು ಧನಶ್ರೀ ಅವರನ್ನು ಟೀಕಿಸಿದ್ದರು. ಈಗ, 'ರೈಸ್ ಆಂಡ್ ಫಾಲ್' ಶೋನಲ್ಲಿ ಧನಶ್ರೀ ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಚಹಲ್ ಗೌರವದಿಂದ ವರ್ತಿಸಬೇಕಿತ್ತು ಎಂದು ಹೇಳಿದ್ದಾರೆ.

ಡ್ಯಾನ್ಸರ್ ಹಾಗೂ ನಟಿ ಧನಶ್ರೀ ವರ್ಮ ಹಾಗೂ ಕ್ರಿಕೆಟರ್ ಯಜುವೇಂದ್ರ ಚಹಲ್ ನಾಲ್ಕು ವರ್ಷಗಳ ಕಾಲ ಸಂಸಾರ ನಡೆಸಿ ಆ ಬಳಿಕ ಬೇರೆ ಆದರು. ವಿಚ್ಛೇದನಕ್ಕೆ ಯಾರು ಕಾರಣ ಎಂಬ ವಿಚಾರ ರಿವೀಲ್ ಆಗಿಲ್ಲ. ವಿಚ್ಛೇದನದ ಬಳಿಕ ಚಹಲ್ ಅವರು ಧನಶ್ರೀ ಅವರನ್ನು ಪರೋಕ್ಷವಾಗಿ ಸಾಕಷ್ಟು ಟೀಕೆ ಮಾಡಿದ್ದರು. ಅಮೇಜಾನ್ ಎಂಎಕ್ಸ್ ಪ್ಲೇಯರ್‌ನ 'ರೈಸ್ ಆಂಡ್ ಫಾಲ್' ಶೋನಲ್ಲಿ ಧನಶ್ರೀ ವರ್ಮಾ ಈ ಬಗ್ಗೆ ಮಾತನಾಡಿದ್ದಾರೆ. 'ಧನಶ್ರೀ ಹಣಕ್ಕಾಗಿ ಎಲ್ಲವನ್ನೂ ಮಾಡುತ್ತಿದ್ದಾರೆ' ಎಂದು ಚಹಲ್ ಅವರು ಪರೋಕ್ಷವಾಗಿ ಹೇಳಿದ್ದರು. ಟ್ರೋಲ್ ಪೇಜ್‌ಗಳು ಇದೇ ಅರ್ಥ ಬರುವ ರೀತಿಯಲ್ಲಿ ಧನಶ್ರೀ ಅವರನ್ನು ಬಿಂಬಿಸಿದ್ದಾರೆ. ಅಲ್ಲದೆ, ವಿಚ್ಛೇದನದ ದಿನ ಶರ್ಟ್ ಮೇಲೆ ಧನಶ್ರೀ ಅವರ ಮೇಲೆ ಟೀಕೆಗಳು ಬರುವ ರೀತಿಯ ಸಾಲುಗಳು ಹಾಕಿಕೊಂಡು ಬಂದಿದ್ದರು ಚಹಲ್. ಈ ಬಗ್ಗೆ ಧನಶ್ರೀ ಶೋನಲ್ಲಿ ಮೌನ ಮುರಿದಿದ್ದಾರೆ. 'ನಮ್ಮ ಮಧ್ಯೆ ಏನೋ ಜಗಳ ಆಯಿತು, ಒಬ್ಬರು ಸಂಬಂಧ ಕೊನೆ ಮಾಡಿಕೊಳ್ಳೋಣ ಎಂದು ಹೇಳಿದರು ಎಂದಿಟ್ಟುಕೊಳ್ಳಿ. ಆ ಮಾತಿಗೆ ಬದ್ಧವಾಗಿರಬೇಕು. ಪ್ರತಿಯೊಬ್ಬರ ಕೈಯಲ್ಲಿ ತಮ್ಮದೇ ಆದ ಗೌರವವಿರುತ್ತದೆ. ನೀವು ಮದುವೆ ಆದ ಬಳಿಕ ಇನ್ನೊಬ್ಬ ವ್ಯಕ್ತಿಯ ಗೌರವವೂ ನಿಮ್ಮ ಕೈಯಲ್ಲಿರುತ್ತದೆ' ಎಂದಿದ್ದಾರೆ ಧನಶ್ರೀ. 'ನನಗೂ ಅಗೌರವ ಸೂಚಿಸಲು, ಅವಮಾನ ಮಾಡಲು ಬರುತ್ತಿತ್ತು. ಆದರೆ, ಅವರು ನನ್ನ ಪತಿ ಆಗಿದ್ದರು. ನಾನು ಮದುವೆ ಆದ ಬಳಿಕ ಅವರಿಗೆ ಗೌರವ ನೀಡಿದ್ದೆ. ಈಗಲೂ ನಾನು ಮದುವೆಯಾದ ವ್ಯಕ್ತಿಯನ್ನು ಗೌರವಿಸಬೇಕು' ಎಂದು ಧನಶ್ರೀ ವರ್ಮಾ ಹೇಳಿದರು. ಮತ್ತೆ ಪ್ರೀತಿಸಬೇಕು ಎಂಬ ಬಗ್ಗೆ ಅವರಿಗೆ ಆಸಕ್ತಿ ಉಳಿದಿಲ್ಲ. ಧನಶ್ರೀ ವರ್ಮ ಅವರ ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇದಕ್ಕೆ ಫ್ಯಾನ್ಸ್ ನಾನಾ ರೀತಿಯಲ್ಲಿ ಕಮೆಂಟ್ ಮಾಡುತ್ತಾ ಇದ್ದಾರೆ.

# ಹಾಂಗ್ ಕಾಂಗ್ ವಿರುದ್ಧ 94 ರನ್‌ಗಳಿಂದ ಗೆದ್ದ ಅಫ್ಘಾನಿಸ್ತಾನ



ಏಷ್ಯಾಕಪ್‌ನಲ್ಲಿ ಅಫ್ಘಾನಿಸ್ತಾನ ಮತ್ತು ಹಾಂಗ್ ಕಾಂಗ್ ನಡುವೆ ನಡೆದ ಟೂರ್ನಿಯ ಮೊದಲ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡ ಏಕಪಕ್ಷೀಯ ಗೆಲುವು ಸಾಧಿಸಿದೆ. 189 ರನ್‌ಗಳ ಗುರಿ ಬೆನ್ನಟ್ಟಿದ ಹಾಂಗ್ ಕಾಂಗ್ ತಂಡ 94 ರನ್ ಗಳಿಸಲಷ್ಟೇ ಶಕ್ತವಾಯಿತು. ಹಾಂಗ್ ಕಾಂಗ್ ತಂಡದ ಅರ್ಧದಷ್ಟು ಆಟಗಾರರು ಕೇವಲ 43 ರನ್‌ಗಳೊಂದಿಗೆ ಪೆವಿಲಿಯನ್ ಸೇರಿಕೊಂಡಿದ್ದಾರೆ. ಕಿಂಚಿನ್ ಶಾ ಕೇವಲ 6 ರನ್ ಗಳಿಸಿ ನೂರ್ ಅಹ್ಮದ್‌ಗೆ ಬಲಿಯಾದರು. ದೊಡ್ಡ ಸ್ಕೋರ್ ಬೆನ್ನಟ್ಟಲು ಬಂದ ಹಾಂಗ್ ಕಾಂಗ್ ತಂಡ ಮೂರನೇ ಓವರ್‌ನಲ್ಲಿಯೇ ತನ್ನ ಮೂರನೇ ವಿಕೆಟ್ ಕಳೆದುಕೊಂಡಿತು. ನಿಜಾಕತ್ ಖಾನ್ ಅವರನ್ನು 16 ರನ್‌ಗಳಿಗೆ ರಶೀದ್ ಖಾನ್ ರನ್ ಔಟ್ ಮಾಡಿದರು. ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 20 ಓವರ್‌ಗಳಲ್ಲಿ 6 ವಿಕೆಟ್‌ಗಳ ನಷ್ಟಕ್ಕೆ 188 ರನ್ ಗಳಿಸಿದೆ. ಅಂದರೆ ಹಾಂಗ್ ಕಾಂಗ್ ಗೆಲ್ಲಲು 189 ರನ್ ಗಳಿಸಲೇಬೇಕು. ತಂಡದ ಪರ ಸೆಡಿಕುಲ್ಲಾ ಅಟಲ್ ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿ 52 ಎಸೆತಗಳಲ್ಲಿ 73 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು.

ಸೇದಿಕುಲ್ಲಾ ಅಟಲ್ ಅದ್ಭುತವಾಗಿ ಬ್ಯಾಟಿಂಗ್ ಮಾಡುವ ಮೂಲಕ ತಮ್ಮ ಅರ್ಧಶತಕ ಪೂರೈಸಿದ್ದಾರೆ. ಅಟಲ್ 41 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದಾರೆ. ಅಟಲ್ 19 ಎಸೆತಗಳಲ್ಲಿ 27 ರನ್ ಗಳಿಸಿದ್ದಾರೆ. ಇನ್ನೊಂದು ತುದಿಯಿಂದ ಅವರಿಗೆ ಮೊಹಮ್ಮದ್ ನಬಿ ಅವರಿಂದ ಉತ್ತಮ ಬೆಂಬಲ ಸಿಗುತ್ತಿದೆ. ಅಫ್ಘಾನಿಸ್ತಾನ ಈಗ 50 ರನ್‌ಗಳ ಗಡಿ ದಾಟಿದೆ. ಜೀಶನ್ ಅಲಿ, ಬಾಬರ್ ಹಯಾತ್, ಅಂಶುಮಾನ್ ರಾತ್, ಕಲ್ಹನ್ ಚಲ್ಲು, ನಿಜಾಕತ್ ಖಾನ್, ಎಜಾಜ್ ಖಾನ್, ಕಿಂಚಿತ್ ಶಾ, ಯಾಸಿಮ್ ಮುರ್ತಾಜಾ (ನಾಯಕ), ಆಯುಷ್ ಶುಕ್ಲಾ, ಅತೀಕ್ ಇಕ್ಬಾಲ್, ಎಹ್ಸಾನ್ ಖಾನ್, ರಹಮಾನುಲ್ಲಾ ಗುರ್ಬಾಜ್, ಸೇದಿಕುಲ್ಲಾ ಅಟಲ್, ಇಬ್ರಾಹಿಂ ಜದ್ರಾನ್, ಗುಲ್ಬದಿನ್ ನೈಬ್, ಅಜ್ಮತುಲ್ಲಾ ಒಮರ್ಜಾಯ್, ಮೊಹಮ್ಮದ್ ನೈಬ್, ಕರೀಂ ಜನತ್, ರಶೀದ್ ಖಾನ್ (ನಾಯಕ), ನೂರ್ ಅಹ್ಮದ್, ಎಎಮ್ ಗಜನ್ಫರ್, ಫಜಲ್ಹಕ್ ಫಾರೂಕಿ. ಟಾಸ್ ಗೆದ್ದ ಅಫ್ಘನ್ ನಾಯಕ ರಶೀದ್ ಖಾನ್ ಮೊದಲು ಬ್ಯಾಟಿಂಗ್ ಆಯ್ದುಕೊಂಡಿದ್ದಾರೆ. ಏಷ್ಯಾಕಪ್‌ನಲ್ಲಿ ಅಫ್ಘಾನಿಸ್ತಾನ ಮತ್ತು ಹಾಂಗ್ ಕಾಂಗ್ ನಡುವೆ ನಡೆದ ಟೂರ್ನಿಯ ಮೊದಲ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡ ಏಕಪಕ್ಷೀಯ ಗೆಲುವು ಸಾಧಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ ತಂಡ ಹಾಂಗ್ ಕಾಂಗ್‌ಗೆ 189 ರನ್‌ಗಳ ಗುರಿಯನ್ನು ನೀಡಿತು. ಅಫ್ಘಾನಿಸ್ತಾನ 20 ಓವರ್‌ಗಳಲ್ಲಿ ಆರು ವಿಕೆಟ್‌ಗಳ ನಷ್ಟಕ್ಕೆ 188 ರನ್ ಗಳಿಸಿತು. ತಂಡದ ಪರ ಒಮರ್‌ಜೈ ಮತ್ತು ಸೆಡಿಕುಲ್ಲಾ ಅರ್ಧಶತಕದ ಇನ್ನಿಂಗ್ಸ್ ಆಡಿ ತಂಡವನ್ನು ಬೃಹತ್ ಮೊತ್ತಕ್ಕೆ ಕೊಂಡೊಯ್ದರು. ಈ ಗುರಿ ಬೆನ್ನಟ್ಟಿದ ಹಾಂಗ್ ಕಾಂಗ್ ತಂಡ ನಿಯಮಿತ ಅಂತರದಲ್ಲಿ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಹೀಗಾಗಿ ಒತ್ತಡಕ್ಕೊಳಗಾಗದ ತಂಡ 20 ಓವರ್‌ಗಳಲ್ಲಿ 100 ರನ್‌ಗಳನ್ನು ದಾಟಲು ಸಾಧ್ಯವಾಗದೆ 94 ರನ್‌ಗಳಿಂದ ಸೋಲೊಪ್ಪಿಕೊಂಡಿತು.

# ಪ್ರತಿ ಮ್ಯಾಚ್ ಟೀಮ್ ಇಂಡಿಯಾ ಆಟಗಾರರಿಗೆ ಅತ್ಯಂತ ಮುಖ್ಯ..

ಈ ಏಷ್ಯಾನ್ ಸಮರ ಟೀಮ್ ಇಂಡಿಯಾ ಪಾಲಿಗೆ ಮೋಸ್ಟ್ ಇಂಪಾರ್ಟೆಂಟ್ ಸಿರೀಸ್. ಇದು ಕೇವಲ ತಂಡಕ್ಕೆ, ಆಟಗಾರರಿಗೆ ಅಲ್ಲ, ಹೆಡ್ ಕೋಚ್ ಪಾಲಿಗೂ ಪ್ರತಿಷ್ಠೆಯ ಬ್ಯಾಟಲ್. ಅದ್ಯಾಕೆ ಏನ್ ಕಥೆ.

ಏಷ್ಯಾಕಪ್ ಬ್ಯಾಟಲ್‌ಗೆ ವೇದಿಕೆ ಸಜ್ಜಾಗಿದೆ. ಇಂದು ರಾತ್ರಿ 8 ಗಂಟೆಯಿಂದ ಯುಎಇನಲ್ಲಿ ಆರಂಭಗೊಳ್ಳಲಿರುವ ಏಷ್ಯಾನ್ ಕಲಿಗಳ ಕಾಳಗದಲ್ಲಿ ಕಿಂಗ್ ಯಾರ್ ಆಗ್ತಾರೆ ಎಂಬ ಕೌತುಕತೆಗೆ 28ರಂದು ತೆರೆ ಬೀಳಲಿದೆ. ಆದ್ರೆ, ಇದೇ ಏಷ್ಯಾಕಪ್ ಟೂರ್ನಿ ಟೀಮ್ ಇಂಡಿಯಾಗೆ ಅಗ್ನಿಪರೀಕ್ಷೆಯ ಕಣವಾಗಿದೆ. ಪ್ರತಿಷ್ಠೆಯ ಸಮರವಾಗಿದೆ. ಹಾಲಿ ಚಾಂಪಿಯನ್ಸ್ ಆಗಿ ಟೀಮ್ ಇಂಡಿಯಾಗೆ ಮಾತ್ರವಲ್ಲ, ವೈಯಕ್ತಿಕವಾಗಿಯೂ ಆಟಗಾರರ ಪಾಲಿಗೆ ಮೋಸ್ಟ್ ಇಂಪಾರ್ಟೆಂಟ್ ಟೂರ್ನಿ.

2023ರ ಏಷ್ಯಾಕಪ್‌ನಲ್ಲಿ ಟೀಮ್ ಇಂಡಿಯಾನೇ ಏಷ್ಯಾನ್ ಕಿಂಗ್ ಆಗಿ ಮೆರೆದಾಡಿತ್ತು. ಇದೀಗ ಹಾಲಿ ಚಾಂಪಿಯನ್ಸ್ ಆಗಿ ರಣರಂಗಕ್ಕಿಳಿಯುತ್ತಿರುವ ಟೀಮ್ ಇಂಡಿಯಾ, ಚಾಂಪಿಯನ್ ಪಟ್ಟ ಉಳಿಸಿಕೊಳ್ಳಬೇಕಾದ ಸವಾಲು ಇದೆ. ಇದು ಸಾಧ್ಯವಾಗಬೇಕಾದ್ರೆ, ಲೀಗ್ ಸ್ಟೇಜ್‌ಗಿಂತ ಸೂಪರ್-4 ಮ್ಯಾಚ್‌ಗಳಲ್ಲಿ ವೀರ ಯೋಧರಂತೆ ಹೋರಾಡಬೇಕಿದೆ.



ಮೋಸ್ಟ್ ಇಂಪಾರ್ಟೆಂಟ್ಲಿ ಪಾಕಿಸ್ತಾನ್, ಅಫ್ಘಾನಿಸ್ತಾನ್, ಬಾಂಗ್ಲಾ, ಶ್ರೀಲಂಕಾ ತಂಡಗಳನ್ನು ಹಗುರವಾಗಿ ಪರಿಗಣಿಸಲೇಬಾರದು. ಇಲ್ಲ ಚಾಂಪಿಯನ್ ಆಗಿ ಉಳಿಯುವುದು ಕಷ್ಟ. 2026ರ ಟಿ20 ವಿಶ್ವಕಪ್ ಪ್ರಿಪರೇಷನ್‌ಗೆ ಪಕ್ಕಾ ವೇದಿಕೆ ಅಂದ್ರೆ, ಅದು ಏಷ್ಯಾಕಪ್ ಅನ್ನೋದ್ರಲ್ಲಿ ಡೌಟೇ ಇಲ್ಲ. ಐಸಿಸಿ ಟೂರ್ನಿಯ ಭಾಗವಾಗಿ ಆಟಗಾರರ ಆತ್ಮವಿಶ್ವಾಸ ಹೆಚ್ಚಿಸಲು, ಒತ್ತಡದಲ್ಲಿ ಆಡುವ ಕಲೆ ಕರಗತ ಮಾಡಿಕೊಳ್ಳಲು ಏಷ್ಯಾಕಪ್ ಟೂರ್ನಿಯೇ ಪ್ರಮುಖ. ಅಷ್ಟೇ ಅಲ್ಲ, ಮ್ಯಾಚ್ ವಿನ್ನಿಂಗ್ ಟೀಮ್ ಬೆಸ್ಟ್ ಟೀಮ್ ಕಾಂಬಿನೇಷನ್ ಸೆಟ್ ಮಾಡುವ ದೃಷ್ಟಿಯಿಂದ ಏಷ್ಯಾಕಪ್ ಮೋಸ್ಟ್ ಇಂಪಾರ್ಟೆಂಟ್. ಇದಲ್ಲಕ್ಕಿಂತ ಮಿಗಿಲಾಗಿ ಟ್ರೋಫಿ ಗೆಲ್ಲುವ ಹವ್ಯಾಸ ಬೆಳೆಸಿಕೊಳ್ಳಲು ಏಷ್ಯಾಕಪ್ ಗೆಲುವು ಬಹು ಮುಖ್ಯ. ಟಿ20 ಸರಣಿಗಳಲ್ಲಿ ಸೋಲಿಲ್ಲದ ಸರದಾರ ಸೂರ್ಯಕುಮಾರ್. ನಾಯಕನಾಗಿ ಇದುವರೆಗೆ ಟಿ20 ಸರಣಿಗಳಲ್ಲಿ ಸೋಲನ್ನೇ ಕಾಣದ ಸೂರ್ಯನಿಗೆ, ಈಗ ಏಷ್ಯಾಕಪ್ ಬಿಗೆಸ್ಟ್ ಟೂರ್ನಮೆಂಟ್. ಹೀಗಾಗಿ ಸೂರ್ಯ ನಾಯಕತ್ವಕ್ಕೆ ಮೊದಲ ಅಗ್ನಿಪರೀಕ್ಷೆಯ ಕಣವಾಗಿದೆ. ಟಿ20 ಸರಣಿಗಳಲ್ಲಿ ಸೋಲಿಲ್ಲದ ಸರದಾರ ಸೂರ್ಯ, ಏಷ್ಯಾನ್ ಸಮರದಲ್ಲಿ ಗೆಲುವಿನ ನಾಗಲೋಟ ಮುಂದುವರಿಸಬೇಕಿದೆ. ಟ್ರೋಫಿ ಗೆಲ್ಲಬೇಕಿದೆ.

# ಕುಂಬ್ಳೆ ಎದುರು ಕಣ್ಣೀರು ಇಟ್ಟಿದ್ದೆ..



2021ರ ಐಪಿಎಲ್ ಟೂರ್ನಿ ಅತ್ಯಂತ ವಿಚಿತ್ರ ಘಟನೆಗೆ ಸಾಕ್ಷಿಯಾಗಿತ್ತು. ಯುನಿವರ್ಸಲ್ ಬಾಸ್ ಕ್ರಿಸ್ ಗೇಲ್ ಇದ್ದಕ್ಕಿದ್ದಂತೆ ಪಂಜಾಬ್ ತೊರೆದಿದ್ರು. ಇದ್ರೊಂದಿಗೆ ಗೇಲ್ ಐಪಿಎಲ್ ಕರಿಯರ್ ಎಂಡ್ ಆಯ್ತು. ಅಂದು ಟೂರ್ನಿಯ ಮಧ್ಯೆ ತಂಡ ತೊರೆದಿದ್ರ ಹಿಂದಿನ ಸತ್ಯವನ್ನ ಇದೀಗ ಗೇಲ್ ರಿವೀಲ್ ಮಾಡಿದ್ದಾರೆ. ಕ್ರಿಸ್ಟೋಫರ್ ಹೆನ್ರಿ ಗೇಲ್ ಅಲಿಯಾಸ್ ಕ್ರಿಸ್ ಗೇಲ್. ದಶಕಕ್ಕೂ ಹೆಚ್ಚು ಕಾಲ ಕ್ರಿಕೆಟ್ ಲೋಕವನ್ನ ತನ್ನದೇ ಶೈಲಿಯಲ್ಲಿ ಆಳಿದ ಗೇಲ್‌ಗೆ ವಿಶ್ವಾದ್ಯಂತ ಸಪರೇಟ್ ಫ್ಯಾನ್ ಬೇಸ್‌ಯಿದೆ. ಟಿ20 ಕ್ರಿಕೆಟ್‌ನಲ್ಲಂತೂ ಈತನನ್ನ ಮೀರಿಸೋ ಮತ್ತೊಬ್ಬ ಮಾಸ್ ಎಂಟರ್‌ಟೈನರ್ ಬಂದಿಲ್ಲ ಬಿಡಿ. ಕ್ರಿಸ್‌ನಲ್ಲಿ ನಿಂತು ಈ ದೈತ್ಯ ಬೌಂಡರಿ, ಸಿಕ್ಸರ್ ಸುರಿಮಳೆ ಸುರಿಸುತ್ತಿದ್ದರೆ ಸ್ಟ್ಯಾಂಡ್‌ನಲ್ಲಿ ಫ್ಯಾನ್ಸ್ ಹುಚ್ಚೆದ್ದು ಕುಣೀತಿದ್ರು. ಸಪ್ತ ಸಾಗರದಾಚೆ ಇರೋ ಜಮೈಕಾದಿಂದ ಹಿಡಿದು ನಮ್ಮ ಬೆಂಗಳೂರುವರೆಗೂ ಕ್ರಿಸ್‌ಗೇಲ್ ನಂಟಿದೆ.

ಕ್ರಿಕೆಟ್ ಲೋಕದ ರಿಯಲ್ ಎಂಟರ್‌ಟೈನರ್ ಎನಿಸಿದ್ದ ಕ್ರಿಸ್‌ಗೇಲ್ ಐಪಿಎಲ್ ಕರಿಯರ್ ವಿಚಿತ್ರ ರೀತಿಯಲ್ಲಿ ಅಂತ್ಯವಾಯ್ತು. 2021ರ ಐಪಿಎಲ್ ಟೂರ್ನಿಯ ಮಧ್ಯದಲ್ಲೇ ಗೇಲ್ ಪಂಜಾಬ್ ತಂಡವನ್ನ ತೊರೆದ್ರು. ಗೇಲ್ ತಂಡ ತೊರೆದಿದ್ದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿತ್ತು. ಈ ವಿಚಾರದಲ್ಲಿ ಮೊದಲ ಬಾರಿ ಮಾತನಾಡಿರೋ ಕ್ರಿಸ್ ಗೇಲ್ ಹೊಸ ಬಾಂಬ್ ಸಿಡಿಸಿದ್ದಾರೆ. ಸಂದರ್ಶನವೊಂದರಲ್ಲಿ ಇದೇ ಮೊದಲ ಬಾರಿಗೆ ಐಪಿಎಲ್ ಕರಿಯರ್ ವಿಚಿತ್ರ ಅಂತ್ಯ ಕಂಡಿದ್ರ ಬಗ್ಗೆ ಗೇಲ್ ಮಾಡಿದ್ದಾರೆ. ಕಿಂಗ್ಸ್ ಇಲೆವೆನ್ ಪಂಜಾಬ್ ಫ್ರಾಂಚೈಸಿ ಹಾಗೂ ತಂಡದ ಹೆಡ್ ಕೋಚ್ ಅನಿಲ್ ಕುಂಬ್ಳೆ ಮೇಲೆ ಗಂಭೀರ ಆರೋಪ ಮಾಡಿದ್ದಾರೆ. ಐಪಿಎಲ್ ಕ್ರಿಕೆಟ್ ಕರಿಯರ್ ಅಂತ್ಯವಾಗೋಕೆ ಇವರೇ ಕಾರಣ ನೇರಾ ನೇರವಾಗಿ ಹೇಳಿಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966